ಬ್ರಹ್ಮಾವರ ಸೀರಿಯನ್ ಸಭೆಯ

13 - 10 - 1951

# ಸಂಕ್ಷಿಪ್ತ ಇತಿಹಾಸ

1938.

ರೆವರೆಂಡ್ ಫಾದರ್ ಪಿ. ಜೆ. ಕೋಶಿ,
ವಿಕಾರ್, ಸೀರಿಯನ್ ಚರ್ಚ್, ಬ್ರಹ್ಮಾವರ

# ಉಪೋದ್ಘಾತ

ಮಲಬಾರಿನ ವಿ. ತೋಮಸ್ ಮೆಥ್ಯೂ ಎಂಬವರು ಇಂಗ್ಲಿಷಿನಲ್ಲಿ ಮಲಬಾರು ಸೀರಿಯನ್ ಇಗರ್ಜಿಯ ವಿಚಾರವಾಗಿ ಬರೆದ ಪುಸ್ತಕವನ್ನು ಫಾ. ಮೆಥ್ಯೂ ಎಂಬವರು ಕನ್ನಡಕ್ಕೆ ಭಾಷಾಂತರಿಸಿ " ಮಲಬಾರಿನ ಸೀರಿಯನ್ ಇಗರ್ಜಿ " ಎಂಬ ಪುಸ್ತಕವನ್ನು ಪ್ರಕಟಿಸಿರುವರು. ಆದರೆ ಸೀರಿಯನ್ ಇಗರ್ಜಿಯ ವಿಚಾರ ಇಷ್ಟು ತತ್ಪರರಾಗಿದ್ದಂತೆ ತೋರಿಸಿಕೊಂಡ ಈ ಪ್ರಕಾಶಕರು ಈಗ ಎಲ್ಲಿದ್ದಾರೆಂಬ ವಿಚಾರವು ಯಾರಿಗೂ ತಿಳಿದಿಲ್ಲ. ಇವರು ಈ ಪುಸ್ತಕವನ್ನು ಬ್ರಹ್ಮಾವರ ಸೀರಿಯನ್ ಕ್ರೈಸ್ತರಿಗಾಗಿ ಭಾಷಾಂತರಿಸಿದರು. ಮಲಬಾರಿನಲ್ಲಿ ವಿಕ್ರಯವಾಗದಿರುವ ಈ ಸೊತ್ತನ್ನು ಬ್ರಹ್ಮಾವರದ ಮಾರ್ಕೇಟಿನಲ್ಲಿ ವಿಕ್ರಯಿಸುವ ಉದ್ದೇಶದಿಂದ ಬಂದ ಈ ಮಹನೀಯರಿಗೆ ಇಲ್ಲಿಯೂ ಇದರ ವಿಕ್ರಯವು ಅಸಾಧ್ಯವೆಂದು ತೋರಿರಬಹುದು. ಅವರ ಗ್ರಂಥದಲ್ಲಿ ಬರೆದಿರುವ ವಿಷಯಗಳು ನಿರಾಧಾರವಾದವುಗಳೆಂಬುದನ್ನು ಕಿಂಚಿತ್ತಾದರೂ ಬುದ್ಧಿ ಶಕ್ತಿಯುಳ್ಳ ವಿಮರ್ಶಕರು ಇವೆರಡು ಗ್ರಂಥಗಳ ಪಠನದಿಂದ ಸರಿಯಾಗಿ ಮನಗಾಣದಿರರು. ಸತ್ಯಾನ್ವೇಷಿಗಳಿಗೆ ಈ ನಮ್ಮ ಚಿಕ್ಕ ಗ್ರಂಥದಲ್ಲಿ ಉಲ್ಲೇಖವಾಗಿರುವ ಸತ್ಯಗಳು ತೀರಾ ಸಾಕಾಗಿವೆ. ಹಾಗಾಗದೆ, ಸ್ವಾರ್ಥ ವ ದುರುದ್ದೇಶಗಳಿಗೆ ಒಳಗಾಗಿರುವವರಿಗೆ ಯಾವ ರುಜುವಾತು ವ ಆಧಾರಗಳು ಪ್ರಯೋಜನಕ್ಕೆ ಬರುವಂತಿಲ್ಲ. ಬ್ರಹ್ಮಾವರ ಸೀರಿಯನ್ ಮತಾವಲಂಬಿಗಳು ಕಳೆದ ಐವತ್ತು ವರ್ಷಗಳಿಂದಲೂ ನಿರಂತರ ಬಲವತ್ತರವಾದ ಪ್ರತಿಕೂಲದ ಶಕ್ತಿಯೊಡನೆ ಕಾದುತ್ತ ಬಂದಿರುವರು. ಕಡುಬಡವರಾದ ಈ ಜನರು ಇಂತಹ ಶಕ್ತಿಗೆದುರಾಗಿ ಕಾದು ಸ್ವಕೀಯ ಸ್ಥಾನವನ್ನು ರಕ್ಷಿಸಿಕೊಂಡಿರುವುದು ದೈವಾನುಗ್ರಹದಿಂದಲ್ಲದೆ ಅವರ ಶಾರೀರಿಕ ವ ಆರ್ಥಿಕ ಸಾಮರ್ಥ್ಯದಿಂದಲ್ಲ. ಈ ಇಗರ್ಜಿಯ ಸ್ಥಾಪಕರಾದ ಬಿಶೋಪ ಅಲ್ವರಿಸ್, ರೆ. ಫಾ. ನೊರೊಞ್ಞಾ ಮೊದಲಾದ ಮಹನೀಯರು ತೋರಿಸಿಕೊಟ್ಟಿರುವ ಸನ್ಮಾರ್ಗದಲ್ಲಿ ನಡೆಯುವುದರಿಂದಲೇ ನಮ್ಮ ಶ್ರೇಯಸ್ಸಿದೆ. ಇದೇ ನನ್ನ ಆಶೆ. ನನ್ನನ್ನು ಇಲ್ಲಿ ಸ್ಥಾಪಿಸಿದವರು ಬಿಶೋಪ್ ಅಲ್ವರೀಸರು. ಅವರ ಉದ್ದೇಶಕ್ಕನುಸಾರವಾಗಿ ನಡೆಯುವದೇ ನನ್ನ ಧರ್ಮ ಮತ್ತು ಕರ್ತವ್ಯ. ಈ ಇಗರ್ಜಿಗೆ ಸಂಬಂಧಿಸಿರುವ ಈಗಿನ ಜನರು ವ ಅವರ ಹಿರಿಯರು ಇದರ ಸ್ಥಾಪನೆಗೆ ವ ಅಭಿವೃದ್ಧಿಗೆ ಕಾರಣರಾದ ಮೇಲೆ ಹೇಳಿದ ಮಹನೀಯರೊಡನೆ ಸಹಕರಿಸಿ ವಿಶೇಷ ಪರಿಶ್ರಮಗಳನ್ನು ಅನುಭವಿಸಿದವರೇ ಆಗಿರುತ್ತಾರೆ. ಇತ್ತೀಚೆ ದುರುದ್ದೇಶದಿಂದ ಪ್ರಯುಕ್ತಿಸುವ ಕೆಲವು ಮಾತುಗಳಿಗೆ ಮರುಳಾಗಿ ನಮ್ಮಲ್ಲಿ ಕೆಲವರು ಕರ್ತವ್ಯ ಭ್ರಷ್ಟರಾಗುವುದು ತೀರಾ ಶೋಚನೀಯವಾಗಿದೆ. ಆದರೆ ದೇವಾಲಯದ ನಾಶವು ಮನುಷ್ಯ ಮಾತ್ರರಿಗೆ ಸಾಧ್ಯವಲ್ಲ. ಹೀಗಿರುತ್ತಾ ಅದರ ನಾಶಕ್ಕಾಗಿ ಹೊರಟ ಜನರು ತಮ್ಮ ನಾಶಕ್ಕೇನೇ ಗುರಿಯಾಗುವುದರಲ್ಲಿ ಅನುಮಾನವಿಲ್ಲ. ಆದುದರಿಂದ ನನ್ನ ಈ ಚಿಕ್ಕ ಸೇವಾರೂಪವಾದ ಗ್ರಂಥವನ್ನು ಮನನ ಮಾಡಿದ ಮೇಲೆ ಜನರು ಇನ್ನಾದರೂ ಅಂತಃಕಲಹಗಳಿಗೆ ಎಡೆಗೊಟ್ಟು ತಮ್ಮ ಬಲ ಸಾಮರ್ಥ್ಯಗಳನ್ನು ಕುಂದಿಸಿಕೊಳ್ಳದೆ ಕರ್ತವ್ಯ ತತ್ಪರರೂ, ಸ್ವಾಮಿನಿಷ್ಠರೂ, ಧರ್ಮಾವಲಂಬಿಗಳೂ ಆಗಿ ಶ್ರೇಯೋಭಿವೃದ್ಧಿಯನ್ನು ಹೊಂದಲೆಂಬುದೇ ನನ್ನ ಹೃತ್ಪೂರ್ವಕವಾದ ಆಕಾಂಕ್ಷೆ.

ಫಾದರ್ ಕೋಟಿ.

# ಶುದ್ಧಾಶುದ್ಧ ಪತ್ರಿಕೆ.

| ಪುಟ. | ಪಙ್ಕ್ತಿ. | ಅಶುದ್ಧ. | ಶುದ್ಧ. |
|---|---|---|---|
| 4 | 12 | ಕ್ರಿ. ಶ. 860 | ಕ್ರಿ. ಶ. 1860 |
| 6 | 9 | ಪತ್ರಿಯಾರ್ಕರ್ನನು | ಪತ್ರಿಯಾರ್ಕರನ್ನು |
| 7 | 9 | ಕಾರಣಗಳಪ್ಪೇ | ಕಾರಣಗಳೇ |
| 8 | 10 | ಡೆಯಾರ್ಬಕಲ್ | ಡೆಯಾರ್ಬಕರ್ |
| 16 | 2 | ನಿಶಯೆ | ನಿಶ್ಚೇಯು |
| 21 | 31 | ಇದ್ದಂತೆ | ಇದ್ದ |
| 25 | 17 | ತೂರಬ್ದೀನ್‌ನಲ್ಲ | ತೂರಬ್ದೀನ್‌ನಲ್ಲಿ |
| 26 | 17 | ಪತ್ರಿಯಾರ್ಕರಿಗೆದುರಾಗಿ | ಅಬ್ದುಲ್ಲರಿಗೆದುರಾಗಿ |
| 26 | 26 | ಪತ್ರಿಯಾರ್ಕರಿಗೆ | ಅಬ್ದುಲ್ಲರಿಗೆ |
| 28 | 2 | ಅಶ್ಚರ್ಯವೂ | ಆಶ್ಚರ್ಯವೂ |
| 28 | 28 | ಬಿಟ್ಟುಕೊಟ್ಟದೆ | ಬಿಟ್ಟುಕೊಟ್ಟರೆ |



ನೊರಾನ್ [illegible] ಅಬ್ದುಲ್ ಮೆಸ್ಸಿಯಾ.
(ಅಂತಿಯೋಕದ ಪತ್ರಿಯಾರ್ಕರು.)



ಪೊರಾನ್ ಮಾರ್ ಬಸೇಲಿಯೋಸ್ ಗೀವರುಗೀಸ್.
(ಈಗಿನ ಪೌರ್ವಾತ್ಯ ಸಭೆಯ ಕಥೋಲಿಕೋಸರು.)

# ಬ್ರಹ್ಮಾವರ ಸೀರಿಯಸ್ ಸಭೆಯ ಸಂಕ್ಷಿಪ್ತ ಇತಿಹಾಸ.

## ಕ್ರೈಸ್ತ ಸಭೆಯ ಉದ್ಭವ.

ಪೂರ್ವಕಾಲದಲ್ಲಿ ಕ್ರೈಸ್ತರಿಗೆ ವಿಶ್ವಾಸಿಗಳೆಂಬ ಹೆಸರಿದ್ದಿತು (ಅಪೋ. ಕೃತ್ಯಗಳು XIV 32., X 46., XV 5.)

ಅನಂತರ ಅಂತಿಯೋಕ ಪಟ್ಟಣವಲ್ಲಿ ಯೇಸುಕ್ರಿಸ್ತನ ಧರ್ಮವನ್ನು ಕೈಕೊಂಡವರಿಗೆ ಕ್ರೈಸ್ತರೆಂಬ ಹೆಸರು ಬಂದಿತು.

ಯೆರುಸಲೇಮ್, ಮತ್ತು ಪಾಲೆಸ್ತೀನ್ ಎಂಬ ಊರುಗಳಿಂದ ಕ್ರೈಸ್ತಮತವು ಪಾಶ್ಚಾತ್ಯ ಊರುಗಳಿಗೆ ಸಾಗಿತು.

ರಾಜ್ಯಾದಳಿತೆಯಲ್ಲಿ ಪಾಶ್ಚಾತ್ಯ ಊರುಗಳಿಗೂ, ಪೌರ್ವಾತ್ಯ ಊರುಗಳಿಗೂ ವ್ಯತ್ಯಾಸಗಳಿದ್ದ ಕಾರಣ ಕ್ರೈಸ್ತಮತದ ಪಂಥದಲ್ಲಿಯೂ ಕೂಡ ಕೆಲವು ವ್ಯತ್ಯಾಸಗಳು ಬಂದುವು. ಪಾಶ್ಚಾತ್ಯ ರಾಜ್ಯಗಳಿಗೆ ಸರಕಾರದ ಅಧಿಕಾರವೂ, ಬಲವೂ ಹೆಚ್ಚಿದ್ದ ಕಾರಣ (ರೋಮನ್ ಸಾಮ್ರಾಜ್ಯ) ಶಾಸ್ತ್ರಸಮ್ಮಂಧಗಳಲ್ಲಿಯೂ ಕೂಡ ಬಲಾತ್ಕಾರವನ್ನು ಉಪಯೋಗಿಸಿದರು.

ಆ ಕಾಲದಲ್ಲಿ 'ಕೊನ್ಸ್ಟಂಟ್ಯಾನ್' ಎಂಬ ರಾಜನು ರೋಮನ್‌ಸಾಮ್ರಾಜ್ಯವನ್ನು ಆಳುತ್ತಿದ್ದನು. ಈ ಚಕ್ರವರ್ತಿಯ ಕಾಲದ ವರೆಗೂ ರೋಮನ್ ಸರಕಾರವು ಕ್ರೈಸ್ತ ವಿಶ್ವಾಸಿಗಳಿಗೆ ನಾನಾತರದ ಹಿಂಸೆಗಳನ್ನು ಕೊಡುತ್ತಿದ್ದಿತು. ನಾಲ್ಕನೆಯ ಶತಮಾನದಲ್ಲಿ ರೋಮನ್ ಚಕ್ರವರ್ತಿಯಾದ ಕೊನ್ಸ್ಟಂಟ್ಯಾನ್ ಎಂಬವನು ಕ್ರೈಸ್ತಮತವನ್ನು ಅವಲಂಬಿಸಿದನು. ಅನಂತರ ಕ್ರೈಸ್ತರಿಗೆ ಕೊಡುತ್ತಿದ್ದಂಥ ಹಿಂಸೆಗಳೆಲ್ಲವೂ ನಿಂತು, ರಾಜನ ಸಹಾಯದಿಂದ ಕ್ರೈಸ್ತಮತವು ಅಭಿವೃದ್ಧಿಯಾಗುತ್ತ ಬಂತು. ಈ ಸಮಯದಲ್ಲಿ 'ಎರಿಯಸ್' ಎಂಬೊಬ್ಬ ಮತವಿರೋಧಿಯು ಯೇಸುಕ್ರಿಸ್ತನ ಶಾಸ್ತ್ರಕ್ಕೆ ವಿರುದ್ಧವಾಗಿ ಕಲಿಸಲು ಪ್ರಾರಂಭಿಸಿದನು. ಈ ಸಮಯದಿಂದ ಕ್ರೈಸ್ತ ಸಭೆಯಲ್ಲಿ ವಿಭಾಗಗಳು ಉಂಟಾದುವು. ಈ ಕಾರಣದಿಂದ ಕೊನ್ಸ್ಟಂಟ್ಯಾನ್ ಚಕ್ರವರ್ತಿಯು ಸಾರ್ವತ್ರಿಕ ಸಭೆಯೊಂದನ್ನು ಸೇರಿಸಿದನು. ಈ ಸಭೆಯಲ್ಲಿ ಎರಿಯಸನು ಕಲಿಸಿದಂಥ ಮತದ ದೋಷಗಳ (Heresy) ಕುರಿತು ಆಲೋಚಿಸಿ, ಅದನ್ನು ಅಣಗಿಸಲು ಪ್ರಯತ್ನಿಸಬೇಕೆಂದು ತಕ್ಕ ವ್ಯವಸ್ಥೆಯನ್ನು ಮಾಡಿದರು.

ಕ್ರಿ. ಶ. 325ನೇ ವರ್ಷದಲ್ಲಿ ನಿಶೇಯ ಎಂಬಲ್ಲಿ ಒಂದು ಸಿನಡು ಕೂಡಿತು. ಈ ಸಭೆಯಲ್ಲಿ 31೮ ಬಿಶೋಪರು ಹಾಜರಿದ್ದರು. ಕೊನ್ಸ್ಟಂಟ್ಯಾನ್ ಚಕ್ರವರ್ತಿಯು ಕ್ರೈಸ್ತಸಭೆಯ ಎಲ್ಲಾ ಊರುಗಳ ಅಧಿಕಾರಿಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿ

ಸಿದ್ದರು. ಈ ಸಭೆಯಲ್ಲಿ 'ಮಾರ್‌ಜೋನ್' ಎಂಬ ಬಿಶೋಪರು ಪರ್ಶಿಯಾ ಮತ್ತು ಇಂಡಿಯಾ ಎಂಬ ಊರುಗಳ ಬಿಶೋಪರು ತಾನೆಂದು ಹೇಳಿ ದಸ್ಕತು ಮಾಡಿರುವರು. ಈ ನಿಶೇಯದ ಸಿನಡಿನಲ್ಲಿ ಮಂಜೂರು ಮಾಡಿದ ಕೆಲವು ಠರಾವುಗಳಿದ್ದುವು.

ಅಂತಿಯೋಕದ ಪತ್ರಿಯಾರ್ಕರ ಆಡಳಿತೆಯ ಕೆಳಗೆ ತುಂಬಾ ಇಗರ್ಜಿಗಳು ಇದ್ದ ಕಾರಣ, ಪತ್ರಿಯಾರ್ಕರಿಗೆ ಅವುಗಳ ಆಡಳಿತೆಯನ್ನು ನೋಡಿಕೊಳ್ಳಲು ಕಷ್ಟಕರವಾಗಿ ತೋರಿತು. ಆದುದರಿಂದ ಅವುಗಳನ್ನು ಎರಡು ವಿಭಾಗಗಳಾಗಿ ಮಾಡಿದರು. ಪಶ್ಚಿಮ ದಿಕ್ಕಿನಲ್ಲಿರುವ ಇಗರ್ಜಿಗಳ ಆಡಳಿತೆಯನ್ನು ಪತ್ರಿಯಾರ್ಕರು ನೋಡಿಕೊಳ್ಳುವ ಹಾಗೂ, ಪೂರ್ವದಿಕ್ಕಿನಲ್ಲಿರುವ ಇಗರ್ಜಿಗಳ ಆಡಳಿತೆಯನ್ನು ನೋಡಿಕೊಳ್ಳಲು ಕಥೋಲಿಕೋಸ್ ಎಂಬವರೊಬ್ಬರನ್ನೂ ನೇಮಿಸಲು ನಿಶೇಯ ಸಿನಡಿನಲ್ಲಿ ಮಂಜೂರಾಯಿತು. ಕಥೋಲಿಕೋಸರಿಗೆ ಪತ್ರಿಯಾರ್ಕರ ಅಧಿಕಾರಗಳಷ್ಟೇ ಅಧಿಕಾರಗಳು ಕೊಡಲ್ಪಟ್ಟುವು. ಸೆಲೂಕ್ಯ ಎಂಬಲ್ಲಿ ಮೊದಲನೇ ಕಥೋಲಿಕೋಸರನ್ನು ನೇಮಿಸಿದರು. ಇವರ ಕೈ ಕೆಳಗೆ ಪರ್ಶಿಯಾ, ಅಫಘಾನಿಸ್ಥಾನ, ಇಂಡಿಯಾ ಮೊದಲಾದ ಪ್ರಾಂತ್ಯಗಳು ಇರಬೇಕೆಂದು ನಿರ್ಣಯವಾಯಿತು. ನಿಶೇಯ ಸಿನಡಿನ ಠರಾವುಗಳಲ್ಲಿ ಅಂತಿಯೋಕದ ಪತ್ರಿಯಾರ್ಕರೂ, ಸೆಲೂಕ್ಯ ಊರಿನ ಕಥೋಲಿಕೋಸರೂ ಸರಿಸಮಾದ ಅಧಿಕಾರವುಳ್ಳವರಾಗಬೇಕೆಂದೂ, ಪತ್ರಿಯಾರ್ಕರು ಕಥೋಲಿಕೋಸರ ಗಡಿಯೊಳಗೆ ಪ್ರವೇಶಿಸಿ ಅಧಿಕಾರ ನಡಿಸಬಾರದೆಂದೂ, ಕಥೋಲಿಕೋಸರು ಪತ್ರಿಯಾರ್ಕರ ಆಡಳಿತೆಯೊಳಗಿನ ಗಡಿಯೊಳಗೆ ಪ್ರವೇಶಿಸಿ ಅಧಿಕಾರ ನಡಿಸಬಾರದೆಂದೂ ಕೂಡ ನಿರ್ಣಯವಾಯಿತು. ಮಾತ್ರವಲ್ಲದೆ ಕಥೋಲಿಕೋಸರ ಮರಣಾನಂತರ ಪತ್ರಿಯಾರ್ಕರು ಇದ್ದು ಇನ್ನೊಬ್ಬರನ್ನು ಕಥೋಲಿಕೋಸರನ್ನಾಗಿ ಮಾಡಬೇಕೆಂದೂ, ಪತ್ರಿಯಾರ್ಕರ ಮರಣಾನಂತರ ಕಥೋಲಿಕೋಸರಿದ್ದು ಇನ್ನೊಬ್ಬರನ್ನು ಪತ್ರಿಯಾರ್ಕರಾಗಿ ನೇಮಿಸಬೇಕೆಂದೂ ನಿರ್ಣಯವಾಯಿತು. ನಿಶೇಯ ಸಿನದು ಸೇರಿದ ನಂತರ ನಡೆದ ಕೆಲವು ಸಂಗತಿಗಳನ್ನು ವಾಚಕರಿಗೆ ತಿಳಿಸುವುದು ಆವಶ್ಯಕ.

ಕ್ರಿ. ಶ. 428ನೇ ಇಸವಿಯಲ್ಲಿ 'ನೆಸ್ತೋರ್'ಎಂಬವರು ಕೊನ್ಸ್ಟಾಂಟನೋಪಲಿನ ಪತ್ರಿಯಾರ್ಕರಾದರು. ಇವರು ಯೇಸುಕ್ರಿಸ್ತನ ತಾಯಿಯಾದ ಸಂತ ಮರಿಯಳ ಕುರಿತು ಭಿನ್ನಾಭಿಪ್ರಾಯವನ್ನು (Heresy) ಕಲಿಸಲು ಪ್ರಾರಂಭಿಸಿದರು. ಇದನ್ನು ಕೇಳಿಕೊಂಡು ಇತರ ಪತ್ರಿಯಾರ್ಕರೂ, ಬಿಶೋಪರೂ ಕೋಪಗೊಂಡರು ಕ್ರಿ. ಶ. 431ನೇ ವರ್ಷದಲ್ಲಿ 'ತೆವೊದೋಸಿಯುಸ್' ಎಂಬ ರಾಜನು ಎಫೇಸಸ್ ಎಂಬಲ್ಲಿ ಸಿನಡು ಕೂಡುವಂತೆ ಎಲ್ಲಾ ಕ್ರೈಸ್ತ ಸಭೆಯ ಮೇಲಧಿಕಾರಿಗಳಿಗೆ ಆಹ್ವಾನಪತ್ರಿಕೆಗಳನ್ನು ಕಳುಹಿಸಿದನು. ಈ ಸಿನಡಿನಲ್ಲಿ ನೆಸ್ತೋರ್ ಪತ್ರಿಯಾರ್ಕರನ್ನು ಮತವಿರೋಧಿಯೆಂದು ಕ್ರೈಸ್ತ ಸಭೆಯಿಂದ ಹೊರತಳ್ಳಿದರು. ನೆಸ್ತೋರಿನ ಮತದೂಷಣೆಯು ಊರಲ್ಲೆಲ್ಲಾ ತುಂಬಿತ್ತು. ಎರಡು ಪಂಗಡಗಳಲ್ಲಿಯೂ ಶಕ್ತಿವಂತರಾದ ಬಿಶೋಪರುಗಳು ಇದ್ದರು.



451ನೇ ಇಸವಿಯಲ್ಲಿ ತೆವೊದೋಸಿಯುಸ್ IIನೇ ಚಕ್ರವರ್ತಿಯು ಕ್ರೈಸ್ತಸಭೆಯಲ್ಲಿ ಬಿಕ್ಕಟ್ಟು ಉಂಟಾಗಬಹುದೆಂಬ ಭಯದಿಂದ ಎಫೇಸಸ್ ಎಂಬಲ್ಲಿ ಇನ್ನೊಂದು ಸಿನಡು ಕೂಡುವಂತೆ ಏರ್ಪಾಡು ಮಾಡಿದರು.

ಈ ಮಧ್ಯೆ 'ಯುಟಿಕಸ್' ಎಂಬೊಬ್ಬರು ನೆಸ್ತೋರಿನ ಮತ ದೂಷಣೆಗೆ ವಿರುದ್ಧವಾದ ಇನ್ನೊಂದು ಮತ ದೂಷಣೆಯನ್ನು ಕಲಿಸಲು ಪ್ರಾರಂಭಿಸಿದರು. ಮತ್ತು ಅವರು ಯೇಸುಕ್ರಿಸ್ತನಿಗೆ ಎರಡು ಸ್ವಭಾವಗಳಿದ್ದುವೆಂಬ ಮತದೂಷಣೆಯನ್ನೂ ಕಲಿಸಿದರು. ಈ ಕಾರಣಗಳಿಂದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಭೆಗಳು ಎರಡು ಆಗಲು ಕಾರಣವಾಯಿತು. ಎಷ್ಟು ಸಿನಡುಗಳು ಕೂಡಿದರೂ ಅವುಗಳಲ್ಲಿ ಎಲ್ಲರೂ ನಿಶೇಯದ ಸಿನಡಿನ ಠರಾವುಗಳನ್ನನುಸರಿಸಿ ನಡೆಯಬೇಕೆಂದೇ ನಿಶ್ಚಯಿಸಿದರು. ಇದರ ನಂತರ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಸಭೆಗಳು ಬೇರೆ ಬೇರೆ ಸಿನಡುಗಳನ್ನು ಸೇರಿಸಿ ಸಭೆಯ ಆಡಳಿತೆಯ ಕುರಿತು ಆಲೋಚಿಸುತ್ತಿದ್ದರು.

ಈ ಸಮಯದಲ್ಲಿ 'ಲಿಯೋ' ಎಂಬವರು ರೋಮದ ಬಿಶೋಪರಾಗಿದ್ದರು. ತೆವೊದೋಸಿಯುಸ್ IIನೇ ಚಕ್ರವರ್ತಿಯು ಎಫೇಸಸ್ ಎಂಬಲ್ಲಿ ಸೇರಿಸಿದ 2ನೇ ಸಿನಡಿಗೆ ರೋಮದ ಬಿಶೋಪರಾದ ಸದರೀ ಲಿಯೋ ಎಂಬವರು ತನ್ನ ಪ್ರತಿನಿಧಿಯ ಕೂಡೆ ಒಂದು ಪತ್ರವನ್ನು ಕಳುಹಿಸಿ ಕೊಟ್ಟರು. ಆದರೆ ಆ ಪತ್ರವನ್ನು ಸಭೆಯಲ್ಲಿದ್ದ ಇತರರು ಓದಲು ಬಿಡಲಿಲ್ಲ. ಇದಕ್ಕಾಗಿ ರೋಮದ ಬಿಶೋಪರು ಕೋಪಗೊಂಡು ಕೆಲ್ಸಿಡೋನ್ ಎಂಬಲ್ಲಿ ರೋಮದ ಚಕ್ರವರ್ತಿಯ ಸಹಾಯದಿಂದ ಒಂದು ಸಿನಡನ್ನು ಸೇರಿಸಿದರು. ಎಫೇಸಸ್ ಎಂಬಲ್ಲಿ ಕೂಡಿದ ಸಿನಡು ಪೌರ್ವಾತ್ಯ ಸಭೆಯ ಸಿನಡೆಂದೂ, ಕೆಲ್ಸಿಡೋನಿನಲ್ಲಿ ಕೂಡಿದುದು ಪಾಶ್ಚಾತ್ಯ ಸಭೆಯ ಸಿನಡೆಂದೂ ಹೇಳಲು ಪ್ರಾರಂಭಿಸಿದರು. ಒಂದು ಸಭೆಯ ಠರಾವುಗಳನ್ನು ಇನ್ನೊಂದು ಸಭೆಯವರು ಅಂಗೀಕರಿಸುತ್ತಿದ್ದಿರಲಿಲ್ಲ.

ಪಾಶ್ಚಾತ್ಯ ಸಭೆಯವರಿಗೆ ಅರಸರ ಸಹಾಯವು ಕೂಡ ಇದ್ದಿತು. ಸಿನಡು ಕೂಡುವ ಸಮಯದಲ್ಲಿ ಅರಸರು ತುಂಬಾ ಸಹಾಯವನ್ನುಮಾಡುತಿದ್ದರು. ಈರಾಜರು ಸಿನಡಿನ ಠರಾವುಗಳಿಗೆ ವಿರುದ್ಧವಾಗಿ ನಡೆಯುತ್ತಿರಲಿಲ್ಲ.

## ಕಥೋಲಿಕೋಸರ ಸ್ಥಾಪನೆ.

ಅಂತಿಯೋಕದ ಪತ್ರಿಯಾರ್ಕರಿಗೆ ತನ್ನ ಅಧೀನದಲ್ಲಿದ್ದ ಇಗರ್ಜಿಗಳ ಮೇಲ್ವಿಚಾರಣೆಯನ್ನು ನೋಡಲು ಕಷ್ಟತರವಾಗಿ ತೋರಿದುದರಿಂದ ತನ್ನಷ್ಟೇ ಅಧಿಕಾರವುಳ್ಳ ಇನ್ನೊಬ್ಬರನ್ನು ನೇಮಿಸಬೇಕಾಯಿತು. ಆದುದರಿಂದ [redacted] ನಿಶೇಯ ಸಭೆಯಲ್ಲಿ ಅಂತಿಯೋಕದ ಪತ್ರಿಯಾರ್ಕರ ಕೈಕೆಳಗಿದ್ದ ಇಗರ್ಜಿಗಳನ್ನು ಪಾಶ್ಚಾತ್ಯ

ಇಗರ್ಜಿಗಳೆಂದೂ, ಪೌರ್ವಾತ್ಯ ಇಗರ್ಜಿಗಳೆಂದೂ ವಿಭಾಗಿಸಿದರು. ಪಾಶ್ಚಾತ್ಯ ಇಗರ್ಜಿಗಳ ಮೇಲ್ವಿಚಾರಣೆಯನ್ನು ಪತ್ರಿಯಾರ್ಕರೇ ನೋಡಿಕೊಂಡಿದ್ದು, ಪೌರ್ವಾತ್ಯ ಇಗರ್ಜಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಬಗ್ಗೆ ಸೆಲೂಕ್ಯ ಎಂಬಲ್ಲಿ ಕಥೋಲಿಕೋಸ್ ಎಂಬವರನ್ನು ನೇಮಿಸಿದರು. ಈ ಕಥೋಲಿಕೋಸ್ ಎಂಬವರು ಪತ್ರಿಯಾರ್ಕರು ನಡೆಸುವಂತಹ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತಿದ್ದರು. ಕೆಲವು ಸಮಯದ ವರೆಗೆ ಕಥೋಲಿಕೋಸರು ಪತ್ರಿಯಾರ್ಕರಿಗೆ ಅಧೀನರಾಗಿದ್ದುಕೊಂಡು ಅನಂತರ ಸ್ವತಂತ್ರರಾಗಿಯೇ ಅಧಿಕಾರಗಳನ್ನು ನಡೆಸಿಕೊಂಡು ಬಂದರು. ಈ ಕಾಲದಲ್ಲಿ ಮಲಬಾರಿನ ನಮ್ಮ ಸೀರಿಯನ್ ಸಭೆಯು ಕಥೋಲಿಕೋಸರ ಕೈಕೆಳಗಿತ್ತಲ್ಲದೆ ಪತ್ರಿಯಾರ್ಕರ ಕೈಕೆಳಗಿರಲಿಲ್ಲ. (Hist. of E. M. Philip. P. 72)

ಕಾಲಕ್ರಮೇಣ ಮಹಮ್ಮದೀಯರು ಕ್ರೈಸ್ತರಿಗೆ ಹಿಂಸಿಸಲು ಪ್ರಾರಂಭಿಸಿದರು. ಈ ಕಾರಣದಿಂದ ಪೂರ್ವದಿಕ್ಕಿನ ಇಗರ್ಜಿಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂತು. ಆದುದರಿಂದ ಕ್ರಿ. ಶ. 860 ರ ನಂತರ ಕಥೋಲಿಕೋಸರ ಆಳ್ವಿಕೆಯು ನಿಂತಿತು. ಸೆಲೂಕ್ಯದಲ್ಲಿ ನಿಂತು ಹೋದಂಥ ಕಥೋಲಿಕೋಸರ ಅಧಿಕಾರವು ಮಲಬಾರಿಗೆ ದಯಮಾಡಿಸಬೇಕೆಂದು ಮಲಬಾರಿನ ಸೀರಿಯನ್ ಸಭೆಯವರು ಪ್ರಯತ್ನಿಸುತಿದ್ದರು. ಕಥೋಲಿಕೋಸರಿಗೆ ಇರುವಂತಹ ಅಧಿಕಾರಗಳ ಕುರಿತು ತಿರುವಾಂಕೂರು ಹೈಕೋರ್ಟಿನಲ್ಲಿ ಕಥೋಲಿಕೋಸ್ ಪಂಗಡದವರಿಗೂ ಪತ್ರಿಯಾರ್ಕರ ಪಂಗಡದವರಿಗೂ ನಡೆದಂಥ ವ್ಯಾಜ್ಯದ ತೀರ್ಮಾನದಲ್ಲಿ ತಿಳಿಸಿಯದೆ.

ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಅಂತಿಯೋಕದ ಪತ್ರಿಯಾರ್ಕರ ಸಿಂಹಾಸನದಲ್ಲಿದ್ದರೆಂದು ಸರ್ವರೂ ಒಪ್ಪಿಕೊಳ್ಳುವರು. ಆದರೆ, ಒಂದು ಸಿನಡು ಕೂಡಿ ಅವರನ್ನು ಪತ್ರಿಯಾರ್ಕರ ಸ್ಥಾನದಿಂದ ತಳ್ಳಿದರೆಂದು, ಆ ಸಿನಡಿನ ಕುರಿತು 1ನೇ ಪರಿಶಿಷ್ಟದಲ್ಲಿ ಹೇಳಿದೆಯೆಂದೂ "ಮಲಬಾರಿನ ಸೀರಿಯನ್ ಇಗರ್ಜಿ" ಯೆಂಬ ಪುಸ್ತಕದಲ್ಲಿ ತಿಳಿಸಿಯದೆ. ಆದರೆ ತಿರುವಾಂಕೂರು ಹೈಕೋರ್ಟಿನಲ್ಲಿ ಕಥೋಲಿಕೋಸ್ ಪಕ್ಷದವರಿಗೂ, ಪತ್ರಿಯಾರ್ಕರ ಪಕ್ಷದವರಿಗೂ ಇಷ್ಟು ದೊಡ್ಡ ವ್ಯಾಜ್ಯ ನಡೆಯುತಿದ್ದಂಥ ಸಮಯದಲ್ಲಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರನ್ನು ತಳ್ಳಿಹಾಕಿದ ಸಿನಡಿನ ಕುರಿತು ಸೂಚಿಸಿದ್ದಾಗಲೀ, ಮುಂದಕ್ಕೆ ತಂದದ್ದಾಗಲೀ ಇಲ್ಲವೇ ಇಲ್ಲ. ಸಿನಡಿನ ಕೋಪಿಯನ್ನು ಕೋರ್ಟಿನಲ್ಲಿ ಹಾಜರು ಪಡಿಸಿದ್ದೇ ಇಲ್ಲ. ನ್ಯಾಯಾಧಿಪತಿಗಳು ಕೂಡ ತಾನು ಕೊಟ್ಟ ತೀರ್ಪಿನಲ್ಲಿ "ಟರ್ಕಿಸುಲ್ತಾನನು ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಂದ ಅಧಿಕಾರ ಪತ್ರವನ್ನು (Firman) ಹಿಂತೆಗೆದರೆ"ಂದಲ್ಲದೆ ಸಿನಡು ಅವರನ್ನು ತಳ್ಳಿಹಾಕಿತೆಂದು ಹೇಳಿದ್ದೇ ಇಲ್ಲ. ಪತ್ರಿಯಾರ್ಕರ ಪಂಗಡದವರ ಹತ್ತಿರ ಸಿನಡು ನಡೆದುದರ ರುಜುವಾತುಗಳಿಲ್ಲವಿದ್ದರೆ ಅವರಾದರೂ ಎಲ್ಲಿಂದ ರುಜುವಾತುಗಳನ್ನು ತರಬೇಕು? ಮೇಲೆ ವಿವರಿಸಿದಂಥಹ ಸುಳ್ಳು ಸಿನಡಿನ ಕುರಿತು ಇಷ್ಟರವರಿಗೆ ಯಾರಿಗೂ ಗೊತ್ತಿರಲಿಲ್ಲ.



ಇನ್ನು ಸಿನಡಿನ ಠರಾವುಗಳ ಕುರಿತು ಕೊಂಚ ವಿಚಾರಿಸುವ:—

"ಮಲಬಾರಿನ ಸೀರಿಯನ್ ಇಗರ್ಜಿ" ಎಂಬ ಪುಸ್ತಕದ 6ನೇ ಪುಟದ 21ನೇ ಪಂಜ್ತಿಯಲ್ಲಿ "ಅಬ್ದುಲ್ ಮೆಸ್ಸಿಯರನ್ನು ತಳ್ಳಿಹಾಕಲು ಕೂಡಿದ ಸಿನಡು ಮೊಸೂಲಿನ ಮೆಟ್ರೊಪೊಲಿಟನರಾಗಿದ್ದ ಮಾರ್‌ದಿಯೊನಿಶಿಯಸ್ ಬೆಹನಾನ್ ಎಂಬವರನ್ನು ಆ ಸ್ಥಾನಕ್ಕೆ ಆಕ್ಟಿಂಗ್ ಪತ್ರಿಯಾರ್ಕರಾಗಿ ನೇಮಕಮಾಡಿದರೆಂದು ತಿಳಿಸುತ್ತದೆ". ಆದರೆ ಸಿನಡಿನ ಕುರಿತು ವಿಶದವಾಗಿ ತಿಳಿಸಿರುವ 1ನೇ ಪರಿಶಿಷ್ಟದಲ್ಲಿ "ಕುರಿಲೀಸ್ ಜೆರ್ಜಿಸ್‌ರು ಮಾರ್ಡಿನ್ನಿನ ಬಿಶೋಪ ಮತ್ತು ಆಕ್ಟಿಂಗ್ ಪತ್ರಿಯಾರ್ಕರೆಂದು" ಹೇಳಿಯದೆ. ಒಂದೇ ಸಮಯದಲ್ಲಿ ಇಬ್ಬರು ಆಕ್ಟಿಂಗ್ ಪತ್ರಿಯಾರ್ಕರಿರಲು ಕಾರಣವೇನು? ಇವರಲ್ಲಿ ಯಾರು ನಿಜವಾದ ಆಕ್ಟಿಂಗ್ ಪತ್ರಿಯಾರ್ಕರೆನ್ನಬೇಕು? ಇಷ್ಟು ಮಾತ್ರವಲ್ಲದೆ 'ತಿಮೋತಿಯೋಸ್ ಪೌಲೋಸ್ ಎಂಬವರು ಕೊನ್ಸ್ಟಾಂಟನೋಪಲಿನಲ್ಲಿ ಆಕ್ಟಿಂಗ್ ಪತ್ರಿಯಾರ್ಕರೆಂದು ಸಿನಡಿನ ವರದಿಗೆ ದಸ್ಕತು ಹಾಕಿದುದು ಸರ್ವರಿಗೂ ತಿಳಿದಿರುವುದು. ಈ ಆಕ್ಟಿಂಗ್ ಪತ್ರಿಯಾರ್ಕರು ಹೇಗೆ ಬಂದರು? ಇವರ್ಯಾರು? ಒಂದೇ ಕಾಲದಲ್ಲಿ ಮೂವರು ಆಕ್ಟಿಂಗ್ ಪತ್ರಿಯಾರ್ಕರು ಇರಲು ಕಾರಣವೇನು?

ಅದೇ ಪುಸ್ತಕದ 8ನೇ ಪುಟದಲ್ಲಿ ಹೇಳಿರುವ 'ದಿಯೊನಿಶಿಯಸ್ ಬೆಹನಾನ್' ಎಂಬ ಮೊಸೂಲಿನ ಮೆಟ್ರೊಪೊಲಿಟನರು ಮತ್ತು ಆಕ್ಟಿಂಗ್ ಪತ್ರಿಯಾರ್ಕರು ಸಿನಡಿನ ವರದಿಗೆ ದಸ್ಕತು ಮಾಡುವಾಗ ಹೇಳಿರುವುದೇನೆಂದರೆ— "ಪವಿತ್ರವಾದ ಸಿನಡು ಪಾಸ್ ಮಾಡು ವಂತಹ ಠರಾವುಗಳಿಗೆ ನಾನು ಶರಣಾಗತನಾಗುವೆನು" ಎಂದು ಪರಾ ಬರೆದು ದಸ್ಕತು ಹಾಕಿರುವರು. ಇವರೇ ನಿಜವಾದ ಆಕ್ಟಿಂಗ್ ಪತ್ರಿಯಾರ್ಕರಾದರೆ, ಎಲ್ಲರೂ ದಸ್ಕತು ಮಾಡಿದ ಮೇಲೆ ಇವರು ಪರಾ ಬರೆದು ದಸ್ಕತು ಹಾಕಿದುದರ ಅರ್ಥವೇನು? ಇದೇ ಪ್ರಕಾರ 4 ಬಿಶೋಪರು ಪರಾ ಬರೆದು ದಸ್ಕತು ಹಾಕಿದುದರ ಅರ್ಥವೇನು? ಸಿನಡು ಜರಗಿದ ನಂತರ ಸಿನಡಿನ ಠರಾವುಗಳನ್ನು ಪ್ರತಿಯೊಬ್ಬ ಬಿಶೋಪರ ಮನೆಗೆ ತೆಗೆದುಕೊಂಡುಹೋಗಿ ದಸ್ಕತು ಹಾಕಿಸಿದಂತೆ ತೋರಿಬರುವುದು. ಎರಡನೆದಾಗಿ ಸಿನಡನ್ನು ನಡಿಸಿದಂತಹ ಅಧ್ಯಕ್ಷರ ಹೆಸರೇ ಆ ಪುಟದಲ್ಲಿ ಕಾಣುವುದಿಲ್ಲ. ಅಧ್ಯಕ್ಷರಿಲ್ಲದ ಆ ಸಿನಡು ಯಾವ ವಿಧದ ಸಿನಡೆಂದು ತಿಳಿಯುವುದಿಲ್ಲ! ಯಾವ ಸಭೆಗಾಗಲೀ, ಸಿನಡಿಗಾಗಲೀ ಅಧ್ಯಕ್ಷರಿಲ್ಲದೆ ಕಾರ್ಯಕ್ರಮವನ್ನು ಮುಂದರಿಸಲು ಅಸಾಧ್ಯ. ಆದರೆ, ಮೇಲೆ ಹೇಳಿದಂತೆ ಸಿನಡಿಗೆ ಯಾವ ಅಧ್ಯಕ್ಷರ ಅಗತ್ಯವೂ ಕಾಣುವುದಿಲ್ಲ. ಮೂರನೆಯದಾಗಿ ಸ್ವಲ್ಪ ಸಮಯದ ನಂತರ ಪತ್ರಿಯಾರ್ಕರೆನ್ನಿಸಿಕೊಂಡ ಗ್ರೆಗೊರಿಯೋಸ್ ಅಬ್ದುಲ್ಲಾರವರ ದಸ್ಕತು ಅದರಲ್ಲಿ ಕಾಣುವುದಿಲ್ಲ. ಇದಕ್ಕೆ ಕಾರಣವೇನು? ಇವರು ಸಿನಡು ನಡೆಯುವ ಸಮಯ ಯಾವ ಲೋಕದಲ್ಲಿದ್ದರು? ಇವರ ಮನೆಗಾದರೂ ಹೋಗಿ ಇವರ ದಸ್ಕತು ಪಡೆಯಬಾರದಿತ್ತೇ? ಆದರೆ ಈ

ಕಾಲದಲ್ಲಿ ಅಬ್ದುಲ್ಲಾರವರು ಟರ್ಕಿಯ ಸುಲ್ತಾನನ ಬಳಿಗೆ ಹೋಗಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರ ಅಧಿಕಾರ ಪತ್ರ (Firman) ವನ್ನು ಹಿಂತೆಗೆಯಿಸಲು ಪ್ರಯತ್ನಿಸುತ್ತಿದ್ದರು. ಅಧಿಕಾರ ಪತ್ರವನ್ನು ಹಿಂತೆಗೆಯುವ ಆಲೋಚನೆಯನ್ನು ಮಾತ್ರವೇ ಮಾಡಿದರಲ್ಲದೆ, ಸಿನಡು ಕೂಡುವ ಆಲೋಚನೆ ಯಾರಿಗೂ ಕಂಡುಬರಲಿಲ್ಲ. ಸಾಧ್ಯವೂ ಇರಲಿಲ್ಲ.

ಇನ್ನು ಸಿನಡು ಮಂಜೂರು ಮಾಡಿದ ಠರಾವುಗಳ ಕುರಿತು ವಿಚಾರಿಸುವ:— ಒಂದನೇ ಮತ್ತು ಎರಡನೇ ಠರಾವುಗಳು ಬರೇ ನಾಚಿಕೆಗೇಡಾಗಿವೆ. ಇಂಥಹ ಕಾರಣಗಳಿಂದ ಪತ್ರಿಯಾರ್ಕರನ್ನು ತಳ್ಳಿಹಾಕುವುದಕ್ಕೆ ಸಾಧ್ಯವೇ ಇಲ್ಲ. ವಾಚಕರು ಕೂಡ ಪತ್ರಿಯಾರ್ಕರನ್ನು ಅವರ ಸ್ಥಾನದಿಂದ ತಳ್ಳಿಹಾಕಲು ಇವುಗಳು ತಕ್ಕ ಕಾರಣಗಳೋ ಎಂಬುದನ್ನು ಆಲೋಚಿಸಿರಿ.

ಮೂರನೆಯ ಕಾರಣವು ಯಾವುದೊಂದೂ ಅರ್ಥವಿಲ್ಲದ್ದೆಂದು ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರ ಕಾರ್ಯಗಳನ್ನು ಕಂಡರೆ ಸ್ಪಷ್ಟವಾಗಿ ತಿಳಿಯುವುದು. ಗ್ರೆಗೋರಿಯೋಸ್ ಅಬ್ದುಲ್ಲರು ಡಿಯೊನಿಸಿಯಸ್ ಬಿಶೋಪರನ್ನು ಬಹಿಷ್ಕರಿಸಿದ ಕಾಲದಲ್ಲಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಅಂತಿಯೋಕದಿಂದ ಕಳುಹಿಸಿದ ಟೆಲಿಗ್ರಾಮ್ ಮತ್ತು ಪತ್ರಗಳನ್ನು ಓದಿದರೆ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಯಾವ ವಿಧದ ವ್ಯಕ್ತಿಯೆಂದು ತಿಳಿಯುವುದು. ಅನಂತರ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ತಾನೊಬ್ಬನೇ ಅಂತಿಯೋಕದಿಂದ ಮಲಬಾರಿಗೆ ಬಂದುದನ್ನೂ, ಮಲಬಾರಿಗೆ ಬಂದಿಳಿದ ನಂತರ ಅವರು ಮಾಡಿದ ಪ್ರತಿಯೊಂದು ಕಾರ್ಯವನ್ನೂ ವಿಶೇಷವಾಗಿ ಕಥೋಲಿಕೋಸ್ ಸ್ಥಾನವನ್ನು ಮಲಬಾರಿಗೆ ದಯಪಾಲಿಸುವ ಸಮಯದಲ್ಲಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಗೂ ಫಾದರ್ ಗೀವರುಗೀಸರಿಗೂ ನಡೆದ ಸಂಭಾಷಣೆಯನ್ನೂ "ಮಲಬಾರಿನ [illegible] ಇಗರ್ಜಿ" ಎಂಬ ಪುಸ್ತಕದಲ್ಲಿ ಓದಿ ನೋಡಿರಿ. ಇವರ ಸಂಭಾಷಣೆಯಲ್ಲಿನ ಯಾವುದೊಂದು ಮಾತಿನಲ್ಲಾಗಲೀ, ಮಾಡಿದ ಯಾವುದೊಂದು ಕಾರ್ಯದಲ್ಲಾಗಲೀ ಇವರ ತಲೆ ಹಾಳಾದುದರ ಚಿನ್ಹೆಗಳೇನಾದರೂ ಕಂಡುಬರುತ್ತವೆಯೋ? ಅವರ ಯಾವುದೊಂದು ಮಾತಿನಲ್ಲಿಯೂ ಅವರು ಹುಚ್ಚರೆಂದು ತೋರಿಬರುವುದೇ? ವಾಚಕರು ಚೆನ್ನಾಗಿ ಆಲೋಚಿಸಿ ಓದಿ ನೋಡುವುದಾದರೆ ಅವುಗಳು ಒಬ್ಬಾನೊಬ್ಬ ಬುದ್ಧಿವಂತನ ವ ಜ್ಞಾನಿಯ ಮಾತುಗಳೆಂಬುದು ವ್ಯಕ್ತವಾಗಿ ತಿಳಿದುಬರುವುದು.

ಒಬ್ಬ ಪತ್ರಿಯಾರ್ಕರನ್ನು ಅವರ ಸ್ಥಾನದಿಂದ ತಳ್ಳಿಹಾಕಲು ಮತಭ್ರಷ್ಟತೆ ಇಲ್ಲವೇ ವಿಶ್ವಾಸತ್ಯಾಗ (Apostacy) ಇವು ಮಾತ್ರವೇ ಅಲ್ಲದೆ ಇನ್ನಾವ ಕಾರಣದಿಂದಲೂ ತಳ್ಳಿಹಾಕಲು ಆಗುವುದಿಲ್ಲವೆಂದು ಪವಿತ್ರ ಕಾನೂನುಗಳು ತಿಳಿಸುತ್ತವೆ. ಮೇಲೆ ಹೇಳಿದಂತಹ ಸುಳ್ಳು ಸಿನಡಿನ ಠರಾವುಗಳಲ್ಲಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಮತ



ಭ್ರಷ್ಟತೆ, ವ ವಿಶ್ವಾಸತ್ಯಾಗದ ಯಾವುದೊಂದು ಕಾರ್ಯವನ್ನು ಮಾಡಿದ್ದಾಗಿ ತೋರಿಬರುವುದಿಲ್ಲ. ಹೀಗಿರುವಾಗ ಯಾವನ್ಯಾಯದಿಂದ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರನ್ನು ಅವರ ಸ್ಥಾನದಿಂದ ತಳ್ಳಿಹಾಕುವುದು?

ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರನ್ನು ತಳ್ಳಿಹಾಕಿದ ನಂತರ ಇನ್ನೊಬ್ಬ ಆಕ್ಟಿಂಗ್ ಪತ್ರಿಯಾರ್ಕರನ್ನು ಚುನಾಯಿಸದೇ ಇರಲು ಕಾರಣವೇನು?. ಆಕ್ಟಿಂಗ್ ಪತ್ರಿಯಾರ್ಕರನ್ನು ಚುನಾಯಿಸುವುದರ ಕುರಿತು ಆ ಸಿನಡಿನಲ್ಲಿ ಯಾವ ಆಲೋಚನೆಯಾಗಲೀ, ಸಲಹೆಯಾಗಲೀ ಬಂದುದಿಲ್ಲ.

ಈ ಕಪಟ ಸಿನಡಿನ ಕುರಿತು ತುಂಬಾ ಹೇಳಲಿಕ್ಕೆ ಇರುವುದಾದರೂ ಈ ಮೇಲೆ ಹೇಳಿದ ಕಾರಣಗಳಷ್ಟೇ ಆ ಸಿನಡು ಯಾವ ವಿಧವೆಂದು ತಿಳಿಸಲು ಸಾಕಾಗಿವೆ. ಕಥೋಲಿಕೋಸ್ ಪಕ್ಷದವರಿಗೂ, ಪತ್ರಿಯಾರ್ಕರ ಪಕ್ಷದವರಿಗೂ ಹೈಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತಿದ್ದಾಗ, ಪತ್ರಿಯಾರ್ಕರ ಪಂಗಡದವರು ಈ ಸಿನಡಿನ ಪ್ರತಿಯನ್ನು ತೋರಿಸದೆ ಇದ್ದುದು [illegible] ಉತ್ತಮವಾಯಿತು. ಬುದ್ಧಿವಂತರಿಗೆ ಈ ಸಿನಡಿನ ಠರಾವುಗಳನ್ನು ತೋರಿಸಿದರೆ ಈ ಸಿನಡಿನ ಪ್ರತಿಯನ್ನು ಮುಂದಕ್ಕೆ ತಂದವರು ಮುಖಕ್ಕೆ ಮಸಿ [illegible]. ಆದರೆ ಹೆಡ್ಡು ಜನರಿಗೆ ಇದನ್ನು ತೋರಿಸಿ ತಪ್ಪುಮಾಡೇ ಮೇಲೆಂದು [illegible] ಕೂಡಿಸಬಹುದು. ಆದುದರಿಂದ ಮಹಾನುಭಾವರು ಇನ್ನಾದರೂ ಆ [illegible]ವನ್ನು ಮುಂದಕ್ಕೆ ತಾರದೆ ಕತ್ತಲೆಯ ರಾಜ್ಯಕ್ಕೆ ಅದನ್ನು ದೂಡಿ ತಮ್ಮ ಮರ್ಯಾದೆಯನ್ನು [illegible]ವುದು ಉತ್ತಮ.

ಸಿನಡು ಕೂಡಿದುದು 1903ನೇ ಇಸವಿಯ ಒಕ್ಟೋಬರ ತಿಂಗಳಿನ 10ನೇ ತಾರೀಕಿನಲ್ಲಿ, ಟರ್ಕಿ ರಾಜ್ಯದ ಸುಲ್ತಾನನು ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಂದ ಅಧಿಕಾರ ಪತ್ರವನ್ನು ಹಿಂತೆಗೆದುದು 1905ನೇ ಇಸವಿಯಲ್ಲಿ, ಗ್ರೆಗೋರಿಯೋಸ್ ಅಬ್ದುಲ್ಲರು ಪತ್ರಿಯಾರ್ಕರಾದುದು 1906ನೇ ವರ್ಷದಲ್ಲಿ ಎಂದು ಅವರ ಪುಸ್ತಕದಲ್ಲಿ ತಿಳಿಸಿಯದೆ. ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರನ್ನು ತಳ್ಳಿಹಾಕಿದ 1903ನೇ ಇಸವಿಯಿಂದ ಗ್ರೆಗೋರಿಯೋಸ್ ಅಬ್ದುಲ್ಲರು ಪತ್ರಿಯಾರ್ಕರಾದ 1906ನೇ ಇಸವಿಯ ವರೇಗೆ ಅಂದರೆ ಮೂರು ವರ್ಷಗಳ ಕಾಲ ಯಾರು ಆಕ್ಟಿಂಗ್ ಪತ್ರಿಯಾರ್ಕರಾಗಿ ಆಳಿದುದು?

ಇದರ ಕುರಿತು ಅವರು ಪ್ರಕಟಿಸಿದ ಪುಸ್ತಕದ ಯಾವ ಮೂಲೆಯಲ್ಲಿಯೂ ಕಾಣುವುದಿಲ್ಲ.

1928ನೇ ವರ್ಷದಲ್ಲಿ ಕಥೋಲಿಕೋಸ್ ಪಕ್ಷದವರ ಮತ್ತು ಪತ್ರಿಯಾರ್ಕ ಪಕ್ಷದವರ ವ್ಯಾಜ್ಯವು ತೀರ್ಮಾನವಾಯಿತು. ಇಷ್ಟು ವರ್ಷಗಳ ಕಾಲ ಸಿನಡಿನ ಕುರಿತು ಯಾರಿಗೂ ಗೊತ್ತಿರಲಿಲ್ಲ ಆದರೆ ಮರುವರ್ಷವೇ ಕತ್ತಲೆಯ ರಾಜ್ಯದಲ್ಲಿದ್ದಂಥ

ಸಿನಡು ಬೆಳಕಿಗೆ ದೂಡಲ್ಪಟ್ಟಿತು. ಆದರೆ ಇದು ಕತ್ತಲಲ್ಲಿ ಇದ್ದುದರಿಂದ ಬೆಳಕನ್ನು ಸಹಿಸದೆ ಕತ್ತಲೆಗೇನೇ ಸೇರುವುದೆಂದು ನಮ್ಮ ಭಾವನೆ.

ಸಿನಡಿನ ಕುರಿತು ವಿಚಾರಿಸುವಾಗ ಇನ್ನೊಂದು ಪ್ರಾಮುಖ್ಯ ಸಂಗತಿಯನ್ನು ಗಮನಕ್ಕೆ ತರುವುದು ಆವಶ್ಯಕ.

ಈಗಿನ ಅಂತಿಯೋಕದ ಪತ್ರಿಯಾರ್ಕರೆನ್ನಿಸಿಕೊಂಡ 'ಎಫ್ರಾಯಿಮ್ ಸವೇರಿಯೋಸ್' ಎಂಬವರು ಅರಬಿ ಭಾಷೆಯಲ್ಲಿ ಬರೆದ ಒಂದು ಪುಸ್ತಕವಿದೆ. ಆ ಪುಸ್ತಕದ ಹೆಸರು "ಕುರ್ಕುಮ ದೆಯಾರಾ ಚರಿತ್ರೆ" ಎಂದು. ಕುರ್ಕುಮ ದೆಯಾರಾ ಅಂದರೆ ಅಂತ್ಯಿಯೋಕದ ಪತ್ರಿಯಾರ್ಕರು ವಾಸಮಾಡುವ ಸ್ಥಳ. ಕುರ್ಕುಮ ದೆಯಾರಾ ಚರಿತ್ರೆ ಎಂಬ ಪುಸ್ತಕದ XI ಅಧ್ಯಾಯದಲ್ಲಿ ಈ ರೀತಿ ಬರೆದಿದೆ—

"ಕುರ್ಕುಮ ದೆಯಾರಾವು ಅಂತಿಯೋಕದ ಪತ್ರಿಯಾರ್ಕರ ಕೈ ಕೆಳಗೆ ಬಂದ ನಂತರ ಕೂಡಿದ ಸಿನಡುಗಳು. ಒಂದನೇ ಸಿನಡು 1293ನೇ ವರ್ಷದಲ್ಲಿ ಕೂಡಿತು. ಮರ್ದಿನಿನ ಬಿಶೋಪರಾದ ಇಗ್ನೇಸಿಯಸ್ ಎಂಬವರನ್ನು ಪತ್ರಿಯಾರ್ಕರಾಗಿ ಚುನಾಯಿಸಿದರು.................................................

1872ನೇ ಇಸವಿಯಲ್ಲಿ 'ದೆಯಾರ್ ಬಕಲ್ ಮಲ್ಕಿ' ಎಂಬ ಊರಿನ ಬಿಶೋಪರಾದ ಮಾರ್ ಕುರಿಲೋಸ್ ಆಬಾರ್ ಎಂಬವರು ಜರಗಿಸಿದ ಸಿನಡಿನಲ್ಲಿ ಸೀರಿಯದ ಬಿಶೋಪರಾದ 'ಪಿತರ್ ಜುಲಿಯಸ್'ರನ್ನು ಪತ್ರಿಯಾರ್ಕರಾಗಿ ಚುನಾಯಿಸಿದರು.

'ರಾಹಾ ಅಮಿದ್' ಎಂಬ ದಿಯೊಸೆಜಿನ ಬಿಶೋಪರಾದ ಮಾರ್ ಕುರಿಲೋಸ್ ಎಂಬವರು ಜರಗಿಸಿದ 1898ನೇ ಇಸವಿಯ 19ನೇ ಸಿನಡಿನಲ್ಲಿ ಸೀರಿಯದ ಬಿಶೋಪರಾದ ದಿಯೊನಿಸಿಯಸ್ ಅಬ್ದುಲ್ ಮೆಸ್ಸಿಯ ಎಂಬವರನ್ನು ಪತ್ರಿಯಾರ್ಕರನ್ನಾಗಿ ಚುನಾಯಿಸಿದರು. 20ನೇ ಸಿನಡನ್ನು 1906ನೇ ಇಸವಿಯಲ್ಲಿ ಸಮರಾಕೆ ಬಿಶೋಪರಾದ ಮಾರ್ ದಿಯೊನಿಸಿಯಸ್ ಬೆಹನಾನ್ ಎಂಬವರು ಜರಗಿಸಿದರು. ಇದರಿಂದ ಮಾರ್ ಗ್ರೆಗೋರಿಯೋಸ್ ಅಬ್ದುಲ್ಲ ಎಂಬವರನ್ನು ಪತ್ರಿಯಾರ್ಕರನ್ನಾಗಿ ಚುನಾಯಿಸಿದರು. 1916ನೇ ಇಸವಿಯಲ್ಲಿ 21ನೇ ಸಿನಡಿನಲ್ಲಿ ಮೂಸೋಲಿನ ಬಿಶೋಪರಾದ ಮಾರ್ ಎಲಿಯಾಸ್ ಇವಾನಿಯೋಸ್ ಎಂಬವರನ್ನು ಪತ್ರಿಯಾರ್ಕರನ್ನಾಗಿ ಚುನಾಯಿಸಿದರು. ಅದೇ ಪುಸ್ತಕದ 12ನೇ ಅಧ್ಯಾಯದಲ್ಲಿ ಬರೆದುದೇನೆಂದರೆ:—

"ಕುರ್ಕುಮ ದೆಯಾರಾದಲ್ಲಿ ಪತ್ರಿಯಾರ್ಕರು ಆದವರ ಹೆಸರುಗಳು ಮತ್ತು ಚರಿತ್ರೆ".



"ಇಗ್ನೇಸಿಯಸ್ ಅಬ್ದುಲ್ ಮೆಸ್ಸಿಯ II. 1895ನೇ ಇಸ್ವಿಯಿಂದ 1905 ವರೇಗೆ ಆಳಿದರು. ಇವರು ಪತ್ರಿಯಾರ್ಕರಾಗುವ ಮುಂಚೆ ಸೀರಿಯದ ಬಿಶೋಪರಾಗಿದ್ದರು. ಇವರನ್ನು ಕೆಲವು ಕಾರಣಗಳಿಂದ ತೆಗೆದರು. ಇದಾದ ನಂತರ ಇವರನ್ನು ರೋಮನ್ ಸಭೆಗೆ ಸೇರಿಸ ಬೇಕೆಂದು ರೋಮನ್ ಕಥೋಲಿಕರು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಇವರು 1915ನೇ ಇಸವಿಯಲ್ಲಿ ಮೃತಪಟ್ಟರು. ಇಗ್ನೇಸಿಯಸ್ ಅಬ್ದುಲ್ಲಾ ಎಂಬವರು 1906ನೇ ಇಸ್ವಿಯಿಂದ 1915ನೇ ಇಸ್ವಿಯ ವರೇಗೆ ಆಳಿದರು. ಇವರು 1895ನೇ ಇಸ್ವಿಯಲ್ಲಿ ರೋಮನ್ ಕಥೋಲಿಕ ಮತಕ್ಕೆ ಸೇರಿದರು. ಕಾರಣವನ್ನು ಇಲ್ಲಿ ತಿಳಿಸುವಂತಹ ಅಗತ್ಯವಿಲ್ಲ. ಸ್ವಲ್ಪ ಸಮಯದ ನಂತರ ಇವರು ಹಿಂತಿರುಗಿ ಅಂತಿಯೋಕಕ್ಕೆ ಬಂದು ಪತ್ರಿಯಾರ್ಕರಾದರು. ಇವರು ಬುದ್ಧಿವಂತರಾಗಿದ್ದರೂ ಸ್ಥಿರಮನಸ್ಸಿನವರಾಗಿರಲಿಲ್ಲ."

XIVನೇ ಅಧ್ಯಾಯದಲ್ಲಿ ಹೇಳಿರುವುದೇನೆಂದರೆ:—

"ಪತ್ರಿಯಾರ್ಕರನ್ನು ದಫನ ಮಾಡುವುದಕ್ಕಾಗಿ ಪ್ರತ್ಯೇಕಿಸಿದ ಸ್ಥಳದಲ್ಲಿ ದಫನ ಮಾಡಲ್ಪಟ್ಟಂಥ ಹಿರಿಯರ ಹೆಸರುಗಳು":—

ಇಗ್ನೇಶಿಯಸ್ 5ನೇ ... ... 1333ನೇ ಇಸವಿಯಲ್ಲಿ.
... ... ... .. ... ... ...
ಇಗ್ನೇಶಿಯಸ್ ಎಲಿಯಾಸ್ ... 1847ನೇ ಇಸವಿಯಲ್ಲಿ.
ಇಗ್ನೇಶಿಯಸ್ ಪೀಟರ್ ... ... 1894ನೇ ಇಸವಿಯಲ್ಲಿ.
ಇಗ್ನೇಶಿಯಸ್ ಅಬ್ದುಲ್ ಮೆಸ್ಸಿಯ ... 1915ನೇ ಇಸವಿಯಲ್ಲಿ.

ಮೇಲೆ ಹೇಳಿದ ಚರಿತ್ರೆಯನ್ನು ಓದಿ ಸ್ವಲ್ಪ ಆಲೋಚಿಸುವ:—

ಕೂಡಿದ ಸಿನಡುಗಳ ಪಟ್ಟಿಯಲ್ಲಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರನ್ನು ಪತ್ರಿಯಾರ್ಕರನ್ನಾಗಿ ಮಾಡಿದ ಸಿನಡು ಮಾತ್ರವೇ ತೋರುತ್ತದಲ್ಲದೆ ಅವರನ್ನು ಆ ಸ್ಥಾನದಿಂದ ತಳ್ಳಿಹಾಕಲು ಅಥವಾ ಬಹಿಷ್ಕರಿಸಲು ಕೂಡಿದ ಸಿನಡು ತೋರುವುದೇ ಇಲ್ಲ. ಅಂಥಹ ಒಂದು ಸಿನಡು ಕೂಡಿದ್ದರೆ ಆ ಸಿನಡಿನ ವಿಷಯ ಸಿನಡುಗಳ ಪಟ್ಟಿಯಲ್ಲಿ ಕಾಣಬೇಕಿತ್ತು. ಎರಡನೆಯದಾಗಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರನ್ನು ದಫನ ಮಾಡಿದುದು ಎಲ್ಲಿಯೆಂದರೆ—ಪತ್ರಿಯಾರ್ಕರಿಗಾಗಿ ಪ್ರತ್ಯೇಕಿಸಿದ ಸ್ಥಳದಲ್ಲೇ. ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರನ್ನು ಆ ಸ್ಥಾನದಿಂದ ತಳ್ಳಿ ಹಾಕಿದುದಾದರೆ, ಪತ್ರಿಯಾರ್ಕರಿಗೆ ದಫನ ಮಾಡುವಂಥಹ ಸ್ಥಳದಲ್ಲಿ ಅವರನ್ನು ಹೂಳಿಡುವ ಅಗತ್ಯವೇನಿತ್ತು?

ಅಬ್ದುಲ್ಲ ಮೆಸ್ಸಿಯು ಪತ್ರಿಯಾರ್ಕರ ದಫನದ ಸಮಯ ತೆಗೆದ ಒಂದು ಭಾವಚಿತ್ರ ಇದೆ. ಈ ಭಾವಚಿತ್ರವನ್ನು ಇಲ್ಲಿ ಕಾಣಿಸಿಯದೆ.



ಅಬ್ದುಲ್ ಮೆಸ್ಸಿಯು ಪತ್ರಿಯಾರ್ಕರ ದಫನದ ಸಮಯದಲ್ಲಿ ತೆಗೆದ ಭಾವಚಿತ್ರ.



ಈ ಭಾವಚಿತ್ರವನ್ನು ನೋಡುವುದಾದರೆ, ಅಬ್ದುಲ್ಲ ಮೆಸ್ಸಿಯು ಪತ್ರಿಯಾರ್ಕರನ್ನು ಪತ್ರಿಯಾರ್ಕರ ಸ್ಥಾನಕ್ಕೆ ಉಚಿತವಾದಂಥಹ ರೀತಿಯಲ್ಲಿ ತಕ್ಕ ಮರ್ಯಾದೆಯಿಂದ ನೋಡಿದರೆಂದು ತಿಳಿಯುವುದು. ಅದೇ ಭಾವಚಿತ್ರದಲ್ಲಿ ಪತ್ರಿಯಾರ್ಕರ ಡೆಲಿಗೇಟರೆನ್ನಿಸಿಕೊಂಡು ಈಗ ಮಲಬಾರಿನಲ್ಲಿರುವ 'ಮಾರ್ ಎಲಿಯಾಸ್ ಜುಲಿಯಸ್'ಎಂಬವರು ಹಿಂದುಗಡೆ ನಿಂತಿರುವುದು ಕಾಣುತ್ತದೆ. ಸಿನಡುಕೂಡಿ ಪತ್ರಿಯಾರ್ಕರ ಸ್ಥಾನದಿಂದ ತಳ್ಳಿಹಾಕಿದ ಒಬ್ಬ ವ್ಯಕಿಯ ದಫನವು ಈ ರೀತಿಯಲ್ಲಿ ಇರುತ್ತದೋ ಎಂದು ನೀವೇ ಆಲೋಚಿಸಿರಿ. ಮಾತ್ರನಲ್ಲದೆ ಅಂಥಹ ಒಬ್ಬ ವ್ಯಕ್ತಿಯು ದಫನಕ್ಕೆ ಪತ್ರಿಯಾರ್ಕರ ಡೆಲಿಗೇಟರೆನ್ನಿಸಿಕೊಂಡ ಮಾರ್ ಎಲಿಯಾಸ್ ಜುಲಿಯುಸರು ಹೋಗಲು ಕಾರಣ ವಿದೆಯೋ? ಮೇಲೆ ವಿವರಿಸಿದ ಎಲ್ಲಾ ಕಾರಣಗಳಿಂದ ಅಬ್ದುಲ್ ಮೆಸ್ಸಿಯು ಪತ್ರಿಯಾರ್ಕರನ್ನು ತಳ್ಳಿ ಹಾಕಲು ಸಿನಡು ಕೂಡಿತ್ತೋ, ಇಲ್ಲವೋ ಎಂದು ನೀವೇ ಆಲೋಚಿಸಿರಿ.

ಈಗಿನ ಅಂತಿಯೋಕದ ಪತ್ರಿಯಾರ್ಕರ ಡೆಲಿಗೇಟರೆನ್ನಿಸಿಕೊಂಡ ಮಾರ್ ಜುಲಿಯುಸರು ತಿರುವಾಂಕೂರಿನ ಕೋರ್ಟಿನಲ್ಲಿ ಒಂದು ಸಂದರ್ಭದಲ್ಲಿ ಈ ರೀತಿ ವಾಗ್ಮೂಲ ಕೊಟ್ಟಿರುತ್ತಾರೆ. "ಅಂತಿಯೋಕದ ಪತ್ರಿಯಾರ್ಕರ ಸಿಂಹಾಸನದ ವಿಷಯಗಳಲ್ಲಿ ಅಲ್ಲಿರುವ ಬಿಶೋಪರ ಒಪ್ಪಿಗೆ ಹೊರತು ಮಲಬಾರಿನಲ್ಲಿರುವ ಬಿಶೋಪರ ಒಪ್ಪಿಗೆ ಅಗತ್ಯವಿಲ್ಲ"

ನಮ್ಮ ಹಿರಿಯರಾಗಿಯೂ ಮೇಲಾಧಿಕಾರಿಗಳಾಗಿಯೂ ಇರುವ ಪತ್ರಿಯಾರ್ಕರ ಸಿಂಹಾಸನದ ವಿಷಯಗಳಲ್ಲಿ ಅಂತಿಯೋಕದ ಬಿಶೋಪರುಗಳು ಮಾತ್ರವೇ ಅಗತ್ಯ; ಮಲಬಾರಿನ ಬಿಶೋಪರುಗಳ ಆವಶ್ಯಕತೆಯು ಮಾತ್ರ ಇಲ್ಲವೇ? ಅವರು ಹೇಳಿದುದರ ಅರ್ಥವೇನೆಂದರೆ— "ಅಂತಿಯೋಕದ ಬಿಶೋಪರುಗಳು ನಮಗೆ ಮೇಲಾಧಿಕಾರಿಗಳಾಗಿದ್ದು, ಮಲಬಾರಿನ ಬಿಶೋಪರುಗಳು ಅವರ ದಾಸರಾಗಿರಬೇಕಲ್ಲವೇ? ಇದು ಎಂದಿಗಾದರೂ ಸಾಧ್ಯವೇ? ಮಾರ್ ಡಿಯೋನಿಶಿಯುಸ್ ಬಿಶೋಪರಿಗೂ ಗ್ರೆಗೋರಿಯೋಸ್ ಅಬ್ದುಲ್ಲರಿಗೂ ಕಲಹ ಉಂಟಾಗಲು ಇದಲ್ಲವೇ ಮುಖ್ಯಕಾರಣ!

ಯಾವ ಕಾಲದಲ್ಲಿಯಾದರೂ ಅಂತಿಯೋಕದ ಪತ್ರಿಯಾರ್ಕರ ಪಟ್ಟಕ್ಕೆ ಒಬ್ಬ ವ್ಯಕ್ತಿಯನ್ನು ಚುನಾಯಿಸ ಬೇಕಾದರೆ ಸಿರಿಯನ್ ಸಭೆಯಲ್ಲಿ ಇರುವ ಎಲ್ಲಾ ಬಿಶೋಪರುಗಳಿಗೆ ತಿಳಿಸಿ ಅವರ ಸಮ್ಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ಅಂಥಹ ಪತ್ರಿಯಾರ್ಕರನ್ನು ಕಥೋಲಿಕೋಸರು ಹೇಗೆ ಸ್ವೀಕರಿಸುವರು? ಸ್ವೀಕರಿಸಲು ಸಾಧ್ಯವೋ, ಅಸಾಧ್ಯವೋ ಎಂಬುದು ಇನ್ನೊಂದು ಕಡೆಯಲ್ಲಿ ಬರೆದ ಕಥೋಲಿಕಸರ ಚರಿತ್ರೆಯಿಂದ ತಿಳಿಯುವುದು. ಈಗಿನ ಅಂತಿಯೋಕದ ಪತ್ರಿಯಾರ್ಕರೆನಿಸಿಕೊಂಡ 'ಮಾರ್ ಎಫ್ರಾಯಿಮ್ ಸವೇರಿಯೋಸ್'ರ ಚುನಾವಣೆಗೆ ಮಲಬಾರಿನ

ಸೀರಿಯನ್ ಸಭೆಯ ಮೇಲಾಧಿಕಾರಿಗಳಾದ ಕಥೋಲಿಕೋಸರನ್ನು ಅವರು ಕರೆಯದೆ ಇದ್ದ ಕಾರಣ ನಾವಾದರೂ ಹೇಗೆ ಅವರನ್ನು ನಿಜವಾದ ಪತ್ರಿಯಾರ್ಕರೆನ್ನಬೇಕು? ಇದಕ್ಕಾಗಿಯೇ ನಾವು ಅವರನ್ನು ಸ್ವೀಕರಿಸದೆ ಇರುವುದು.

## ಕಥೋಲಿಕೋಸರ ಚರಿತ್ರೆ.

ನಿಶೇಯದ ಸಿನಡಿನ ಠರಾವುಗಳ ಪ್ರಕಾರ ಭೂಲೋಕವಲ್ಲಿರುವ ಎಲ್ಲಾ ಕ್ರೈಸ್ತ ಸಭೆಗಳು 4 ಪತ್ರಿಯಾರ್ಕರುಗಳ ಕೈಕೆಳಗಿರಬೇಕಿತ್ತು. 1ನೇ ರೋಮ್, 2ನೇ ಅಲೆಕ್ಸಾಂಡ್ರಿಯಾ, 3ನೇ, ಕೊನ್ಸ್ಟಾಂಟಿನೋಪಲ್, 4ನೇ ಅಂತಿಯೋಕ— ಹೀಗೆ ನಾಲ್ಕು ಊರುಗಳಲ್ಲಿ 4 ಪತ್ರಿಯಾರ್ಕರುಗಳು ಇದ್ದರು. ಈ ಲಾಗಾಯ್ತು ಜರುಸಲೇಮಿನ ಬಿಶೋಪರಿಗೆ 5ನೇ ಪತ್ರಿಯಾರ್ಕರೆಂಬ ಹೆಸರು ಕೊಟ್ಟರು. ಆದರೆ ಕೈಸರೇಯಾ, ಫಿಲಿಪ್ಪಿ ಎಂಬ ಊರುಗಳ ಬಿಶೋಪರ ಕೈಕೆಳಗೆ ಇವರು ಇರಬೇಕಿತ್ತು. ಪೂರ್ವ ದಿಕ್ಕಿನ ದೊಡ್ಡ ಮೆಟ್ರೊಪೊಲಿಟನರು ಪತ್ರಿಯಾರ್ಕರ ಹಾಗೆ ಪೂರ್ವದಿಕ್ಕಿನ ಕ್ರೈಸ್ತ ಸಭೆಗಳಿಗೆ ಬೇಕಾದ ಬಿಶೋಪರಿಗೆ ಪಟ್ಟ ವಗೈರೆ ಕೊಡಬೇಕಿತ್ತು. ಇವರಿಗೆ ಕಥೋಲಿಕೋಸರೆಂದು ಕರೆಯುತ್ತಿದ್ದರು. ಇವರ ಹೆಸರನ್ನು ಪೂಜೆಯಲ್ಲಿ ಕೂಡ ಸ್ಮರಿಸಬೇಕು. ಇವರು ಸಿನಡುಗಳಲ್ಲಿ ಹಾಜರಾಗುವಾಗ ಎಲ್ಲಾ ಬಿಶೋಪರಿಗೆ ಮಿಕ್ಕಿದ ಸ್ಥಾನವನ್ನು ಇವರಿಗೆ ಕೊಡುತ್ತಿದ್ದರು. ಅಬಿಸೀನಿಯಾ ಊರಿನವರಿಗೆ ಅವರಿಗಾಗಿ ಪತ್ರಿಯಾರ್ಕರನ್ನು ನೇಮಿಸುವ ಅಧಿಕಾರವಿರಲಿಲ್ಲ. ಅಲೆಕ್ಸಾಂಡ್ರಿಯಾ ಊರಿನ ಪತ್ರಿಯಾರ್ಕರು ಅಬಿಸಿನಿಯಾ ಊರಿನ ಕ್ರೈಸ್ತ ಸಭೆಗಳಿಗೆ ಒಬ್ಬ ಮೆಟ್ರೊಪೊಲಿಟನರನ್ನು ನೇಮಿಸಿ ಪಟ್ಟ ಕೊಡಬೇಕಿತ್ತು. ಈ ಮೆಟ್ರೊಪೊಲಿಟನರು ಅಬಿಸೀನಿಯಾ ಊರಿನಲ್ಲಿ ಬಿಶೋಪರ ಪಟ್ಟವನ್ನು ಕೊಡುತ್ತಿದ್ದರು. ಇವರು ಸಿನಡುಗಳಲ್ಲಿ ಹಾಜರಾಗುವಾಗ ಎಲ್ಲಾ ಬಿಶೋಪರಿಗೆ ಮೇಲಾಗಿಯೂ ಕಥೋಲಿಕೋಸರ ಕೆಳಗೂ ಇವರಿಗೆ ಸ್ಥಾನವನ್ನು ಕೊಡುತ್ತಿದ್ದರು.

ಸೈಪ್ರುಸ್ ಎಂಬ ದ್ವೀಪಕ್ಕೆ ಪ್ರತ್ಯೇಕ ಮೆಟ್ರೊಪೊಲಿಟನರು ಇದ್ದರು. ಇವರಿಗೆ ಅಂತಿಯೋಕದ ಪತ್ರಿಯಾರ್ಕರೇ ಪಟ್ಟವನ್ನು ಕೊಡುತ್ತಿದ್ದರು. ಸೈಪ್ರುಸ್ ಎಂಬ ಊರು ದ್ವೀಪವಾದುದರಿಂದ ಮಳೆಗಾಲದಲ್ಲಿ ಸಮುದ್ರಪ್ರಯಾಣ ಬೆಳೆಸುವುದು ಕಷ್ಟಕರವಾಗಿತ್ತು. ಈ ಊರಿನ ಮೆಟ್ರೊಪೊಲಿಟನರು ಮಳೆಗಾಲದಲ್ಲಿ ಮೃತಪಟ್ಟರೆ ಅಂತಿಯೋಕದ ಪತ್ರಿಯಾರ್ಕರ ಹುಕುಂ ಪ್ರಕಾರ ಆ ಊರಿನ ಇತರ ಬಿಶೋಪರು ಒಟ್ಟು ಕೂಡಿ ಒಬ್ಬರನ್ನು ಮೆಟ್ರೊಪೊಲಿಟನರಾಗಿ ನೇಮಿಸಬೇಕಿತ್ತು. ಇಂಥಹ ಒಂದು ಕಟ್ಟಳೆಗೆ ಪತ್ರಿಯಾರ್ಕರಿಗೆ ವಿರೋಧಿಸಲು ಅಧಿಕಾರವಿರಲಿಲ್ಲ.



(ಬಾರ್ ಎಬ್ರಾಯ VII ಅ. 1ನೇ ಶ್ಲೋ.) ಇದನ್ನು ಓದಿ ನೋಡುವುದಾದರೆ, ನಿಶೇಯ ಸಿನಡಿನಲ್ಲಿ ನಡೆದ ಸಂಗತಿಗಳು ಹೇಗೆಂಬುದು ಸ್ಪಷ್ಟವಾಗಿ ತಿಳಿಯುವುದು.

ರೋಮ್, ಅಲೆಕ್ಸಾಂಡ್ರಿಯಾ, ಕೊನ್ಸ್ತಾಂತಿನೋಪಲ್, ಅಂತಿಯೋಕ್, ಈ ಊರುಗಳ ಬಿಶೋಪರುಗಳಿಗೆ ಪತ್ರಿಯಾರ್ಕರೆಂದು ಕರೆಯಲು ಯಾವ ಆಕ್ಷೇಪವೂ ಇಲ್ಲ. ಆದರೆ, ಜರುಸಲೇಮಿನ ಬಿಶೋಪರ ವಿಷಯ ಸ್ವಲ್ಪ ಚರ್ಚೆಯು ಬಂದಿತು. ಅದು ಏಕೆಂದರೆ— ಜರುಸಲೇಮ್ ಎಂಬುದು ಯೇಸುಕ್ರಿಸ್ತನು ವಾಸಮಾಡಿದ ಸ್ಥಳ, ಯೇಸು ಕ್ರಿಸ್ತನ ತಮ್ಮನಾದ ಮಾರ್ ಯಾಕೋಬ್ ಎಂಬವರು ಮೊದಲನೇ ಬಿಶೋಪರಾಗಿದ್ದ ಸ್ಥಳ, ಮಾತ್ರವಲ್ಲದೆ ಕ್ರೈಸ್ತ ಸಭೆಯ ಮುಖ್ಯಪಟ್ಟಣ. ಈ ಕಾರಣಗಳಿಂದ ಜರುಸಲೇಮ್‌ನ ಬಿಶೋಪರಿಗೆ ಮುಖ್ಯಸ್ಥಾನವನ್ನು ಕೊಡಬೇಕೆಂಬ ಚರ್ಚೆಯು ಬಂದಿತು. ಆದರೆ ಸಿನಡು ಅದನ್ನು ಅಂಗೀಕರಿಸಲಿಲ್ಲ. ಅವರನ್ನು ಪತ್ರಿಯಾರ್ಕರೆಂದು ಕರೆಯುವುದಾದರೂ ಅವರ ಮೆಟ್ರೊಪೊಲಿಟನರ ಕೈಕೆಳಗೆ ಇರಬೇಕೆಂದು ನಿಶ್ಚಯಿಸಿದರು. ಸಿನಡಿನಲ್ಲಿ ಹಾಜರಾಗುವಾಗ ಅವರು ಮೆಟ್ರೊಪೊಲಿಟನರಿಗಿಂತ ಮೇಲಿನ ಸ್ಥಾನದಲ್ಲಿರಬೇಕೆಂದು ನಿಶ್ಚಯಿಸಿದರು. ಜರುಸಲೇಮಿನ ಬಿಶೋಪರಿಗೆ ಪತ್ರಿಯಾರ್ಕರೆಂಬ ಹೆಸರಿಟ್ಟು ಹೆಚ್ಚು ಬಹುಮಾನ ಕೊಟ್ಟಿದ್ದರೂ ಆಡಳಿತೆಯಲ್ಲಿ ಮೆಟ್ರೊಪೊಲಿಟನರ ಕೈಕೆಳಗೆ ಇರಬೇಕಾಯಿತು. ಇನ್ನೊಂದು ಚರ್ಚಾಸ್ಪದವಾದ ಸಂಗತಿಯು ಕಥೋಲಿಕೋಸರ ವಿಷಯವಾಗಿತ್ತು. ಕಥೋಲಿಕೋಸರ ಕೈಕೆಳಗೆ ಇರುವ ಎಲ್ಲಾ ಬಿಶೋಪರನ್ನು ಕಥೋಲಿಕೋಸರೇ ಪಟ್ಟಕಟ್ಟಬೇಕು. ಸಿನಡಿನಲ್ಲಿ ಕಥೋಲಿಕೋಸರು ಹಾಜರಾಗುವಾಗ ಅಂತಿಯೋಕ ಪತ್ರಿಯಾರ್ಕರ ಸಮಕ್ಷಮ ಎಲ್ಲಾ ಮೆಟ್ರೊಪೊಲಿಟನರಿಗಿಂತ ಮೇಲಿನ ಸ್ಥಾನವನ್ನು ಕೊಡಬೇಕೆಂದು ನಿರ್ಧಾರವಾಯಿತು.

ಇನ್ನೊಂದು ಚರ್ಚಾಸ್ಪದವಾದ ಸಂಗತಿಯು ಅಬಿಸೀನಿಯದ ಬಿಶೋಪರ ವಿಷಯವಾಗಿತ್ತು. ಅಬಿಸೀನಿಯದವರಿಗೆ ದಾವಿದ ಅರಸನ ಕುಟುಂಬದವರೆಂದೂ, ಒಡಂಬಡಿಕೆಯ ಪೆಟ್ಟಿಗೆಯು ತಮ್ಮ ಸ್ವಾಧೀನವಿದೆಯೆಂದೂ, ಈ ಕಾರಣಗಳಿಂದ ತಮಗೆ ಪ್ರಾಧಾನ್ಯ ಸ್ಥಾನವನ್ನು ಕೊಡಬೇಕೆಂದೂ ವಾದಿಸಿದರು. ಇದರ ಕುರಿತು ಸಿನಡು ನಿಶ್ಚಯಿಸಿದುದೇನೆಂದರೆ— ಅಬಿಸೀನಿಯದವರಿಗೆ ಅಲೆಕ್ಸಾಂಡ್ರಿಯಾ ಪತ್ರಿಯಾರ್ಕರು ಮೆಟ್ರೊಪೊಲಿಟನರ ಸ್ಥಾನವನ್ನು ಕೊಡಬೇಕೆಂದೂ, ಆ ಮೆಟ್ರೊಪೊಲಿಟನರು ಅಬಿಸೀನಿಯದ ಕ್ರೈಸ್ತ ಸಭೆಗೆ ಬೇಕಾದ ಬಿಶೋಪರನ್ನು ನೇಮಿಸಬೇಕೆಂದೂ ನಿರ್ಧರಿಸಿದರು.

ನಿಶ್ಶೇಯದ ಸಿನಡಿನ ಠರಾವುಗಳನ್ನು ಓದಿ ನೋಡುವುದಾದರೆ ಕಥೋಲಿಕೋಸರ ಕೈಕೆಳಗೆ ಇರುವ ಸಭೆಗೆ (diocese) ಕಥೋಲಿಕೋಸರೇ ಮೇಲಾಧಿಕಾರಿಗಳಾಗಿದ್ದು, ಇವರಿಗೆನೇ ಅಲ್ಲಿಯ ಸರ್ವಾಧಿಕಾರವಿತ್ತು. ಆದರೆ, ಕಥೋಲಿಕೋಸರಿಗೆ ಪಟ್ಟ

ಕಟ್ಟುವ ಸಮಯದಲ್ಲಿ ಪತ್ರಿಯಾರ್ಕರನ್ನು ಕರೆಕಳುಹಿಸಬೇಕು. ಪತ್ರಿಯಾರ್ಕರು ಅನುಕೂಲವಿದ್ದು, ವ ಇಲ್ಲದೆ ಬಾರದೆ ಇದ್ದಲ್ಲಿ ಅವರಿಲ್ಲದೇನೇ ಕಥೋಲಿಕೋಸರಿಗೆ ಪಟ್ಟಕೊಡಬಹುದೆಂದೂ ಅದೇ ಪ್ರಕಾರ ಪತ್ರಿಯಾರ್ಕರಿಗೆ ಪಟ್ಟ ಕೊಡುವಾಗ ಕಥೋಲಿಕೋಸರನ್ನು ಕರೆಕಳುಹಿಸಬೇಕೆಂದೂ, ಅವರು ಅನುಕೂಲವಿದ್ದು, ವ ಇಲ್ಲದೆ ಬಾರದೆ ಇದ್ದಲ್ಲಿ ಪತ್ರಿಯಾರ್ಕರಿಗೆ ಇವರ [illegible] ಪಟ್ಟಕೊಡಬಹುದೆಂದೂ ನಿರ್ಧಾರವಾಯಿತು. ಈ ರೀತಿಯಲ್ಲೇ ಸಂಗತಿಗಳು ನಡೆದುದೆಂದು ಕೆಳಗಿನ ಚರಿತ್ರೆಯಿಂದ ತಿಳಿಯುವುದು.

ನಿಶೇಯದ ಸಭೆಯು ಯಾವ ಸಂದರ್ಭದಲ್ಲಿಯೂ ಮುಂಚಿನ ಠರಾವುಗಳಿಗೆ ವಿರುದ್ಧವಾಗಿ ನಡೆಯುತ್ತಿರಲಿಲ್ಲ. ಮಾತ್ರವಲ್ಲದೆ ಹೊಸ ಠರಾವುಗಳನ್ನು ಸಭೆಯಲ್ಲಿ ಮುಂದಕ್ಕೆ ತರುವಾಗ ಅಂತಹ ಠರಾವುಗಳು ಮುಂಚಿನ ಠರಾವುಗಳಿಗೆ ವಿರುದ್ಧವಾಗಿ ಹೋಗದಂತೆ ಜಾಗರೂಕರಾಗಿದ್ದರು. ನಿಶೇಯದಸಭೆಯಲ್ಲಿ ಮಂಜೂರಾದ ನಿಯಮಗಳ ಪ್ರಕಾರವೇ ಪತ್ರಿಯಾರ್ಕರ ಮತ್ತು ಕಥೋಲಿಕೋಸರ ಸ್ಥಾನಗಳು ನಡೆದುಕೊಂಡು ಬರುತ್ತಿದ್ದುವು. ಆದರೆ ಆ ಊರುಗಳ ಸರಕಾರದಿಂದ ಕ್ರೈಸ್ತ ಸಭೆಗೆ ಹಿಂಸೆ ಉಂಟಾಗಲು ಪ್ರಾರಂಭವಾಯಿತು. ಈ ಭಯಂಕರ ಹಿಂಸೆಯ ದೆಸೆಯಿಂದ ಬಿಶೋಪರ ಸ್ಥಾನಕ್ಕೆ ಬರುವವರು ಬಹಳವಾಗಿ ಅಂಜುತ್ತಿದ್ದರು. ಜುಲಿಯಾನೋಸ್ ಎಂಬ ರಾಜನು ಕ್ರೈಸ್ತರಿಗೆ ತುಂಬಾ ಉಪದ್ರವಗಳನ್ನು ಕೊಟ್ಟನು. ಇವನು ಶಾಬೂರ್ ಎಂಬ ರಾಜನಿಗೆದುರಾಗಿ ಯುದ್ಧ ಮಾಡುತ್ತಿದ್ದಾಗ ಇವನ ಎದೆಗೊಂದು ಬಾಣವು ಹೊಡೆಯಲ್ಪಟ್ಟು, ಆದರಿಂದಲೇ ಮೃತಪಟ್ಟನು. ಕ್ರೈಸ್ತರಿಗೆ ಹಿಂಸಿಸಿದ ಕಾರಣದಿಂದಲೇ ಇವನಿಗೆ ಈ ರೀತಿಯ ಭಯಂಕರ ಮರಣವು ದೊರೆಕಿತೆಂದು ನಂಬಿ ಶಾಬೂರ್ ಅರಸನು ಕ್ರೈಸ್ತರನ್ನು ಪ್ರೀತಿಸಲು ತೊಡಗಿದನು. ಹಾಳಾದ ಇಗರ್ಜಿಗಳನ್ನು ಸರಿಪಡಿಸಿದನು. ಈ ರಾಜನ ಕಾಲದಲ್ಲಿ ಕ್ರೈಸ್ತಬಿಶೋಪರು ಧೈರ್ಯಗೊಂಡು ಥಾಮೊಸ್ಸಾ ಎಂಬ ಬಿಶೋಪರನ್ನು ಕಥೋಲಿಕೋಸರನ್ನಾಗಿ ಮಾಡಿದರು. ಇವರು 8 ವರ್ಷಗಳ ಕಾಲ ಕ್ರೈಸ್ತ ಸಭೆಯ ಒಳ್ಳೆತಕ್ಕಾಗಿ ಶ್ರಮಪಟ್ಟು ಮೃತಪಟ್ಟರು. ಇದೇ ಕಾಲದಲ್ಲಿ ಶಾಬೂರ್ ರಾಜನು ಕೂಡಾ ಮೃತಪಟ್ಟನು. ಅವನ ಮಗನಾದ ಬೆಹರ್ರಾಮ್ ಎಂಬವನು ಕ್ರೈಸ್ತರಿಗೆ ಹಿಂಸೆ ಕೊಡಲು ಪ್ರಾರಂಭಿಸಿದನು.

ಈ ಹಿಂಸೆಯ ದೆಸೆಯಿಂದ ಥಾಮೊಸ್ಸಾ ಕಥೋಲಿಕೋಸರ ಮರಣಾನಂತರ ಎರಡು ವರ್ಷಗಳ ಕಾಲ ಕಥೋಲಿಕೋಸರೇ ಇರಲಿಲ್ಲ. ಅನಂತರ ಕ್ಯೊರೊ ಎಂಬ ಹೆಸರುಳ್ಳ ಬಿಶೋಪರು ಕಥೋಲಿಕೋಸರಾದರು. ಇವರ ಕಾಲದಲ್ಲಿ ಕ್ರೈಸ್ತಮತಾವಲಂಬಿಗಳಿಗೆ ಅರಸನ ಪೀಡೆಯುಂಟಾಯಿತು. ಇದಲ್ಲದೆ ನೆಸ್ತ್ರೋರ್ ಎಂಬವನೊಬ್ಬನ ಮತಪ್ರೂಪಣೆಯು ಸಭೆಯಲ್ಲಿ ಪ್ರಚಾರವಾಯಿತು. ಇವರಿಗೆ ರಾಜನ ಸಹಾಯವು ಕೆಲವು ಸಮಯ



ಸಿಕ್ಕಿದ ಕಾರಣ ಕಥೋಲಿಕಸರನ್ನೂ ಕೆಲವು ವೇಳೆ ಅಂತಿಯೋಕದ ಪತ್ರಿಯಾರ್ಕರನ್ನೂ ಹಿಂಸಿಸುತ್ತಿದ್ದರು; ತುಂಬಾ ಕ್ರೈಸ್ತರನ್ನು ಕೊಲ್ಲಿಸಿದರು; ಕೆಲವರನ್ನು ಸೆರೆಮನೆಯಲ್ಲಿಡಿಸಿದರು. ಸ್ವಲ್ಪ ಕಾಲದ ನಂತರ 'ಕೊಬಾದ್' ಎಂಬವನು ಆ ಊರಿಗೆ ರಾಜನಾದನು. ಇವನು ಯಾರ ಪಕ್ಷವನ್ನೂ ವಹಿಸದೆ ಎಲ್ಲರನ್ನೂ ಏಕರೀತಿಯಲ್ಲಿ ಆಳುತ್ತಿದ್ದನು. ಈ ಕೊಬಾದ್ ರಾಜನ ಕಾಲದಲ್ಲಿ ಅಂತಿಯೋಕದ ಮತ್ತು ನೆಸ್ತ್ರೋರಿನ ಎರಡು ಪಂಥಗಳಲ್ಲಿಯೂ ಕಥೋಲಿಕಸರು ಇದ್ದಂತೆ ಕಂಡುಬರುವುದು. ಆದುದರಿಂದ ಅಂತಿಯೋಕದ ಪಕ್ಷದವರು ಕಥೋಲಿಕಸ್ ಎಂಬ ಹೆಸರನ್ನು ಬಿಟ್ಟು ಆಸ್ಥಾನಕ್ಕೆ ಮಾಫ್ರಿಯಾನ್ ಎಂಬ ಹೆಸರನ್ನು ಹಾಕಿದರು. ಕೊಬಾದ್ ರಾಜನ ಮಗನಾದ ಅನಶ್ರೂನ್ ಎಂಬ ರಾಜನು ನೆಸ್ತ್ರೋರ್ ಪಕ್ಷದವರಿಗೂ, ಅಂತಿಯೋಕದ ಪಕ್ಷದವರಿಗೂ ಏಕ ರೀತಿಯಲ್ಲಿ ಸಹಾಯ ಮಾಡುತ್ತಿದ್ದನು. ಆದರೆ ಅಂತಿಯೋಕದ ಸಭೆಯವರಿಗೆ ಅಧೋಗತಿ ಪ್ರಾರಂಭವಾಯಿತು. ಕ್ರಿ. ಶ. 825ರಿಂದ 853ರ ವರೆಗೆ ಅಂತಿಯೋಕದ ಪತ್ರಿಯಾರ್ಕರಾಗಿದ್ದ ಸೆವೇರಿಯೋಸ್ ಎಂಬವರು ತುಂಬಾ ಹಿಂಸೆ ಮತ್ತು ಪೀಡೆಗಳನ್ನು ಅನುಭವಿಸಿದರು. ಅವರ ನಂತರವೂ ಹಿಂಸೆಯು ಇದ್ದ ಕಾರಣ ಬಿಶೋಪರ ಸಂಖ್ಯೆಯು ಕಡಿಮೆಯಾಗುತ್ತಾ ಬಂದಿತು. ಇದೇ ಕಾಲದಲ್ಲಿ ಯಾಕೋಬ್ ಬುರ್ದಾನ ಎಂಬ ಬಿಶೋಪರು ಇದ್ದರು. ಇವರು ಅಂತಿಯೋಕದಲ್ಲಿಯೇ ಪತ್ರಿಯಾರ್ಕರ ಗಡಿಯೊಳಗಿನ ಪ್ರದೇಶಗಳಲ್ಲಿಯೂ, ಕಥೋಲಿಕಸರ ಗಡಿಯೊಳಗಿನ ಪ್ರದೇಶಗಳಲ್ಲಿಯೂ ಸುತ್ತಿ, ಅಹುದೆಮ್ಮೆ ಎಂಬೊಬ್ಬರನ್ನು 570ನೇ ಇಸವಿಯಲ್ಲಿ ಕಥೋಲಿಕಸ್ ಪದವಿಗೆ ಏರಿಸಿದರು. ಇವರ ಕಾಲದಲ್ಲಿ ಕ್ರೈಸ್ತಸಭೆಯು ಉನ್ನತಿಗೇರಿತು. ಅನ್ಯರನ್ನು ಕ್ರೈಸ್ತಮತಾವಲಂಬಿಗಳನ್ನಾಗಿ ಮಾಡಿದರು. ಆಗ ಆಳುತ್ತಿದ್ದ ರಾಜನ ಮಗನಿಗೆ ಜ್ಞಾನಸ್ನಾನ ಕೊಟ್ಟು ಕ್ರೈಸ್ತಸಭೆಗೆ ಸೇರಿಸಿದರು. ಇದನ್ನು ರಾಜನು ತಿಳದುಕೊಂಡು ಅಹುದೆಮ್ಮೆ ಕಥೋಲಿಕಸರನ್ನು ಶಿರಚ್ಛೇದನ ಮಾಡಿದನು. ಅವರ ಕಾಲದ ನಂತರ ಕೊಮ್‌ಯೇಶು ಎಂಬವರು ಕಥೋಲಿಕೋಸರಾಗಿ ಬಂದರು. ಅವರು 920ನೇ ಇಸವಿಯಲ್ಲಿ ಮೃತಪಟ್ಟರು. ಅವರ ನಂತರ ಸಮುವೇಲ್ ಎಂಬವರು ಕಥೋಲಿಕಸರಾಗಿ 925ನೇ ಇಸವಿಯಲ್ಲಿ ಕಾಯುಬಿಟ್ಟರು. ಇದರ ನಂತರ ಸ್ವಲ್ಪ ಕಾಲ ಕಥೋಲಿಕಸರ ಸ್ಥಾನವು ಇಲ್ಲದೆ ಹೋಯಿತು. ಕ್ರಿ. ಶ. 940ನೇ ಇಸವಿಯಲ್ಲಿ ಅತನಾಸಿಯಸ್ ಗಾಮೋಲೊ ಎಂಬವರೊಬ್ಬರು ಅಂತಿಯೋಕದ ಪತ್ರಿಯಾರ್ಕರಾಗಿ ಬಂದರು. ಇವರ ಕಾಲದಲ್ಲಿ ಟೈಗ್ರೀಸ್ ಎಂಬ ಊರಿನ ಬಿಶೋಪರೆಲ್ಲರೂ ಒಟ್ಟಾಗಿ ಪೂರ್ವದವರಿಗೆ ಬಿಶೋಪರನ್ನು ನೇಮಿಸಿಕೊಡಬೇಕೆಂದು ಪತ್ರಿಯಾರ್ಕರೊಡನೆ ವಿಜ್ಞಾಪಿಸಿಕೊಂಡರು. ಆದರೆ ಪತ್ರಿಯಾರ್ಕರು ನಿಶೇಯ ಸಭೆಯ ಠರಾವುಗಳನ್ನು ತಿಳಿಸಿದರು. ಪೂರ್ವದ ಇಗರ್ಜಿಗಳ ಕಥೋಲಿಕಸರು ಮೃತಪಟ್ಟ ನಂತರ ಪೂರ್ವದ ಕ್ರೈಸ್ತರು ಒಟ್ಟು ಸೇರಿ, ಒಬ್ಬರನ್ನು ಕಥೋಲಿಕಸ್ ಸ್ಥಾನಕ್ಕೆ ದೀಕ್ಷೆ ಕೊಡಬಹುದೆಂದು ಹೇಳಿದರು. ಪತ್ರಿಯಾರ್ಕರ ಹೇಳಿಕೆಯ ಪ್ರಕಾರವೇ ಮುಳ್ಳುತಾ

ಎಂಬವರೊಬ್ಬರನ್ನು ಕಥೋಲಿಕಸ್ ಪಟ್ಟಕ್ಕೇರಿಸಿದರು. ಪೂರ್ವದ ಕ್ರೈಸ್ತ ಸಭೆಯ ಎಲ್ಲಾ ಇಗರ್ಜಿಗಳ ಅಧಿಕಾರವು ಇವರಿಗೇನೇ ಕೊಟ್ಟಿತ್ತು. ಮಾತ್ರವಲ್ಲದೆ ನಿಶಯಿ ಸಭೆಯ ಠರಾವುಗಳಿಗನುಸಾರವಾಗಿ ಒಂದು ಹೊಸ ಕಾನೂನನ್ನು ಜ್ಯಾರಿಗೆ ತಂದರು. ಅದೇನೆಂದರೆ—"ಮಾರ್‌ಮತ್ತಾಯಿ" ಎಂಬ ಆಶ್ರಮದ ಮೆಟ್ರೊಪೊಲಿಟನರನ್ನು ಟಗ್ರೀಸಿನಲ್ಲಿದ್ದ ಕಥೋಲಿಕಸರೇ ಪಟ್ಟ ಕೊಡಬೇಕೆಂದು. ಇವರು ಯಾವ ಸಿನಡಿನಲ್ಲಾದರೂ ಕಥೋಲಿಕೋಸರೇ ಬಲಗಡೆಯಲ್ಲಿ ಕುಳಿತುಕೊಳ್ಳಬೇಕಿತ್ತು; ಮೂರುತಾ ಎಂಬ ಕಥೋಲಿಕೋಸರು ಒಟ್ಟಿಗೆ 6 ಮಂದಿ ಬಿಶೋಪರಿಗೂ, ಒಬ್ಬರು ಮೆಟ್ರೊಪೊಲಿಟನರಿಗೂ ಪಟ್ಟ ಕಟ್ಟಿದರು. ಇವರೆಲ್ಲರೂ ಮಾರ್‌ಮತ್ತಾಯಿ ಎಂಬ ಆಶ್ರಮದಲ್ಲಿ ಒಟ್ಟುಕೂಡಿ ಪೂರ್ವದ ಕ್ರೈಸ್ತ ಸಭೆಗಳನ್ನು 12 ಭಾಗಗಳನ್ನಾಗಿ ಮಾಡಿದರು. ಕಥೋಲಿಕೋಸರು ಟೈಗ್ರೀಸ್ ಎಂಬಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದರು. ಇವರು 20 ವರ್ಷಗಳ ಕಾಲ ಆಳಿದರು. ಕ್ರೈಸ್ತ ವಿಶ್ವಾಸಿಗಳ ಸಂಖ್ಯೆಯನ್ನು ಹೆಚ್ಚಿಸಿದರು. ಈ ಕಥೋಲಿಕೋಸರು ಟೈಗ್ರೀಸಿನಲ್ಲಿಯೇ ಮೃತಪಟ್ಟರು. ಇದೇ ಸಮಯದಲ್ಲಿ ಅಂತಿಯೋಕದ ಪತ್ರಿಯಾರ್ಕರಾಗಿದ್ದ ಮಾರ್ ಯುಹಾನೋನ್ ಎಂಬವರು ಕೂಡ ಮೃತಪಟ್ಟರು. ಇವರ ಕಾಲದ ನಂತರ ತೆಯೊದೋರ್ ಎಂಬವರು ಪತ್ರಿಯಾರ್ಕರಾದರು. ಈ ಪತ್ರಿಯಾರ್ಕರು ಟೈಗ್ರೀಸಿನಲ್ಲಿದ್ದ ಕಥೋಲಿಕೋಸರ ಮೇಲೆ ಅಧಿಕಾರ ನಡಿಸಬೇಕೆಂದು ಅಪೇಕ್ಷಿಸಿ ಪೂರ್ವದ ಎಲ್ಲ ಬಿಶೋಪರುಗಳಿಗೆ ಪತ್ರಗಳನ್ನು ಬರೆದು ಅವರೆಲ್ಲರ ಸಮ್ಮತಿಯನ್ನು ಪಡೆದುಕೊಂಡರು. ಆದರೆ, ಇವರ ಒಪ್ಪಂದದಲ್ಲಿ ಒಂದು ಶರ್ತವಿದ್ದಿತು. ಅದಾವುದೆಂದರೆ ಪತ್ರಿಯಾರ್ಕರು ಕಥೋಲಿಕಸರಿಗೆ ಪಟ್ಟಕೊಡಬೇಕು. ಹಾಗೆಯೇ ಕಥೋಲಿಕಸರಿಗೆ ಪತ್ರಿಯಾರ್ಕರು ಪಟ್ಟಕೊಡಬೇಕೆಂಬುವುದು. ಈ ಒಪ್ಪಂದದ ಪ್ರಕಾರ ಮೂರುತಾ ಎಂಬ ಕಥೋಲಿಕೋಸರ ಉತ್ತರಾಧಿಕಾರಿಯಾಗಿ ದನಹಾ ಎಂಬವರನ್ನು ಟೈಗ್ರೀಸ್ ಎಂಬಲ್ಲಿ ಕಥೋಲಿಕಸರಾಗಿ ಪತ್ರಿಯಾರ್ಕರು ನೇಮಿಸಿದರು. ಹೀಗೆ ಸ್ವಲ್ಪ ಕಾಲ ಕಳೆಯಿತು. ಸ್ವಲ್ಪಕಾಲದ ನಂತರ ಟೈಗ್ರೀಸಿನ ಕಥೋಲಿಕಸರಾದ ಮಾರ್ ಅಬ್ರಾಹಾಮ್ ಎಂಬವರೂ ಅಂತಿಯೋಕದ ಪತ್ರಿಯಾರ್ಕರಾಗಿದ್ದ ಮಾರ್ ಅತನಾಸಿಯೋಸ್ ಎಂಬವರೂ ಒಂದೇಕಾಲದಲ್ಲಿ ಕಾಲವಾದರು. ಅಂತಿಯೋಕದ ಸಭೆಯುವರಿಗೆ ಪತ್ರಿಯಾರ್ಕರನ್ನು ಚುನಾಯಿಸಲಿಚ್ಛೆ ಪೂರ್ವದ ಸಭೆಯುವರು ಬಿಡಲಿಲ್ಲ. ಮಾರ್ ಡೇವಿಡ್ ಎಂಬವರನ್ನು ಪೂರ್ವದ ಸಭೆಯವರು ಕಥೋಲಿಕಸರಾಗಿ ನೇಮಿಸಿದರು. ಇವರ ಕಾಲದ ನಂತರ ಮಾರ್ ಜೋನ್ ಎಂಬವರನ್ನು ಕಥೋಲಿಕಸರಾಗಿ ಮಾಡಿದರು. ಮಾರ್ ಜೋನ್ ಎಂಬ ಕಥೋಲಿಕಸರಿಗೂ, ಮಾರ್ ಜೂಲಿಯನ್ ಎಂಬ ಅಂತಿಯೋಕದ ಪತ್ರಿಯಾರ್ಕರಿಗೂ ಸ್ನೇಹವಿರಲಿಲ್ಲ. ಆದರೆ ಅಂತಿಯೋಕದ ಪತ್ರಿಯಾರ್ಕರು ಸ್ವಲ್ಪ ಸಮಯದಲ್ಲಿಯೇ ಮೃತಪಟ್ಟ ಕಾರಣ ಇವರ ಉತ್ತರಾಧಿಕಾರಿಯಾದ ಎಲಿಯಾಸ್ ಪತ್ರಿಯಾರ್ಕರು ಕಥೋಲಿಕಸರೊಡನೆ ಬಹಳ ಸ್ನೇಹದಿಂದಿದ್ದರು. ಹೀಗೆಯೇ ಸ್ವಲ್ಪಕಾಲ ಕಳೆಯಿತು.



1070ನೇ ವರ್ಷದಲ್ಲಿ ಗೆವರ್ಗಿ ಎಂಬವರನ್ನು ಕೆಲವು ಬಿಶೋಪರು ಕೂಡಿ ಪತ್ರಿಯಾರ್ಕರನ್ನಾಗಿ ಮಾಡಿದರು. ಆದರೆ ಕೆಲವು ಬಿಶೋಪರುಗಳಿಗೆ ಅದು ಸರಿತೋರದೆ ಬೆಸನಹರಿ ಎಂಬ ಊರಿನ ಬಿಶೋಪರುಗಳು ಸಿನಡು ಕೂಡಿ ಮಾರ್ ಯೊಹಾನನ್ ಎಂಬವರನ್ನು ಪತ್ರಿಯಾರ್ಕರನ್ನಾಗಿ ಮಾಡಿದರು. ಇವರು 4 ವರ್ಷಗಳ ಕಾಲ ಆಳಿದರು. ಇವರ ಉತ್ತರಾಧಿಕಾರಿಯಾಗಿ ಮಾರ್ ದಾವೀದ್ ಎಂಬವರನ್ನು ಪತ್ರಿಯಾರ್ಕರನ್ನಾಗಿ ಮಾಡಿದರು. ಇವರಿಗೂ, ಗೆವರ್ಗಿ ಪತ್ರಿಯಾರ್ಕರಿಗೂ ಹೆಚ್ಚಿನ ವೈರತ್ವವಿದ್ದಿತು. ಮಾರ್ ದಾವೀದ್ ಎಂಬವರು ಸುಲ್ತಾನರ ಸಹಾಯದಿಂದ ತಾನೇ ನಿಜವಾದ ಪತ್ರಿಯಾರ್ಕರೆಂದು ಪ್ರಕಟಿಸಿಕೊಂಡರು. ಈ ಕಾರಣದಿಂದ ಇವರಿಗೆ ಸುಲ್ತಾನರಿಂದ ಅಧಿಕಾರ ಪತ್ರವು (Firman) ದೊರಕಿತು. ಈ ಪತ್ರಿಯಾರ್ಕರು ಗೆವರ್ಗಿ ಪತ್ರಿಯಾರ್ಕರ ಕುರಿತು ಅಲ್ಲ ಸಲ್ಲದ ದೂರುಗಳನ್ನು ಹೇಳಿದ ಕಾರಣ ಗೆವರ್ಗಿ ಪತ್ರಿಯಾರ್ಕರನ್ನು ಸುಲ್ತಾನರು 9 ವರ್ಷಗಳ ಕಾಲ ಸೆರೆಮನೆಯಲ್ಲಿಡಿಸಿದರು. ಇಷ್ಟರಲ್ಲಿಯೇ ಆ ಊರಿನ ಸುಲ್ತಾನರು ತೀರಿ ಹೋದರು. ಮೃತಪಟ್ಟ ಸುಲ್ತಾನರ ಮಗನು ಆ ಊರಿಗೆ ರಾಜನಾದನು. ಇವನು ಗೆವರ್ಗಿ ಪತ್ರಿಯಾರ್ಕರನ್ನು ಸೆರೆಮನೆಯಿಂದ ಬಿಡಿಸಿದನು. ಆದರೆ ಪತ್ರಿಯಾರ್ಕರೆಂಬ ಹೆಸರನ್ನು ಧರಿಸಿಕೊಳ್ಳಬಾರದೆಂದು ಅಪ್ಪಣೆ ಕೊಟ್ಟರು. ಗೆವರ್ಗಿ ಪತ್ರಿಯಾರ್ಕರು ಸೆರೆಮನೆಯಿಂದ ಹೊರಬಂದ ಕೂಡಲೇ ಟೈಗ್ರೀಸಿನ ಕಥೋಲಿಕೋಸರ ಬಳಿಗೆ ಹೋದರು. ಅಲ್ಲಿಯುವರು ಅವರನ್ನು ದೇವದೂತನ ಹಾಗೆ ಸ್ವೀಕರಿಸಿದರು. ಇವರಿಗೆ ಹೋದಲ್ಲೆಲ್ಲಾ ಸ್ವಾಗತವು ದೊರಕಿತು. ಈ ಪತ್ರಿಯಾರ್ಕರು ಅಂತಿಯೋಕದಲ್ಲಿಯೇ 10ಮಂದಿ ಬಿಶೋಪರಿಗೆ ಪಟ್ಟ ಕಟ್ಟಿದರು.

ಕ್ರಿ. ಶ. 1101ನೇ ಇಸವಿಯಲ್ಲಿ ಪತ್ರಿಯಾರ್ಕರು ತೀರಿ ಹೋದರು. 1129ನೇ ಇಸವಿಯಲ್ಲಿ ದಿಯೊನೇಸಿಯುಸ್ ಎಂಬವರು ಅಂತಿಯೋಕದ ಪತ್ರಿಯಾರ್ಕರಾದರು. ಇದೇ ಸಮಯದಲ್ಲಿ ಬಸೇಲಿಯೋಸ್ ಎಂಬವರು ಟೈಗ್ರೀಸಿನ ಕಥೋಲಿಕಸರಾದರು. ಅಂತಿಯೋಕದ ಪತ್ರಿಯಾರ್ಕರಿಗೂ ಪೂರ್ವದ ಸಭೆಯ ಜನರಿಗೂ ಅಷ್ಟೊಂದು ಸಮಾಧಾನವಿರಲಿಲ್ಲ. ಇದರ ನಂತರ ಮಾರ್ ಯುಹಾನಾನ್ ಎಂಬ ಪತ್ರಿಯಾರ್ಕರು 1159ನೇ ವರ್ಷ 2ನೇ ಬಸೇಲಿಯೊಸ್ ಎಂಬವರನ್ನು ಕಥೋಲಿಕಸರಾಗಿ ಪಟ್ಟ ಕಟ್ಟಿದರು. ಆದರೆ 10 ವರ್ಷಗಳನಂತರ ಪತ್ರಿಯಾರ್ಕರಿಗೂಕಥೋಲಿಕಸರಿಗೂ ಜಗಳವಾಯಿತು. ಈ ಕಾರಣ ಟೈಗ್ರಿಸಿನ ಕಥೋಲಿಕಸರ ದಿಯೊಸೇಜಿಯಲ್ಲಿರುವವರು ಪತ್ರಿಯಾರ್ಕರ ಹೆಸರನ್ನು ಪೂಜೆಯ ಪುಸ್ತಕಗಳಿಂದ ತೆಗೆದುಹಾಕಿ ಕಥೋಲಿಕಸರ ಹೆಸರನ್ನು ಮಾತ್ರ ಇಟ್ಟುಕೊಂಡರು. ಮಾತ್ರವಲ್ಲದೆ ಪತ್ರಿಯಾರ್ಕರ ದಿಯೊಸೇಜಿನಲ್ಲಿ ಬಿಶೋಪರುಗಳನ್ನು ನೇಮಿಸಲು ಕಥೋಲಿಕಸರನ್ನು ಕಳುಹಿಸಿದರು. ಪತ್ರಿಯಾರ್ಕರಿಗೆ ಸಹಾಯವಾಗಿ ನಿಂತವರಿಗೆ ಕಥೋಲಿಕಸರು ಬಹಿಷ್ಕರಿಸಿದರು. ಕಥೋಲಿಕಸರ ಸಿನೋದು ಕೂಡಿ ಪತ್ರಿಯಾರ್ಕರಿಗೇನೇ ಬಹಿಷ್ಕರಿಸಿದರು. ಪತ್ರಿಯಾರ್ಕರ ಸಿನಡು ಸೇರಿ ಕಥೋಲಿಕಸ

ರನ್ನು ಬಹಿಷ್ಕರಿಸಿದರು. ಇಷ್ಟು ಮಾತ್ರವಲ್ಲದೆ ಪತ್ರಿಯಾರ್ಕರು ಬಹಿರಂಗವಾಗಿ ಒಬ್ಬರನ್ನು ಕಥೋಲಿಕಸರನ್ನಾಗಿ ನೇಮಿಸಲು ಧೈರ್ಯವಿಲ್ಲದೆ ಗುಟ್ಟಿನಲ್ಲಿಯೇ ಒಬ್ಬರನ್ನು ಕಥೋಲಿಕಸರನ್ನಾಗಿ ಮಾಡಿದರು. ಆದರೆ ಆ ಹೊಸ ಕಥೋಲಿಕಸರಿಗೆ ಎಲ್ಲಿಯೂ ಸ್ಥಾನ ಮಾನ ಸಿಗದ ಕಾರಣ ನಿಸಿಬಿನ್ ಎಂಬ ಊರಿಗೆ ಓಡಿಹೋದರು. ಕಥೋಲಿಕಸರು ಹೊಸ ಪತ್ರಿಯಾರ್ಕರನ್ನು ನೇಮಿಸಬೇಕೆಂದು ಆಲೋಚಿಸಿದರು. ಆದರೆ 1180ನೇ ಇಸವಿಯಲ್ಲಿ ಕಥೋಲಿಕೋಸರು ಮೃತಪಟ್ಟರು. ನಾಲ್ಕು ತಿಂಗಳ ಅನಂತರ ಪತ್ರಿಯಾರ್ಕರು ನೇಮಿಸಿದಂಥ ಕಥೋಲಿಕೋಸರು ಕೂಡಾ ತೀರಿಹೋದರು. ಇಷ್ಟೆಲ್ಲಾ ಸಂಗತಿಗಳು ನಡೆದ ನಂತರ ಇಂತಹ ಜಗಳಗಳು ಉಂಟಾಗಬಾರದೆಂಬ ಇರಾದೆಯಿಂದ 1180ನೇ ವರ್ಷದಲ್ಲಿ ಕಪ್ತಸೋ ಎಂಬ ಊರಿನಲ್ಲಿ ಒಂದು ಸಿನಡು ಸೇರಿಸಿದರು. ಸದರಿ ಸಿನಡಿನಲ್ಲಿ ಮಂಜೂರು ಮಾಡಿದ ಠರಾವುಗಳನ್ನು ಬಾರ್ ಹೆಬ್ರಾಯ ಎಂಬ ಅಂತಿಯೋಕದ ಕ್ರೈಸ್ತ ಸಭೆಯ ಕಾನೂನುಗಳಲ್ಲಿ ಸೇರಿಸಿರುವರು. ಆ ಸಭೆಯಲ್ಲಿ ಮಾಡಿದ ಠರಾವುಗಳನ್ನು ಈ ಕೆಳಗೆ ತಿಳಿಸಿರುತ್ತೇವೆ: —

1. ಮಾರ್ ಮತ್ತಾಯಿ ಎಂಬ ಆಶ್ರಮದಲ್ಲಿರುವ ಬಿಶೋಪರು, ಸನ್ಯಾಸಿಗಳು ಟೈಗ್ರಿಸಿನಲ್ಲಿರುವ ಕಥೋಲಿಕೋಸರ ಕೈಕೆಳಗಿರಬೇಕು.

2. ಕಥೋಲಿಕೋಸರ ಗಡಿಯೊಳಗೆ ಅಂತಿಯೋಕದ ಪತ್ರಿಯಾರ್ಕರು ಕಥೋಲಿಕೋಸರ ಅನುಮತಿ ಶಿವಾಯ್ ಪ್ರವೇಶಿಸಬಾರದು. ಆ ಪ್ರಕಾರವೇ ಪತ್ರಿಯಾರ್ಕರ ಗಡಿಯೊಳಗೆ ಕಥೋಲಿಕೋಸರು ಪತ್ರಿಯಾರ್ಕರ ಅನುಮತಿ ಶಿವಾಯ್ ಪ್ರವೇಶಿಸಬಾರದು.

3. ಯಾವುದಾದರೊಂದು ಸಭೆಯಲ್ಲಿ ಪತ್ರಿಯಾರ್ಕರು, ಕಥೋಲಿಕೋಸರು ಒಟ್ಟು ಸೇರಿ ಬರುವುದಾದರೆ ಪತ್ರಿಯಾರ್ಕರ ಬಲಗಡೆಯಲ್ಲಿ ಕಥೋಲಿಕೋಸರನ್ನು ಕೂತುಕೊಳ್ಳಿಸಬೇಕು. ಪೂಜೆ ಪುಸ್ತಕಗಳಲ್ಲಿ ಅವರಿಬ್ಬರ ಹೆಸರುಗಳನ್ನು ಸ್ಮರಿಸಬೇಕು.

4.. ಕಥೋಲಿಕೋಸರು ಜೀವದಿಂದಿರುವಾಗ ಅವರೊಪ್ಪಿಗೆ ಇಲ್ಲದೆ ಪತ್ರಿಯಾರ್ಕರಿಗೆ ಪಟ್ಟ ಕೊಡಲಾಗುವದಿಲ್ಲ. ಪೂರ್ವದ ಕ್ರೈಸ್ತ ಸಭೆಯವರಿಗೆ ಕಥೋಲಿಕೋಸರ ಪಟ್ಟವನ್ನು ಕೊಡಲಿಕ್ಕೂ ಅಧಿಕಾರವಿದೆ.

ಒಂದು ಚರ್ಚಾಸ್ಪದವಾದ ಸಂಗತಿಯು ನಿಶೇಯ ಸಿನಡಿನಲ್ಲಿ ಬಂದಿತು. ಪತ್ರಿಯಾರ್ಕರಿಗೆ ಪಟ್ಟ ಕೊಡುವಾಗ ಅವರ ತಲೆಯಮೇಲೆ ಕೈ ಇಡುವಂತಹ ಅಧಿಕಾರವು ಪತ್ರಿಯಾರ್ಕರ ಸಿನಡಿಗೋ ಅಥವಾ ಕಥೋಲಿಕೋಸರ ಸಭೆಯ ಸಿನಡಿಗೋ ಎಂದು



ನಿರ್ಣಯವಾಗಬೇಕಿತ್ತು. ಆ ಬಗ್ಗೆ ನಿಶೇಯ ಸಭೆಯವರು ನಿರ್ಣಯಿಸಿದ್ದೇನೆಂದರೆ, "ಪೂರ್ವದ ಕ್ರೈಸ್ತ ಸಭೆಯ ಎರಡು ಬಿಶೋಪರು ಮತ್ತು ಪತ್ರಿಯಾರ್ಕರ ಸಭೆಯ ಎರಡು ಬಿಶೋಪರು ಒಟ್ಟುಕೂಡಿ ನಿರ್ಣಯವಾಗ ಬೇಕೆಂದಾಯಿತು.

5 ಕದರ್ೂರ್ ಬೆಸ್‌ಸೆಬುವಾಯ ಎಂಬ ದಿಯೋಸೆಜಿಗಳು ಟೈಗ್ರೀಸಿನ ಕಥೋಲಿಕೋಸರ ಆಡಳಿತೆಯೊಳಗಿರಬೇಕೆಂದೂ, ನಗರೋಯ, ಮಾದೋಯ ಎಂಬ ಊರುಗಳು ಪತ್ರಿಯಾರ್ಕರ ಆಡಳಿತೆಯೊಳಗಿರ ಬೇಕೆಂದೂ ನಿಶ್ಚಯಿಸಿದರು.

6 ಪತ್ರಿಯಾರ್ಕರು ಮತ್ತು ಕಥೋಲಿಕೋಸರು ತಾವು ಹಾಕಿದ ಬಹಿಷ್ಕಾರಗಳನ್ನು ಹಿಂತೆಗೆಯ ಬೇಕಾಯಿತು.

7 ಪತ್ರಿಯಾರ್ಕರು ತನ್ನ ದಿಯೋಸೆಜಿಗೆ ಕಥೋಲಿಕೋಸರು ಕಳುಹಿಸಿಕೊಡುವಂತಹ ಮೂವರು ಬಿಶೋಪರುಗಳನ್ನು ಸ್ವೀಕರಿಸಬೇಕು.

8 ಕಥೋಲಿಕೋಸರು ಬಹಿಷ್ಕರಿಸುವಂತಹ ಬಿಶೋಪರುಗಳನ್ನು ಪತ್ರಿಯಾರ್ಕರು ಕೂಡಾ ಬಹಿಷ್ಕರಿಸಬೇಕು. ಹೀಗಾದುದರಿಂದ ಕಥೋಲಿಕೋಸರೇ ತಾವು ಬಹಿಷ್ಕರಿಸಿದ ಬಿಶೋಪರುಗಳ ಹೆಸರುಗಳನ್ನು ಪತ್ರಿಯಾರ್ಕರಿಗೆ ಕಳುಹಿಸಬೇಕು.

ಮೇಲೆ ಹೇಳಿದ ನಿಶೇಯ ಸಭೆಯ ಠರಾವುಗಳಿಗನುಸಾರವಾಗಿಯೇ ಪತ್ರಿಯಾರ್ಕರೂ, ಕಥೋಲಿಕೋಸರೂ ನಡೆದುಬಂದರು. ಇನ್ನಾದರೂ ಪತ್ರಿಯಾರ್ಕರಿಗೂ, ಕಥೋಲಿಕೋಸರಿಗೂ ಇರುವಂತಹ ಅಧಿಕಾರಗಳು ಯಾವುವು ಎಂಬುದು ಸ್ಪಷ್ಟವಾಗಿ ತಿಳಿಯಿತಲ್ಲವೇ?

ಕ್ರಿ. ಶ. 1189ನೇ ಇಸವಿಯಲ್ಲಿ ಇಗ್ನೇಶಿಯಸ್ ಎಂಬವರು ಅಂತಿಯೋಕದ ಪತ್ರಿಯಾರ್ಕರಾದರು. ಆದರೆ ಅಂತಿಯೋಕದ ಪತ್ರಿಯಾರ್ಕರಿಗೆ ಪಟ್ಟವನ್ನು ಕೊಡುವಾಗ ಟೈಗ್ರೀಸಿನ ಕಥೋಲಿಕೋಸರಾದ ಸರ್ಗಿಸ್ ಎಂಬವರು ಹೋಗಲೇ ಇಲ್ಲ. ಇದಲ್ಲದೆ ಕಥೋಲಿಕೋಸರ ಆಡಳಿತೆಯೊಳಗಿದ್ದ ಪೂರ್ವ ಸಭೆಯವರು ಪತ್ರಿಯಾರ್ಕರ ಹೆಸರನ್ನು ಪೂಜೆಪುಸ್ತಕಗಳಿಂದ ತೆಗೆದು ಹಾಕಿದರು. ಈ ರೀತಿಯೇ ಕಾಲವನ್ನು ಕಳೆದರು. ಸ್ವಲ್ಪ ಕಾಲದ ನಂತರ ಅತನಾಸಿಯೋಸ್ ಎಂಬ ಕಥೋಲಿಕೋಸರ ಕಾಲದಲ್ಲಿ ದಿಯೋನಿಶಿಯಸ್ ಎಂಬವರು ಅಂತಿಯೋಕದ ಪತ್ರಿಯಾರ್ಕರಾದರು. ಈ ಪತ್ರಿಯಾರ್ಕರು ಪಟ್ಟಕ್ಕೆ ಬಂದ ಕೂಡಲೇ ಕಥೋಲಿಕೋಸರ ಆಡಳಿತೆಯೊಳಗಿದ್ದ ಪೂರ್ವದ ಇಗರ್ಜಿಗಳನ್ನು ನೋಡಬೇಕೆಂಬ ಆಸೆಯಿಂದ ಸನ್ಯಾಸಿಯ ವೇಷವನ್ನು ತಾಳಿ ಕಥೋಲಿಕೋಸರ ಗಡಿಯೊಳಗಿನ ಇಗರ್ಜಿಗಳಿಗೆ ಭೇಟಿ ಮಾಡಿದರು. ಹಲವು ವರ್ಷಗಳ ಕಾಲ ಇವರು

ಕಥೋಲಿಕೋಸರ ಇಗರ್ಜಗಳಲ್ಲಿಯೇ ವಾಸಮಾಡಿದರು. ಆದರೆ ಕಥೋಲಿಕೋಸರಿಗೆ ಇವರು ಪತ್ರಿಯಾರ್ಕರೆಂದು ತಿಳಿಯಲಿಲ್ಲ. ಕಥೋಲಿಕೋಸರು ಇವರ ಭಕ್ತಿಯನ್ನೂ ಒಳ್ಳೆಯ ನಡತೆಯನ್ನೂ ಕಂಡು ಇವರಿಗೆ ಬಿಶೋಪರ ಪಟ್ಟವನ್ನು ಕೊಡಬೇಕೆಂದು ಎಣಿಸಿ ತನ್ನ ಉದ್ದೇಶವನ್ನು ಅವರೊಡನೆ ತಿಳಿಸಿದರು. ಆದರೆ ಅವರು ಸಮ್ಮತಿಸಲಿಲ್ಲ. ಕಥೋಲಿಕೋಸರು ಅವರನ್ನು ಬಿಶೋಪರಾಗ ಬೇಕೆಂದು ಒತ್ತಾಯಪಡಿಸಿದ ಕಾರಣ ಅವರು ತನ್ನ ನಿಜಸಂಗತಿಯನ್ನು ಅವರಿಗೆ ತಿಳಿಯಪಡಿಸಿದರು. ಕಥೋಲಿಕೋಸರು ಇದನ್ನು ತಿಳಿದು ಆಶ್ಚರ್ಯಪಟ್ಟು ಸಂತೋಷಗೊಂಡರು. ಇವರಿಬ್ಬರೂ ಸಮಾಧಾನದಿಂದ ಕಾಲ ಕಳೆದರು.

ಕ್ರಿ. ಶ. 1352ನೇ ಇಸವಿಯಲ್ಲಿ ಇವರಿಬ್ಬರೂ ಕಾಲವಾದರು. ಕ್ರಿ.ಶ.1357ನೇ ವರ್ಷದಲ್ಲಿ ಪತ್ರಿಯಾರ್ಕರ ಸ್ಥಾನಕ್ಕೆ ಒಬ್ಬ ವ್ಯಕ್ತಿಯನ್ನು ಚುನಾಯಿಸುವ ಮೊದಲೇ ಪೂರ್ವ ಸಭೆಯವರು ಬಸೋಲಿಯೋಸ್ ಎಂಬವರೊಬ್ಬರನ್ನು ಕಥೋಲಿಕೋಸರಾಗಿ ಮಾಡಿದರು. ಇದಾದ ನಂತರ ತೆವೊದೋಸಿಯಸ್ ಎಂಬೊಬ್ಬರನ್ನು ಮಾರ್ದಿನ್ ಊರಿನವರು ಅಂತಿಯೋಕದ ಪತ್ರಿಯಾರ್ಕರ ಸ್ಥಾನಕ್ಕೆ ಚುನಾಯಿಸಿದರು. ಅಂತಿಯೋಕದ ಪತ್ರಿಯಾರ್ಕರೂ, ಟೈಗ್ರೀಸಿನ ಕಥೋಲಿಕೋಸರೂ ಸಮಾಧಾನವಿಲ್ಲದೆ ಕಾಲಕಳೆಯಬೇಕಾಯಿತು ಆದರೆ ಸ್ವಲ್ಪ ಸಮಯ ಕಳೆದ ನಂತರ ಇವರಿಬ್ಬರೊಳಗೂ ಸಮಾಧಾನ ಉಂಟಾಯಿತು. ಕ್ರಿ. ಶ. 1489ನೇ ಇಸವಿಯಲ್ಲಿ ಪತ್ರಿಯಾರ್ಕರಿಗೂ ಕಥೋಲಿಕೋಸರಿಗೂ ಇನ್ನೊಮ್ಮೆ ಕಲಹ ಉಂಟಾಯಿತು. ಕಥೋಲಿಕೋಸರ ದಿಯೊಸೆಜಿನಲ್ಲಿ ಎಸ್ಸೂನ್ಸ್ ಎಂಬ ಪಂಗಡದ ಜನರಿದ್ದರು. ಇವರು ತಮಗೆ ಒಬ್ಬ ಬಿಶೋಪರನು. ಪಟ್ಟ ಕಟ್ಟಿಕೊಡಬೇಕೆಂದು ಅಂತಿಯೋಕದ ಪತ್ರಿಯಾರ್ಕರೊಡನೆ ಕೇಳಿಕೊಂಡರು. ಆದರೆ ಪತ್ರಿಯಾರ್ಕರು "ಕಥೋಲಿಕೋಸರು ಆಡಳಿತೆ ನಡಿಸುವಂಥಹ ಪ್ರಾಂತ್ಯದಲ್ಲಿ ತನಗೆ ಬಿಶೋಪರನ್ನು ನಿಯಮಿಸುವ ಅಧಿಕಾರವಿಲ್ಲವೆಂದೂ, ಈ ಕಾರಣದಿಂದ ಬೇಡಿಕೆಯನ್ನು ನಿರಾಕರಿಸಿದೆ"ನೆಂದೂ ತಿಳಿಸಿದರು. ಸ್ವಲ್ಪ ಸಮಯದ ವರೇಗೆ ಪತ್ರಿಯಾರ್ಕರೂ ಕಥೋಲಿಕೋಸರೂ ಕಲಹದಿಂದಿದ್ದು ಅನಂತರ ಇವರೊಳಗೆ ಸಮಾಧಾನ ಉಂಟಾಗಿ ಎಸ್ಸೂನ್ ಪಂಗಡದವರಿಗೆ ಒಬ್ಬ ಬಿಶೋಪರನ್ನು ದಯಪಾಲಿಸಿದರು. ಹೀಗೆ ಪತ್ರಿಯಾರ್ಕರಿಗೂ ಕಥೋಲಿಕೋಸರಿಗೂ ಕೆಲವು ವೇಳೆ ಕಲಹವೂ, ಕೆಲವು ವೇಳೆ ಸಮಾಧಾನವೂ ಇರುತ್ತಲೇ ಇದ್ದವು. ಕ್ರಿ. ಶ. 1575ನೇ ವರ್ಷದಲ್ಲಿ ಇಗ್ನೇಶಿಯಸ್ ಎಂಬವರೊಬ್ಬರು ಅಂತಿಯೋಕದ ಪತ್ರಿಯಾರ್ಕರಾದರು. ಇದೇ ಸಮಯದಲ್ಲಿ ಗ್ರಿಗೋರಿಯೋಸ್ ಬಾರ್ ಎಬ್ರಾಯ ಎಂಬವರೊಬ್ಬರು ಟೈಗ್ರೀಸಿನ ಕಥೋಲಿಕೋಸರಾದರು. ಈ ಕಥೋಲಿಕೋಸರು ಸೀರಿಯನ್ ಮತತತ್ವಗಳನ್ನೂ ವ ಅದರ ಕಾನೂನುಗಳನ್ನೂ ಬಲ್ಲಂಥ ದೊಡ್ಡ ಪಂಡಿತರಾಗಿದ್ದರು. ಇವರ ಕಾಲದಲ್ಲಿ ಸಿರಿಯನ್ ಸಭೆಯ ಇಗರ್ಜಿಗಳು ಹೆಚ್ಚುತ್ತಾ ಬಂದವು. ಇವರು ಬಹಳ ಬುದ್ಧಿವಂತರೂ,



ಜ್ಞಾನಿಯೂ, ಭಕ್ತಿವಂತರೂ, ದೇವರಿಗೆ ಭಯಪಡುವಂತವರೂ ಆಗಿದ್ದರು ಈ ಕಥೋಲಿಕೋಸರು ತನ್ನ ಆಡಳಿತೆಯೊಳಗಿನ ಇಗರ್ಜಿಗಳನ್ನು ಸಂದರ್ಶಿಸುವಾಗ ಪತ್ರಿಯಾರ್ಕರು ಇವರಿಗೆ ಭೇಟಿಯಾದರು. ಇವರಿಬ್ಬರೂ ಬಹಳ ಸಮಾಧಾನದಿಂದಲೂ, ಸ್ನೇಹದಿಂದಲೂ ಕಾಲವನ್ನು ಕಳೆದರು. ಅವರವರ ಗಡಿಯೊಳಗೆ ಅವರವರು ತಮ್ಮ ಅಧಿಕಾರಗಳನ್ನು ನಡಿಸಿಕೊಂಡು ಬರುತ್ತಿದ್ದರು. ಕ್ರಿ. ಶ. 1594ನೇ ಇಸವಿಯಲ್ಲಿ ಆ ಪತ್ರಿಯಾರ್ಕರು ತೀರಿ ಹೋದರು. ಇವರ ಕಾಲದ ನಂತರ ಅಂತಿಯೋಕದ ಸಭೆಯವರು ಗ್ರಿಗೋರಿಯೋಸ್ ಬಾರ್ ಎಬ್ರಾಯರೆಂಬ ಕಥೋಲಿಕೋಸರನ್ನು ವಿಚಾರಿಸದೆ, ಒಬ್ಬರನ್ನು ಪತ್ರಿಯಾರ್ಕರ ಪಟ್ಟಕ್ಕೆ ನೇಮಿಸಿದರು. ನವೀನ ಪತ್ರಿಯಾರ್ಕರು ಕಥೋಲಿಕೋಸರಿಗೆ ತಾವು ಸ್ನೇಹದಿಂದಿರೋಣವೆಂದು ಕೇಳಿಕೊಂಡರು. ಆದರೆ ಬಾರ್‌ಎಬ್ರಾಯ ಕಥೋಲಿಕೋಸರು "ಅಂತಿಯೋಕದ ಪತ್ರಿಯಾರ್ಕರನ್ನು ಚುನಾಯಿಸುವಾಗ ಕಥೋಲಿಕೋಸರನ್ನು ಕರೆಕಳುಹಿಸಬೇಕೆಂಬ ನಿಯಮಕ್ಕನುಸಾರವಾಗಿ ನಿಮ್ಮನ್ನು ಚುನಾಯಿಸುವಾಗ ನಮಗೆ ತಿಳಿಸದೆ ಇದ್ದ ಕಾರಣ ನಾವು ನಿಮ್ಮೊಡನೆ ಸ್ನೇಹದಿಂದಿರಲು ಇಚ್ಛಿಸುವುದಿಲ್ಲ"ವೆಂದು ತಿಳಿಸಿದರು. ಆದರೆ ಪತ್ರಿಯಾರ್ಕರು ಕಥೋಲಿಕೋಸರೊಡನೆ ಸ್ನೇಹದಿಂದಿರಬೇಕೆಂದು ಬಹಳ ಪ್ರಯತ್ನಪಟ್ಟರು. ಸಂಗತಿಗಳು ಹೀಗಿರುತ್ತಾ ಪತ್ರಿಯಾರ್ಕರ ಕಡೆಯವರು ಕಥೋಲಿಕೋಸ್ ಬಾರ್ ಎಬ್ರಾಯರಿಗೆ ಪತ್ರಿಯಾರ್ಕರಾಗಬೇಕೆಂದು ಆಶೆಯಿಂದಲೇ ಇಷ್ಟೆಲ್ಲಾ ಮಾಡಿದರೆಂದು ಸುದ್ದಿಹಬ್ಬಿಸಿದರು. ಇದನ್ನು ಬಾರ್‌ಎಬ್ರಾಯ ಕಥೋಲಿಕೋಸರು ಕೇಳಿ ಪತ್ರಿಯಾರ್ಕರಿಗೆ ಬರೆದುದೇನೆಂದರೆ:— ನಾವು ಪತ್ರಿಯಾರ್ಕ ಸ್ಥಾನಕ್ಕೆ ಬರಬೇಕೆಂಬ ಆಶೆಯಿಂದ ನಿಮ್ಮನ್ನು ನಿಷೇಧಿಸಿದೆವೆಂದು ತಿಳಿದಿರಾ? ನಮ್ಮ ಮನಸ್ಸಿನ ನಿಜಾಂಶವು ಸರ್ವವನ್ನು ಬಲ್ಲಂಥ ದೇವರಿಗೆ ಗೊತ್ತು? ನಮ್ಮ ದೇಹದ ಯಾವತ್ತು ಅಂಗವು ಪತ್ರಿಯಾರ್ಕರ ಸ್ಥಾನಕ್ಕೆ ಆಶೆಪಡುವುದಿಲ್ಲ. ನಾವು ಆಶೆ ಪಡತಕ್ಕಂಥ ಸಂಗತಿ ಯಾವುದೂ ಆಸ್ಥಾನದಲ್ಲಿಲ್ಲ. ನನಗೆ ಕಥೋಲಿಕೋಸರ ಪಟ್ಟವು ಸಿಕ್ಕಿ 40 ವರ್ಷಗಳಾದುವು. ಇಷ್ಟೊಂದು ಸಮಯದಲ್ಲಿ 20 ವರ್ಷ ಪಶ್ಚಿಮ ಇಗರ್ಜಿಗಳ ಮೇಲೂ, ಇನ್ನುಳಿದ 20 ವರ್ಷ ಪೂರ್ವ ಇಗರ್ಜಿಗಳ ಮೇಲೂ ಆಡಳಿತೆ ನಡಿಸಿ ತೃಪ್ತಿಹೊಂದಿರುತ್ತೇವೆ. ಇನ್ನುಳಿದ ಸ್ವಲ್ಪ ಆಯುಸ್ಸನ್ನು ಸಮಾಧಾನದಿಂದ ಕಳೆಯಬೇಕೆಂಬುದೇ ನಮ್ಮ ಅಪೇಕ್ಷೆ. ಮಾತ್ರವಲ್ಲದೆ ದೇವರ ಕೃಪೆಯಿಂದ ನಮ್ಮ ಪ್ರಾಂತ್ಯದಲ್ಲಿ ನಮಗೆ ತೃಪ್ತಿ ಇದೆ. ಸಭೆಯನ್ನು ಬಿಟ್ಟು ಹೋಗುವಂತಹ ಆವಶ್ಯಕತೆಯೇ ನಮಗೆ ಕಾಣುವುದಿಲ್ಲ. ಪತ್ರಿಯಾರ್ಕರ ಸ್ಥಾನದ ಕಡೆಗೆ ಮನ ಒಲಿಯಲು ಅಗತ್ಯವುಳ್ಳ ಯಾವುದೊಂದು ಸಂಗತಿಯೂ ನಿಮ್ಮಲ್ಲಿ ಕಾಣುವುದಿಲ್ಲ. ಪಶ್ಚಿಮ ಪ್ರಾಂತ್ಯದ ಇಗರ್ಜಿಗಳು ನಾಶವಾಗಿ ಹೋದುವು. ಅಂತಿಯೋಕದ ಸಭೆಯು ತನ್ನ ಸ್ಥಿತಿಯನ್ನು ಕಂಡು ಗೋಳಾಡಿ ತನ್ನ ದಿನಗಳನ್ನು ಕಳೆಯುತ್ತದೆ. ಲ ಕುಬೀನ್ ಇತ್ಯಾದಿ ಏಳು ದಿಯೋಸೆಜಗಳಲ್ಲಿ ಇದ್ದಂತೆ ಇಷ್ಟೊಂದು ಮನೆಗಳಲ್ಲಿ ಈಗ ಒಂದಾದರೂ

ಉಳಿದಿಲ್ಲ. ನಿಜಸಂಗತಿಯು ಈ ರೀತಿ ಇರುವಾಗ ಪತ್ರಿಯಾರ್ಕರ ಸ್ಥಾನದ ಮೋಹದಿಂದ ನಿಮ್ಮನ್ನು ನಿಷೇಧಿಸಿದೆವೆಂದು ತಿಳಿಯಬೇಡಿರಿ. ಪವಿತ್ರ ಕ್ರೈಸ್ತ ಸಭೆಯ ಕಾನೂನುಗಳಿಗೆ ವಿರುದ್ಧವಾಗಿರುವ ನಿಮ್ಮ ಕಾರ್ಯಗಳನ್ನು ನೋಡಿ ಅವುಗಳಿಗಾಗಿಯೇ ನಿಮ್ಮನ್ನು ಖಂಡಿಸುತ್ತೇವೆಂದು ತಿಳಿದುಕೊಳ್ಳಿರಿ."

ಈ ಮೇಲಿನ ಮಾತುಗಳಿಂದ ಕಥೋಲಿಕೋಸರಿಗೂ ಪತ್ರಿಯಾರ್ಕರಿಗೂ ಇರುವಂತಹ ಪರಸ್ಪರ ಸಮ್ಮಂಧವನ್ನು ವಾಚಕರು ಆಲೋಚಿಸಿಕೊಳ್ಳಿರಿ. ಇದೇ ಗ್ರೆಗೋರಿಯಸ್ ಬಾರ್‌ಎಬ್ರಾಯ ಎಂಬ ಕಥೋಲಿಕೋಸರು ಸೀರಿಯನ್ ಸಭೆಗೆ ಸಮ್ಮಂಧಪಟ್ಟ ಪುಸ್ತಕಗಳನ್ನು ರಚಿಸಿರುವರು. ಸೀರಿಯನ್ ಸಭೆಯು ಎರಡು ಪಂಗಡಗಳು ಅಂಗೀಕರಿಸುವಂತಹ ಪವಿತ್ರ ಕಾನೂನುಗಳು ಇವರಿಂದಲೇ ರಚಿಸಲ್ಪಟ್ಟವು. ಇವರು ಬರೆದಂತಹ ಎಕ್ಲೆಸಿಯಾಸ್ಟಸಿ (Ecclesiastacy) ಎಂಬ ಚರಿತ್ರೆಯಿಂದಲೇ ಕಥೋಲಿಕೋಸರ ಚರಿತ್ರೆಯನ್ನು ತೆಗೆದು ಬರೆದುದಾಗಿರುತ್ತದೆ. ಇವರು ಪರಿಶುದ್ಧವಾದ ಮೂರೋನ್ ತೈಲವನ್ನು ಅನೇಕ ಬಾರಿ ಪ್ರತಿಷ್ಠಿಸಿರುವರು. ಮಾತ್ರವಲ್ಲದೆ 12 ಮಂದಿ ಬಿಶೋಪರಿಗೆ ಪಟ್ಟವನ್ನು ಕಟ್ಟಿರುವರು. ತಮ್ಮ ಮರಣದ ಕುರಿತು ಸಾಯುವ ಮುಂಚೆಯೇ ಅವರಿಗೆ ತಿಳಿದಿದ್ದಿತು. ಕ್ರಿ. ಶ. 1597ನೇ ವರ್ಷದಲ್ಲಿ ತೋಮೂಸ್ ತಿಂಗಳಿನ 30ನೇ ತಾರೀಕಿನಲ್ಲಿ ಇವರು ಮೃತಪಟ್ಟರು. ಇವರ ಮರಣದ ಸುದ್ದಿಯನ್ನು ಜನರು ಕೇಳಿದ ಕೂಡಲೇ ಎಲ್ಲರೂ ಬಹು ದುಃಖಪಟ್ಟರು. ಇವರ ಮರಣದ ನಂತರ ಇವರ ತಮ್ಮನಾದ ಬಾರ್‌ಸೌಮೊ ಎಂಬವರು ಕಥೋಲಿಕೋಸರಾದರು. ಇವರ ಕಾಲದಲ್ಲಿ ಒಂದೇ ಸಮಯದಲ್ಲಿ 3 ಪತ್ರಿಯಾರ್ಕರು ಆಳಿದರು.

1. ಮೆಲೇತಿನ ಮೆಟ್ರೊಪೊಲಿಟನರಾಗಿದ್ದ ಕೊನ್ಸ್ತಂತ್ಯಾನ್ ಎಂಬವರನ್ನು 3 ಬಿಶೋಪರುಗಳು ಕೂಡಿ ಪತ್ರಿಯಾರ್ಕರನ್ನಾಗಿ ಮಾಡಿದರು.

2. ಫ್ವೀಕಾನ್ ಎಂಬ ದಿಯೋಸೇಜಿಗೆ ಸೇರಿದ ಒಂದು ಸನ್ಯಾಸಿ ಆಶ್ರಮದ ಮೇಲಾಧಿಕಾರಿಯಾಗಿದ್ದ ಮಾರ್ ಮಿಕಯೇಲ್ ಎಂಬವರನ್ನು ಕೆಲವು ಬಿಶೋಪರುಗಳು ಒಟ್ಟು ಕೂಡಿ ಆರ್ಮೇನಿಯನ್ ರಾಜರ ಸಹಾಯದಿಂದ ಪತ್ರಿಯಾರ್ಕರಾಗಿ ಮಾಡಿದರು. ಮಿಕಯೇಲ್ ಪತ್ರಿಯಾರ್ಕರನ್ನು ಕಥೋಲಿಕೋಸರು ಸ್ವೀಕರಿಸಿದರು.

3. ಮರ್ದಿನ್ ಪಟ್ಟಣದಲ್ಲಿ ಬಿಶೋಪರಾಗಿದ್ದ ಬಾದರ್ ಸೋಕೇ ಎಂಬವರನ್ನು ತೂರಬ್ದೀನ್‌ಕಾರರಾದ 4 ಬಿಶೋಪರು ಒಟ್ಟುಕೂಡಿ ಪತ್ರಿಯಾರ್ಕರಾಗಿ ಮಾಡಿದರು.



ಈ ಮೂವರು ಪತ್ರಿಯಾರ್ಕರುಗಳಲ್ಲಿ ಮೊದಲನೆಯವರಾದ ಕೊನ್ಸ್ತಂತ್ಯಾನ್ ಎಂಬವರು 'ಕರ್ದ್ಸ್' ಎಂಬ ಜಾತಿಯ ಜನರಿಂದ ಹತರಾದರು. ದಿಯೊಸೇಜಿನ ಪತ್ರಿಯಾರ್ಕರು ತೀರಿಹೋದ ಕಾರಣ ಇಲ್ಲಿಯ ಜನರು ಮಿಕಯೆಲ್ ಪತ್ರಿಯಾರ್ಕರನ್ನು ಸ್ವೀಕರಿಸಿದರು. ತೂರಬ್ದೀನ್, ಮರ್ದಿನ್ ಎಂಬ ಊರುಗಳ ಇಗರ್ಜಿಗಳವರು ಬಾದರ್ ಸೋಕೇ ಎಂಬ ಮೂರನೇ ಪತ್ರಿಯಾರ್ಕರನ್ನು ಸ್ವೀಕರಿಸಿ, ಇವರ ಹೆಸರನ್ನು ಪೂಜೆಯಲ್ಲಿ ಕೂಡಾ ನೆನಪುಮಾಡಲು ಪ್ರಾರಂಭಿಸಿದರು. ಆದರೆ ಕಥೋಲಿಕೋಸರ ಆಡಳಿತೆಯೊಳಗಿನ ಪೂರ್ವದ ಇಗರ್ಜಿಗಳವರು ಬಾದರ್‌ಸೋಕೇ ಎಂಬ ಪತ್ರಿಯಾರ್ಕರನ್ನು ಅಂಗೀಕರಿಸಲಿಲ್ಲ. ಆದುದರಿಂದ ಬಾದರ್‌ಸೋಕೇ ಪತ್ರಿಯಾರ್ಕರು ಮರ್ದಿನ ಪಟ್ಟಣದ ರಾಜನಾದ ಅಲ್ಮನ್‌ಸೂರ್ ಎಂಬವನ ಹತ್ತಿರ ಹೋಗಿ ತಮ್ಮನ್ನು ಕಥೋಲಿಕೋಸರ ಇಗರ್ಜಿಗಳಲ್ಲಿ ಸ್ವೀಕರಿಸುವುದಿಲ್ಲವೆಂದೂ, ಈ ಕಾರಣದಿಂದ ತಮ್ಮನ್ನು ಕಥೋಲಿಕೋಸರು ಸ್ವೀಕರಿಸುವಂತೆ ಕಥೋಲಿಕೋಸರಿಗೆ ಒಂದು ಪತ್ರವನ್ನು ಕೊಡಬೇಕೆಂದೂ ಹೇಳಿದರು. ಅಂತೆಯೇ ಅಲ್ಮನ್ ಸೂರ್‌ರಾಜನು ಕಥೋಲಿಕೋಸರಿಗೊಂದು ಪತ್ರವನ್ನು ಬರೆದನು. ಕಥೋಲಿಕೋಸರು ಪತ್ರವನ್ನು ಕಂಡರೂ ಅವರು ಆ ಪತ್ರಿಯಾರ್ಕರನ್ನು ಸ್ವೀಕರಿಸಲಿಲ್ಲ. ಇನ್ನೊಮ್ಮೆ ಪತ್ರಿಯಾರ್ಕರು ರಾಜರ ಭೇಟಿಮಾಡಿ ಇನ್ನೊಂದು ಪತ್ರವನ್ನು ಕಥೋಲಿಕೋಸರಲ್ಲಿಗೆ ತೆಗೆದುಕೊಂಡು ಬಂದು, ಸ್ನೇಹದಿಂದಿರಬೇಕೆಂದು ತಿಳಿಸಿದರು. ಈ ಸಾರಿ ಕಥೋಲಿಕೋಸರು ಅವರನ್ನು ಸ್ವೀಕರಿಸಿದರು. ಈ ಕಾರಣದಿಂದ ಬಾದರ್‌ಸೋಕೇ ಪತ್ರಿಯಾರ್ಕರು ಸ್ಥಿರವಾದರು. ಕಥೋಲಿಕೋಸರು 1619ನೇ ಇಸವಿಯಲ್ಲಿ ಮೃತಪಟ್ಟರು. ಬಾದರ್ ಸೋಕೇ ಪತ್ರಿಯಾರ್ಕರು 1644ನೇ ವರ್ಷದಲ್ಲಿ ಕಾಲವಾದರು. ಸ್ವಲ್ಪ ಕಾಲದ ನಂತರ ಮಾರ್ ಇಸ್ಮಯೇಲ್ ಎಂಬವರು ಪತ್ರಿಯಾರ್ಕರ ಸಿಂಹಾಸನವನ್ನೇರಿದರು. 20 ವರ್ಷಗಳ ಕಾಲ ಕಥೋಲಿಕೋಸರಿಲ್ಲದೆ ಕಾಲ ಕಳೆಯಿತು. ಇಸ್ಮಯೇಲ್ ಪತ್ರಿಯಾರ್ಕರು ತಮ್ಮ ತಮ್ಮನ ಮಗನನ್ನು ಕಥೋಲಿಕೋಸನಾಗಿ ಮಾಡಬೇಕೆಂದು ಅಪೇಕ್ಷಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಈ ಮಧ್ಯೆ ತೂರಬ್ದೀನ್ ಊರಿನ ಬಿಶೋಪರಾದ ಮಾರ್ ಸ್ಲೀಹೊ ಬಸೇಲಿಯೋಸ್‌ರಿಗೂ ಪತ್ರಿಯಾರ್ಕರಿಗೂ ಕಲಹ ಉಂಟಾಯಿತು. ಸಮಾಧಾನದಿಂದಿರಬೇಕೆಂದು ಎಣಿಸಿ ಸ್ಲೀಹೊ ಬಸೇಲಿಯೋಸ್ ಬಿಶೋಪರು ಪತ್ರಿಯಾರ್ಕರ ಬಳಿಗೆ ಹೋದರು. ಆದರೆ ಪತ್ರಿಯಾರ್ಕರು ಇವರನ್ನು ಸ್ವೀಕರಿಸಲಿಲ್ಲ. ಮೂರು ದಿನಗಳ ವರೆಗೆ ಪತ್ರಿಯಾರ್ಕರು ಅವರಿಗೆ ಒಳಬರಲು ಅಪ್ಪಣೆ ಕೊಡಲಿಲ್ಲ. ಇವರು ಹಿಂತಿರುಗಿ ಹೋಗುವಾಗ ತೂರಬ್ದೀನ್ ದಿಯೋಸೇಜಿನಲ್ಲಿ ಇದ್ದಂಥ ಬಿಶೋಪರು ಸ್ಲೀಹೊ ಬಸೋಲಿಯೋಸ್ ಬಿಶೋಪರನ್ನು ಪತ್ರಿಯಾರ್ಕರನ್ನಾಗಿ ಮಾಡಿದರು. ಸ್ಲೀಹೊ ಬಸೇಲಿಯೋಸ್ ಪತ್ರಿಯಾರ್ಕರು ಸುಲ್ತಾನನ ಬಳಿ ಹೋಗಿ ಅವನಿಂದ ಅಧಿಕಾರ ಪತ್ರ (Firman) ವನ್ನು ಪಡೆದುಕೊಂಡರು. ಇವರು ತೂರಬ್ದೀನ್

ಪ್ರಾಂತ್ಯದ ಮೊದಲನೇ ಪತ್ರಿಯಾರ್ಕರಾಗಿದ್ದರು. ಇದನ್ನು ಕಂಡು ಇಸ್ಮಯೇಲ್ ಪತ್ರಿಯಾರ್ಕರಿಗೆ ಬಹಳ ದುಃಖ ಉಂಟಾಯಿತು. ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡರು. ಸ್ಲೀಹೊ ಬಸೇಲಿಯೋಸ್ ಪತ್ರಿಯಾರ್ಕರು ಪೂರ್ವದ ಕ್ರೈಸ್ತ ಸಭೆಯವರಿಗೆ ಅಬ್ರಹಾಮ್ ಅತನಾಸಿಯೋಸ್ ಎಂಬವರನ್ನು ಕಥೋಲಿಕಸರನ್ನಾಗಿ ಮಾಡಿದರು. ಬಾರ್ ಎಬ್ರಾಯ ಕಥೋಲಿಕೋಸರು ಬರೆದ ಚರಿತ್ರೆಯಿಂದ ಒಂದೇ ಸಮಯದಲ್ಲಿ 2—3 ಪತ್ರಿಯಾರ್ಕರೂ, 2—3 ಕಥೋಲಿಕೋಸರೂ ಇದ್ದುದು ಕಂಡುಬರುತ್ತದೆ. ಇದೇ ರೀತಿ ಪತ್ರಿಯಾರ್ಕರೂ ಕಥೋಲಿಕೋಸರೂ ಒಬ್ಬರ ಅಧಿಕಾರದೊಳಗೆ ಇನ್ನೊಬ್ಬರಿರದೆ ಸ್ವತಂತ್ರರಾಗಿಯೇ ಇದ್ದರು. ಬಿಶೋಪರಿಗೆ ಪಟ್ಟ ಕೊಡುವುದೂ, ಮೂರೋನ್ ತೈಲವನ್ನು ಶುದ್ಧೀಕರಿಸುವುದೂ, ಇವೆಲ್ಲಾ ಅಧಿಕಾರಗಳೂ ಇಬ್ಬರಿಗೂ ಇದ್ದವು ಎಂಬುದು ಮೇಲೆ ಹೇಳಿದ ಚರಿತ್ರೆಯಿಂದ ಸ್ಪಷ್ಟವಾಗಿ ತಿಳಿಯುವುದು. ಆದುದರಿಂದ ಇನ್ನಾದರೂ ವಾಚಕರು ಚೆನ್ನಾಗಿ ಆಲೋಚಿಸಿ, ಕಥೋಲಿಕೋಸರ ಅಧಿಕಾರಗಳ ವಿಷಯ ಸ್ಪಷ್ಟವಾಗಿ ತಿಳಿದುಕೊಳ್ಳಿರಿ. ಮೇಲೆ ಹೇಳಿದ ವಿಷಯ ಇನ್ನೂ ತುಂಬಾ ಉದಾಹರಣೆಗಳನ್ನು ಕೊಡಲಿದ್ದರೂ, ಬುದ್ಧಿವಂತರಾದ ವಾಚಕರಿಗೆ ಇಷ್ಟೇ ಉದಾಹರಣೆಗಳು ಸಾಕೆಂದು ಊಹಿಸುತ್ತೇವೆ.

ಕ್ರಿ. ಶ. 1860ನೇ ವರ್ಷದ ವರೇಗೆ ಕಥೋಲಿಕೋಸರ ಸ್ಥಾನವು ಟೈಗ್ರೀಸ್ ಪ್ರಾಂತ್ಯಗಳಲ್ಲಿಯೇ ಇದ್ದಿತು. ಆದರೆ ಬರಬರುತ್ತಾ ಅವರ ಆಡಳಿತೆಯೊಳಗಿನ ಇಗರ್ಜಿಗಳು ಕಡಿಮೆಯಾಗುತ್ತಾ ಬಂದ ಕಾರಣ ಕಥೋಲಿಕೋಸರ ಆವಶ್ಯಕತೆಯು ಏನೂ ಇರಲಿಲ್ಲ. ಕ್ರಿ. ಶ. 1880ನೇ ಇಸವಿಯ ಲಾಗ್ಯಾತು ಆಸ್ಥಾನವನ್ನು ಅಲ್ಲಿಂದ ಮಲಬಾರಿಗೆ ಬದಲಾಯಿಸಬೇಕೆಂದು ಮಲಬಾರಿನ ಸೀರಿಯನ್ ಸಭೆಯವರು ಪತ್ರಿಯಾರ್ಕರೊಡನೆ ಪ್ರಾರ್ಥಿಸಿದರು. ಹೀಗಿರುವಾಗ ಪತ್ರಿಯಾರ್ಕರೆನ್ನಿಸಿಕೊಂಡ ಅಬ್ದುಲ್ಲರು ಮಲಬಾರಿಗೆ ಬಂದರು. ಗ್ರೆಗೋರಿಯೋಸ್ ಅಬ್ದುಲ್ಲರ ಪರಿಚಯವನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸುವುದು ಉಚಿತವೆಂದು ತೋರುತ್ತದೆ.

### ಅಂತಿಯೋಕದ ಪತ್ರಿಯಾರ್ಕರೆನ್ನಿಸಿಕೊಂಡ ಗ್ರೆಗೋರಿಯೋಸ್ ಅಬ್ದುಲ್ಲರು.

ಇಗ್ನೇಶಿಯಸ್ ಪೀಠರ್ III ಯವರು ಅಂತಿಯೋಕದ ಪತ್ರಿಯಾರ್ಕರಾಗಿದ್ದರು. ಇವರ ಕಾಲದ ನಂತರ ಮಾರ್ ಗ್ರೆಗೋರಿಯೋಸ್ ಬಿಶೋಪರು ತಾನು ಪತ್ರಿಯಾರ್ಕನಾಗಬೇಕೆಂದು ಆಶೆ ಪಟ್ಟರು. ಆದರೆ ಇವರನ್ನು ಪ್ರತಿಯಾರ್ಕರಾಗಿ ಮಾಡುವ ಮನಸ್ಸು ಯಾರಿಗೂ ಇರಲಿಲ್ಲ. ಆದುದರಿಂದ ಇತರ ಬಿಶೋಪರು ಸಿನಡುಕೂಡಿ ಸೀರಿಯದ ಬಿಶೋಪರಾದ ಮಾರ್ ದಿಯೊನೀಶಿಯಸ್ ಅಬ್ದುಲ್ ಮೆಸ್ಸಿಯ ಎಂಬವರನ್ನು ಪತ್ರಿಯಾರ್ಕರಾಗಿ ಮಾಡಿದರು. ಗ್ರೆಗೋರಿಯೋಸ್ ಅಬ್ದುಲ್ಲರು ನಾಚಿಕೆಯಿಂದಲೂ,



ಕೋಪದಿಂದಲೂ ಸೀರಿಯನ್ ಸಭೆಯಲ್ಲಿ ಇರಲು ಮನಸ್ಸಿಲ್ಲದೆ ರೋಮನ್ ಕಥೋಲಿಕ ಮತಕ್ಕೆ ಸೇರಿದರು. ರೋಮನ್ ಕಥೋಲಿಕ ಮತದಲ್ಲಿ ಕೆಲವು ಸಮಯವಿದ್ದು ತುಂಬಾ ಹಣವನ್ನು ಒಟ್ಟುಗೂಡಿಸಿ ಮತ್ತೊಮ್ಮೆ ಅಂತಿಯೋಕಕ್ಕೆ ಬಂದರು. ಅಂತಿಯೋಕವು ತುರ್ಕಿ ಸುಲ್ತಾನನ ಕೈಕೆಳಗಿದ್ದಿತು. ಅಂತಿಯೋಕದ ಪತ್ರಿಯಾರ್ಕರು ಸೀರಿಯನ್ ಸಭೆಯ ಇಗರ್ಜಿಗಳ ಮೇಲೆ ಆಡಳಿತೆ ನಡಿಸಲು ಅಧಿಕಾರ ಪತ್ರವನ್ನು ತುರ್ಕಿ ಸುಲ್ತಾನನಿಂದ ತೆಗೆದುಕೊಳ್ಳಬೇಕಿತ್ತು. ಇದಕ್ಕೆ ಅಧಿಕಾರಪತ್ರ (Firman) ಎಂದು ಹೇಳುವರು. ಗ್ರೆಗೋರಿಯೋಸ್ ಅಬ್ದುಲ್ಲರು ಸುಲ್ತಾನನ ಬಳಿಗೆ ಹೋಗಿ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರ ಕುರಿತು ಹಲವು ದೂಷಣೆಗಳನ್ನು ಹೇಳಿ ಸುಲ್ತಾನನಿಗೆ ತುಂಬಾ ಲಂಚವನ್ನು ಕೊಟ್ಟು ಅಧಿಕಾರ ಪತ್ರವನ್ನು ಹಿಂತೆಗೆಯುವಂತೆ ಮಾಡಿದರು. ತುರ್ಕಿಯ ಸುಲ್ತಾನನು ಅಧಿಕಾರ ಪತ್ರವನ್ನು ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಂದ ಹಿಂತೆಗೆದ ಕೂಡಲೇ ಗ್ರೆಗೋರಿಯೋಸ್ ಅಬ್ದುಲ್ಲರು ಸೀರಿಯನ್ ಸಭೆಗೆ ಇನ್ನೊಮ್ಮೆ ಸೇರಿದರು. ಸುಲ್ತಾನನು ಅಧಿಕಾರ ಪತ್ರವನ್ನು ಗ್ರೆಗೋರಿಯೋಸ್ ಅಬ್ದುಲ್ಲರಿಗೆ ಕೊಟ್ಟನು. ಸುಲ್ತಾನನ ಅಧಿಕಾರ ಪತ್ರವಿಲ್ಲದಿದ್ದರೆ ಸ್ಥಾನಕ್ಕುಚಿತವಾದ ಯಾವ ಕಾರ್ಯವನ್ನು ಮಾಡಲಾಗುವುದಿಲ್ಲ. ಈ ಕಾರಣದಿಂದ ಅಬ್ದುಲ್ಲ ಮೆಸ್ಸಿಯ ಪತ್ರಿಯಾರ್ಕರು ಮರ್ದಿನನ್ನು ಬಿಟ್ಟು ತೂರಬ್ದೀನ್ ಎಂಬ ಊರಲ್ಲಿ ವಾಸಮಾಡಲು ಪ್ರಾರಂಭಿಸಿದರು. ಇವರು ಸ್ಥಳವನ್ನು ಬದಲಾಯಿಸಿದ ನಂತರವೂ ತನ್ನ ಅಧಿಕಾರವನ್ನು ನಡೆಸಿಕೊಂಡು ಬಂದರು. ತೂರಬ್ದೀನ್ ನಲ್ಲ ಇವರೊಡನೆ ಬಿಶೋಪರು, ರಂಬನರು ಇದ್ದುಕೊಂಡು ಇವರ ಸೇವೆ ಮಾಡುತ್ತಿದ್ದರು. ಗ್ರೆಗೋರಿಯೋಸ್ ಅಬ್ದುಲ್ಲರು ಅಧಿಕಾರ ಮದದಿಂದ ದೊಡ್ಡ ಸ್ಥಾನವನ್ನು ಏರಬೇಕೆಂಬ ಆಶೆಯಿಂದ ಆಗಿಂದಾಗ್ಗೆ ತನ್ನ ವಿಶ್ವಾಸವನ್ನು ಬದಲಾಯಿಸುತ್ತಾ ಎಲ್ಲಿ ತುಂಬಾ ಹಣ, ಅಧಿಕಾರವಿರುತ್ತಿತ್ತೋ, ಅಲ್ಲಿಗೆ ಮಾತ್ರ ಇವರು ಸೇರುತ್ತಿದ್ದರು. ಗ್ರೆಗೋರಿಯೋಸ್ ಅಬ್ದುಲ್ಲರು ತನಗೆ ಪತ್ರಿಯಾರ್ಕರ ಪಟ್ಟ ಇಲ್ಲದಿದ್ದರೂ ಸುಲ್ತಾನನ ಅಧಿಕಾರಪತ್ರವೊಂದು ಸಿಕ್ಕಿದ ಮಾತ್ರಕ್ಕೆ ಪತ್ರಿಯಾರ್ಕನಾದೆನೆಂದು ಎಣಿಸಿ ಇತರರೊಡನೆ ತಾನೇ ಪತ್ರಿಯಾರ್ಕನೆಂದು ಹೇಳಲು ಪ್ರಾರಂಭಿಸಿದನು. ವಾಚಕರೇ, ಗ್ರೆಗೋರಿಯೋಸ್ ಅಬ್ದುಲ್ಲರು ಎಂಥಹ ವ್ಯಕ್ತಿಯೆಂದೂ, ಇವರ ಗುಣ ಎಂಥಹದೆಂದೂ, ಎಂಥಹ ಪತ್ರಿಯಾರ್ಕರೆಂದೂ ಇನ್ನಾದರೂ ತಿಳಿಯಿತೇ?

## ಗ್ರೆಗೋರಿಯೋಸ್ ಅಬ್ದುಲ್ಲರು ಮಲಬಾರಿಗೆ ಬಂದುದು.

ಗ್ರೆಗೋರಿಯೋಸ್ ಅಬ್ದುಲ್ಲರು ತಾನೇ ನಿಜವಾದ ಪತ್ರಿಯಾರ್ಕನೆಂದು ಹೇಳಿ, ತನ್ನ ಅಧಿಕಾರವನ್ನು ತೋರಿಸಲಿಕ್ಕಾಗಿಯೂ, ಹಣವನ್ನು ಒಟ್ಟುಗೂಡಿಸಲಿಕ್ಕಾಗಿಯೂ

ಮಲಬಾರಿಗೆ ಬಂದಿಳಿದರು. ಮಲಬಾರಿಗೆ ಬಂದು ಕೆಲವು ಇಗರ್ಜಿಗಳನ್ನು ಸಂದರ್ಶಿಸಿದರು. ಈ ಸಮಯದಲ್ಲಿ ಮಾರ್ ಗೀವರುಗೀಸ್ ದಿಯೋನಿಶಿಯುಸರು ಮಲಬಾರಿನ ಮೆಟ್ರೊಪೊಲಿಟನರಾಗಿದ್ದರು. ಮಲಬಾರಿನ ಸೀರಿಯನ್ ಸಭೆಯಲ್ಲಿ ಆಡಳಿತೆಇದ್ದಂಥ ಬೇರೆ ಇಬ್ಬರು ಬಿಶೋಪರುಗಳೂ ಇದ್ದರು. ಅವರಾರೆಂದರೆ–ಗೋವಾ, ಇಂಡಿಯಾ ಮತ್ತು ಸಿಲೋನ್ ಊರುಗಳ ಬಿಶೋಪರಾದ ಮಾರ್ ಆಲ್ವರೀಸರೂ, ಮಲಬಾರಿನ ಕಂಡನಾಡು ದಿಯೊಸೇಜಿನ ಮೆಟ್ರೊಪೊಲಿಟನರಾಗಿದ್ದ ಮಾರ್ ಪೌಲ್ ಇವಾನಿಯೋಸ್ ಎಂಬವರು. ಇವರು ಬಹಳ ಪ್ರಾಯಸ್ಥರಾಗಿದ್ದರು. ಮಾರ್ ದಿಯೊನೀಶಿಯಸ್ ಗೀವರುಗೀಸರಿಗೆ ಪಟ್ಟಕೊಡಬೇಕೆಂದು ಪತ್ರಿಯಾರ್ಕರಿಗೆ ಬರೆದವರು ಇವರೇ ಆಗಿದ್ದರು. ಮೇಲೆ ಹೇಳಿದ ಬಿಶೋಪರುಗಳಲ್ಲದೆ ಇನ್ನೊಬ್ಬರು ಬಿಶೋಪರು ಇದ್ದರು. ಆದರೆ ಇವರಿಗೆ ಯಾವತ್ತೂ ದಿಯೋಸೇಜಿನ ಆಡಳಿತೆಯು ಇರಲಿಲ್ಲ. ಆಡಳಿತೆ ಇದ್ದಂಥ ಬಿಶೋಪರೆಲ್ಲರೂ ಪತ್ರಿಯಾರ್ಕರಿಗೆದುರಾಗಿ ನಿಂತರೆಂಬುದು ಸ್ಪಷ್ಟವಾಗಿ ತಿಳಿಯುವುದು. ಗ್ರೆಗೋರಿಯೋಸ್ ಅಬ್ದುಲ್ಲರು ಮಲಬಾರಿನ ಸೀರಿಯನ್ ಇಗರ್ಜಿಗಳ ಉತ್ಪತ್ತಿಯನ್ನು ಕಂಡು ಎಲ್ಲಾ ಇಗರ್ಜಿಗಳಅಧಿಕಾರವನ್ನು ತನಗೆಬರೆದುಕೊಡಬೇಕೆಂದು ಮೆಟ್ರೊಪೊಲಿಟನರಾಗಿದ್ದ ಮಾರ್ ಗೀವರುಗೀಸ್ ದಿಯೋನೀಸಿಯುಸರಿಗೆ ತಿಳಿಸಿದರು.



ದಿವಂಗತ ಮಾರ್ ಗೀವರುಗೀಸ್ ದಿಯೋನಿಶಿಯುಸ್
(ಮಲಬಾರಿನ ಸೀರಿಯನ್ ಸಭೆಯ ಮೆಟ್ರೊಪೊಲಿಟನರು)

ಆದರೆ ಅವರು ಒಪ್ಪಲಿಲ್ಲ. ಈ ಸಂದರ್ಭದಲ್ಲಿ ಇತರ ಬಿಶೋಪರುಗಳಾದ ಮಾರ್ ಆಲ್ವರೀಸರೂ, ಮಾರ್ ಪೌಲು ಇವಾನಿಯೋಸರೂ ಒಟ್ಟಗೆ ಸೇರಿ ಪತ್ರಿಯಾರ್ಕರಿಗೆ ವಿರುದ್ಧವಾಗಿ ನಿಂತು ತಮ್ಮ ಹಿರಿಯರ ಇಗರ್ಜಿಗಳ ಅಧಿಕಾರವನ್ನು ಎಂದಿಗೂ ಬಿಟ್ಟುಕೊಡಬಾರದೆಂದು ಮಾರ್ ಗೀವರುಗೀಸ್ ದಿಯೋನಿಶಿಯುಸರಿಗೆ ಉತ್ತೇಜನ ಕೊಟ್ಟರು. ಮೆಟ್ರೊಪೊಲಿಟನರು ಇಗರ್ಜಿಗಳ ಅಧಿಕಾರಗಳನ್ನು ಬರೆದು ಕೊಡಲು ಒಪ್ಪುವುದಿಲ್ಲವೆಂದು ತಿಳಿದು ತಾನು ಅವರನ್ನು ಬಹಿಷ್ಕರಿಸುತ್ತೇನೆಂದು



ಅಬ್ದುಲ್ಲರು ಪತ್ರಗಳನ್ನು ಪ್ರಕಟಿಸಿದರು. ಗ್ರೆಗೋರಿಯಸ್ ಅಬ್ದುಲ್ಲರು ಪ್ರಕಟಿಸಿದ ಪತ್ರದ ಬೆಲೆ ಎಷ್ಟೆಂಬುದನ್ನು ಬಿಶೋಪ್ ಆಲ್ವರೀಸರು ಮಾರ್ ಗೀವರುಗೀಸ್ ದಿಯೋನಿಸಿಯುಸರಿಗೆ ಬರೆದ ಪತ್ರದಿಂದ ವ್ಯಕ್ತವಾಗಿ ತಿಳಿಯುತ್ತದೆ. ಆ ಪತ್ರದ ಪ್ರತಿಯನ್ನು ಈ ಮುಂದೆ ಕೊಟ್ಟದೆ:—



ಮಾರ್ ಜುಲಿಯುಸ್ ಆಲ್ವಾರೀಸ್.
(ಇಂಡಿಯಾ, ಗೋವಾ ಮತ್ತು ಸಿಲೋನ್ ಪ್ರಾಂತ್ಯಗಳ ಬಿಶೋಪರು.)

"ಗ್ರೆಗೋರಿಯೋಸ್ ಅಬ್ದುಲ್ಲರು ನಿಮ್ಮನ್ನು ಬಹಿಷ್ಕರಿಸಿದ ಒಂದು ಪತ್ರವನ್ನು ಪ್ರಕಟಿಸಿರುವರು. ಆ ಪತ್ರವನ್ನು ಕಂಡು ನಮಗೆ ಬಹಳ ಆಶ್ಚರ್ಯವೂ, ದುಃಖವೂ ಉಂಟಾಯಿತು. ಅಂತಿಯೋಕದ ಪತ್ರಿಯಾರ್ಕರಿಗೆ ಮಲಬಾರಿನ ಸೀರಿಯನ್ ಸಭೆಯ ಮೇಲೆ ಇರುವಂತಹ ಅಧಿಕಾರವು ಬರೇ ದೈವಿಕವಾಗಿರುತ್ತದೆಂದೂ, ಲೌಕಿಕ ವ್ಯವಹಾರಗಳಲ್ಲಿ ಅಂತಿಯೋಕದ ಸಿಂಹಾಸನದವರಿಗೆ ಏನೊಂದೂ ಅಧಿಕಾರವಿಲ್ಲವೆಂದೂ, ಆ ಸಂಗತಿಯಲ್ಲಿ ಮಲಬಾರಿನ ಸೀರಿಯನ್ ಸಭೆಯು ಸ್ವಾತಂತ್ರ್ಯಸಭೆ ಎಂದೂ ತಿರುವಾಂಕೂರಿನ ಹ್ಯಾಕೋರ್ಟನವರು ವಿಧಿಸಿರುವರು. ನೀವು ಅಂತಿಯೋಕದ ಪತ್ರಿಯಾರ್ಕರಿಗೆ ಲೌಕಿಕ ಅಧಿಕಾರವನ್ನು ಒಪ್ಪಿಸಿಕೊಡಬೇಕೆಂದು ಅಬ್ದುಲ್ಲ ಪತ್ರಿಯಾರ್ಕರು ನಿಮ್ಮನ್ನು ಒತ್ತಾಯಪಡಿಸಿದ ಸಂಗತಿಯೂ ಅದಕ್ಕೆ ನೀವು ವಿರೋಧಿಸಿದ ಕಾರಣದಿಂದ ನಿಮ್ಮನ್ನು ಬಹಿಷ್ಕರಿಸಲಿಕ್ಕೆ ಸಾಕೆಂದು ನಾವು ಸ್ವಲ್ಪ ಕಾಲದಿಂದ ಕೇಳುತ್ತೇವೆ. ಅವರು ಹೇಳಿದ ಪ್ರಕಾರ ನಿಮ್ಮ ಲೌಕಿಕ ಅಧಿಕಾರಗಳನ್ನು ಒಪ್ಪಿಸಿಕೊಡಕೂಡದೆಂದು ಕೊಟ್ಟಾಯಮ್ಮಿನಲ್ಲಿ ಕೂಡಿದ ಸಿನಡು ಮತ್ತು ಇನ್ನಿತರ ಸ್ಥಳಗಳಲ್ಲಿ ಸೇರಿದ ಮೀಟಿಂಗುಗಳು ನಿಮಗೆ ತಿಳಿಸಿರುತ್ತವೆ. ನೀವು ಲೌಕಿಕ ಅಧಿಕಾರಗಳನ್ನು ಒಪ್ಪಿಸಿಕೊಡದಿದ್ದ ಕಾರಣ ಅವರು ನಿಮ್ಮನ್ನು ಬಹಿಷ್ಕರಿಸಿದುದು: ಗ್ರೆಗೋರಿಯೋಸ್ ಅಬ್ದುಲ್ಲರು ಕಳುಹಿಸಿದ ಬಹಿಷ್ಕಾರ ಪತ್ರದಲ್ಲಿ (Excommunication letter) ಇರುವಂತಹ ಕಾರಣಗಳೆಲ್ಲವು ಬರೇ ನಿರಾಧಾರವಾದವುಗಳೆಂದು ನಮಗೆ ತಿಳಿದಿದೆ ನಿಮ್ಮ ಪರಿಚಯವು ಬಿಶೋಪರುಗಳಾದ ನಮಗೆ ಹೆಚ್ಚು ಇರುವುದರಿಂದ ಬಹಿಷ್ಕಾರ ಪತ್ರದಲ್ಲಿ ಹೇಳಿದಂಥ ಕಾರಣಗಳಲ್ಲಿ ಒಂದಾದರೂ ನಿಜವಿಲ್ಲವೆಂದೂ, ಅವುಗಳಲ್ಲಿ ಒಂದು ತಪ್ಪನ್ನಾದರೂ ನೀವು ಮಾಡಲಿಲ್ಲವೆಂದೂ ನಾವು ಖಂಡಿತವಾಗಿಯೂ ಹೇಳಬಲ್ಲೆವು

ಎರಡನೇಯದಾಗಿ ನೀವು ತಪ್ಪುಗಳನ್ನು ಮಾಡಿದ್ದಿದ್ದರೆ ನಿಮ್ಮೊಡನೆ ವಿಚಾರಮಾಡುವಂಥ ಕರ್ತವ್ಯವೂ ಪತ್ರಿಯಾರ್ಕರದ್ದು ಆಗಿತ್ತು; ಮಾತ್ರವಲ್ಲದೆ ಆ ತಪ್ಪುಗಳನ್ನು ಇತರ ಬಿಶೋಪರುಗಳಾದ ನಮಗೆ ತಿಳಿಸಿ ನಮ್ಮೊಡನೆ ವಿಚಾರ ಮಾಡಬೇಕಿತ್ತು. ದಿಯೋಸೇಜಿನ ಆಡಳಿತೆಯುಳ್ಳ ಬಿಶೋಪರು ನಾವಿಬ್ಬರು ಮಾತ್ರ. ನಿಮ್ಮಲ್ಲಿ ನಿಜವಾಗಿಯೂ ತಪ್ಪುಗಳಿದ್ದರೆ ಅವುಗಳ ಕುರಿತು ಏಕೆ ನಮ್ಮೊಡನೆ ವಿಚಾರಿಸಲಿಲ್ಲ? ಇತರ ಬಿಶೋಪರುಗಳ ಹತ್ತಿರ ವಿಚಾರಿಸದೆ ನಿಮ್ಮನ್ನು ಬಹಿಷ್ಕರಿಸುವುದು ಸೀರಿಯನ್ ಸತ್ಯಸಭೆಯ ಪವಿತ್ರ ಕಾನೂನುಗಳಿಗೆ ವಿರುದ್ಧವಾಗಿರುತ್ತದೆ. ತಿರುವಾಂಕೂರು ಹೈಕೋರ್ಟಿನ ತೀರ್ಮಾನಕ್ಕೆ ವಿರುದ್ಧವಾಗಿ ನೀವು ನಿಮ್ಮ ಲೌಕಿಕ ಅಧಿಕಾರಗಳನ್ನು ಬಿಟ್ಟುಕೊಟ್ಟರೆ, ನೀವು ಮಲಬಾರಿನ ಸೀರಿಯನ್ ಸಭೆಯ ಮೊಕ್ತೇಸರ (Trustee) ರಾಗಲು ಅಯೋಗ್ಯರಾಗುವಿರಿ.



ಸಂಕ್ಷೇಪದಿಂದ ತಿಳಿಸುವುದಾದರೆ ನಿಮಗೆ ಗ್ರೆಗೋರಿಯೋಸ್ ಅಬ್ದುಲ್ಲರು ಹಾಕಿದ ಬಹಿಷ್ಕಾರಕ್ಕೆ ಎಳ್ಳಷ್ಟೂ ಹೆದರುವ ಅಗತ್ಯವಿಲ್ಲ. ನಮ್ಮ ಸತ್ಯ ತಿರುಸಭೆಯ ಅಭಿವೃದ್ಧಿಗಾಗಿಯೂ, ಒಳ್ಳಿತಕ್ಕಾಗಿಯೂ ನೀವು ಈ ಮುಂಚೆ ಮಾಡಿದ ಪ್ರಕಾರವೇ ಇನ್ನು ಮುಂದೆಯೂ ಕೂಡ ಪ್ರಯತ್ನಪಡಿರಿ. ನಿಮ್ಮ ಒಳ್ಳೇ ಕೆಲಸಕ್ಕಾಗಿ ನಿಮಗೆ ಬರಬಹುದಾದ ಹಿಂಸೆ, ಕಷ್ಟಗಳಲ್ಲಿಯೂ ನಾವು ಕೂಡ ಪಾಲುಗಾರರಾಗುವೆವು.

ನಿಮ್ಮ ಎಲ್ಲಾ ಕಾರ್ಯಗಳಲ್ಲಿ ದೇವರು ನಿಮಗೆ ಸಹಾಯಮಾಡಲಿ ಎಂದು ಪ್ರಾರ್ಥಿಸುತ್ತೇವೆ.

15th June 1911.
Mar Elia Chapel. Mar Alvares.
Manathen church. Mar Ivanios.

ಈ ಮೇಲಿನ ಪತ್ರದಿಂದ ಬಿಶೋಪ ಅಲ್ವಾರೀಸರಿಗೂ, ಗ್ರೆಗೋರಿಯೋಸ್ ಅಬ್ದುಲ್ಲರಿಗೂ ಇದ್ದಂಥ ಸಂಬಂಧವನ್ನು ತಿಳಿದುಕೊಳ್ಳಿರಿ. ಅನಂತರ ಬಿಶೋಪ ಅಲ್ವಾರೀಸರಿಗೂ, ಅಬ್ದುಲ್ಲರಿಗೂ ಪತ್ರವ್ಯವಹಾರವು ನಡೆಯಿತು. ಆದರೆ ಧೈರ್ಯವಂತರೂ, ಜ್ಞಾನಿಯೂ, ದೇವರಲ್ಲಿ ಭಕ್ತಿಯುಳ್ಳವರೂ ಆದ ಬಿಶೋಪ ಅಲ್ವಾರೀಸರು ಅಬ್ದುಲ್ಲರ ಯಾವ ಕಾರ್ಯಕ್ಕೂ ಹೆದರಲಿಲ್ಲ. ಬಿಶೋಪ ಅಲ್ವಾರೀಸರ ಧೈರ್ಯದ ಕುರಿತು ಹೆಚ್ಚೇನೂ ಹೇಳುವ ಅಗತ್ಯವಿಲ್ಲ. ಗ್ರೆಗೋರಿಯೋಸ ಅಬ್ದುಲ್ಲರು ಬಿಶೋಪ್ ಅಲ್ವಾರೀಸರನ್ನು ಆದಷ್ಟು ಹೆದರಿಸಲು ಪ್ರಯತ್ನಪಟ್ಟಾಗ್ಯೂ ಅದು ಸಾಧ್ಯವಾಗಲಿಲ್ಲ. ಆದರೆ ಬಿಶೋಪ್ ಅಲ್ವಾರೀಸರು ಹೆದರದೆ ಮಾರ್ ಡಿಯೋನಿಸಿಯಸ್ ಬಿಶೋಪರ ಬಲಗೈಯಾಗಿ ನಿಂತು ಸೀರಿಯನ್ ಸಭೆಯ ಅಭಿವೃದ್ಧಿಗಾಗಿ ತುಂಬಾ ಪ್ರಯತ್ನಪಟ್ಟರು. ಇಷ್ಟು ಮಾತ್ರವಲ್ಲದೆ ತನ್ನ ಕೈಕೆಳಗಿದ್ದ ಡಿಯೊಸೆಜಿಗಳನ್ನೆಲ್ಲಾ ಮಾರ್ ಡಿಯೊನಿಸಿಯಸ್ ಮೆಟ್ರೊಪೊಲಿಟನರಿಗೆ ಒಪ್ಪಿಸಿ ಕೊಟ್ಟರು. ಬಿಶೋಪ ಅಲ್ವಾರೀಸರು ಗೋವೆಯಲ್ಲಿ ಕಾಲವಾಗುವ ಮುಂಚೆ ತನ್ನ ಬಿಶೋಪಸ್ಥಾನಕ್ಕೆ ತಕ್ಕದಾದ ಸಾಮಾನುಗಳನ್ನೆಲ್ಲಾ ಮಾರ್ ಡಿಯೋನಿಸಿಯಸ್ ಬಿಶೋಪರ ಪಂಗಡದವರು ಯಾರು ಬಂದರೂ ಕೊಡಬೇಕೆಂದು ತನ್ನ ಮಿತ್ರರೊಡನೆ ಹೇಳಿ ತೀರಿಹೋದರು. ಅವರ ಮಾತಿನ ಪ್ರಕಾರವೇ ಅವರ ಸಾಮಾನುಗಳನ್ನು ಮಾರ್ ಡಿಯೋನಿಸಿಯಸ್ ಬಿಶೋಪರಿಗೆ ಮುಟ್ಟಿಸಿದ ಸಂಗತಿಯು ಎಲ್ಲರಿಗೂ ತಿಳಿದಿದೆ. ಇವರ ಕುರಿತು ವಿವರಿಸಿ ಹೇಳುವ ಅಗತ್ಯವಿಲ್ಲ.

ಆದರೆ ಸತ್ಯಾಂಶವು ಹೊರಬೀಳಲು ಇದು ತಕ್ಕ ಸಮಯವಾಯಿತು. ಮಾರ್ ಜೋಸೆಫ್ ಡಿಯೋನಿಸಿಯುಸರು ಗೀವರುಗೀಸ್ ಡಿಯೋನಿಸಿಯುಸರನ್ನು ತನ್ನ ಉತ್ತರಾಧಿಕಾರಿಯಾಗಿ ತಾನು ಸಾಯುವ ಮೊದಲೇ ನೇಮಿಸಿದ್ದರು. ಈ ಮಾರ್

ಗೀವರುಗೀಸ್ ಡಿಯೋನಿಸಿಯುಸರು ಬಹಳ ಬುದ್ಧಿಶಾಲಿಯೂ, ಜ್ಞಾನವುಳ್ಳವರೂ, ಭಕ್ತಿಯುಕ್ತನರೂ, ಎಲ್ಲರಿಂದಲೂ ಪ್ರೀತಿಸಲ್ಪಟ್ಟಂಥವರೂ ಆಗಿದ್ದರು. ಇವರ ಮೇಲೆ ಗ್ರೆಗೋರಿಯೋಸ್ ಅಬ್ದುಲ್ಲರು ಬಹಿಷ್ಕಾರ ಹಾಕಿದುದನ್ನು ಮಲಬಾರಿನ ಸೀರಿಯನ್ ಸಭೆಯು ತಿಳಿದು ಬಹಳ ದುಃಖ ಗೊಂಡಿತು. ಆದರೆ ಸ್ವಾರ್ಥಿಗಳೂ, ಅಧರ್ಮಿಗಳೂ, ಅನೀತಿವಂತರೂ ಆದ ಕೆಲವರು ಮಾತ್ರ ಅಬ್ದುಲ್ಲರಿಗೆ ಆ ಕಾರ್ಯದಲ್ಲಿ ಉತ್ತೇಜನ ಕೊಟ್ಟರು. ಮಲಬಾರಿನ ಸೀರಿಯನ್ ಸಭೆಯವರೆಲ್ಲರೂ ಮಾರ್ ದಿಯೋನಿಸಿಯಸ್ ಬಿಶೋಪರಿಗೆ ಸಹಾಯಮಾಡುತಿದ್ದರು. ಇವರೆಲ್ಲರಿಗೂ ಅವರಮೇಲೆ ತುಂಬಾ ವಿಶ್ವಾಸವಿದ್ದಿತು. ಅವರ ಮೇಲೆ ತುಂಬಾ ವಿಶ್ವಾಸವಿದ್ದುದರಿಂದಲೇ ಎಲ್ಲರೂ ಅವರನ್ನೇ ಆ ಸ್ಥಾನಕ್ಕೆ ಚುನಾಯಿಸಿದರು. ಇದು "ಮಲಬಾರಿನ ಸೀರಿಯನ್ ಇಗರ್ಜಿ" ಎಂಬ ಪುಸ್ತಕದ ಕೊನೆಯ ಭಾಗದ 3ನೇ ಪರಿಶಿಷ್ಟದಿಂದ ಸ್ಪಷ್ಟ ತಿಳಿಯುವುದು. ಮಲಬಾರಿನ ಸೀರಿಯನ್ ಸಭೆಯ ಪ್ರತಿನಿಧಿಗಳ ಸಂಘದ ಸಭೆಯು (Association committee) ಸದಸ್ಯರು ದಿಯೋನಿಸಿಯುಸ್ ಗೀವರುಗೀಸರನ್ನು ಮೆಟ್ರೊಪೊಲಿಟನರಾಗಿ ನೇಮಿಸಬೇಕೆಂದು ಬರೆದ ಸಂಗತಿಯು ಆ ಪತ್ರದಿಂದ ತಿಳಿಯುವುದು. ಮಲಬಾರಿನ ಸೀರಿಯನ್ ಸಭೆಯವರಿಗೆ ಅವರ ಮೇಲೆ ವಿಶ್ವಾಸ ಇಲ್ಲದಿದ್ದರೆ ಅವರನ್ನು ಆ ಸ್ಥಾನಕ್ಕೆ ಆರಿಸಲು ಕಾರಣವೇನಿತ್ತು? ಈ ಕಾರಣದಿಂದಲೇ ಅವರು ಮಾಡಿದ ಯಾವ ಕಾರ್ಯಗಳಲ್ಲಿಯೂ ಜನರು ಕ್ಷೈಪಾಕ ಹೋಗುತ್ತಿದ್ದಿಲ್ಲ. ಆದರೆ ಸ್ವಾರ್ಥಿಗಳೂ, ಅನೀತಿವಂತರೂ, ಮಾತ್ರವೇ ಅವರಿಗೆದುರಾಗಿ ದೂರುಗಳನ್ನು ಹೇಳುತಿದ್ದರು.

ಗ್ರೆಗೋರಿಯುಸ್ ಅಬ್ದುಲ್ಲರು ಮಾರ್‌ಗೀವರುಗೀಸ್ ಡಿಯೋನಿಸಿಯುಸರಿಗೆ ನಿಷ್ಕಾರಣವಾಗಿ ಬಹಿಷ್ಕಾರ ಹಾಕಿದ ಸ್ವಲ್ಪ ಕಾಲದಲ್ಲಿಯೇ ಗ್ರೆಗೋರಿಯಸ್ ಅಬ್ದುಲ್ಲರ ಗುಟ್ಟು ಹೊರಬಿತ್ತು. ಇವರು ನಿಜವಾದ ಪತ್ರಿಯಾರ್ಕರಲ್ಲವೆಂದೂ, ಹಣವನ್ನೂ ಅಧಿಕಾರವನ್ನೂ ಸಂಪಾದಿಸಲಿಕ್ಕಾಗಿ ಪತ್ರಿಯಾರ್ಕರ ವೇಷವನ್ನು ಹಾಕಿ ಕೊಂಡು ಬಂದವರೆಂದೂ ತಿಳಿಯಿತು. ನಿಜವಾದ ಪತ್ರಿಯಾರ್ಕರು ಅಂತಿಯೋಕದಲ್ಲಿಯೇ ಇದ್ದಾರೆಂಬುದು ಮಲಬಾರಿನಲ್ಲಿ ಪ್ರಚಾರವಾಯಿತು. ಮಲಬಾರಿನಲ್ಲಿ ಗ್ರೆಗೋರಿಯೋಸ್ ಅಬ್ದುಲ್ಲರು ಮಾಡಿದ ದುಷ್ಕೃತ್ಯಗಳನ್ನು ಅಬ್ದುಲ್‌ಮೆಸ್ಸಿಯು ಪತ್ರಿಯಾರ್ಕರಿಗೆ ತಿಳಿಸಿದರು. ಕೂಡಲೇ ಅಬ್ದುಲ್ ಮೆಸ್ಸಿಯು ಪತ್ರಿಯಾರ್ಕರು ಈ ಟೆಲಿಗ್ರಾಮನ್ನು ಕಳುಹಿಸಿದರು. "Abdullah's excommunication vain, you and your followers blessed" 'ಅಬ್ದುಲ್ಲರ ಬಹಿಷ್ಕಾರವು ವ್ಯರ್ಥವಾದುದು ನೀವು ನಿಮ್ಮ ಅನುಯಾಯಿಗಳು ಆಶೀರ್ವದಿಸಲ್ಪಟ್ಟವರಾಗಿರುವಿರಿ'. ಇದನ್ನು ಗೀವರುಗೀಸ್ ದಿಯೋನಿಸಿಯುಸರು ಕೇಳಿ ಸಂತೋಷಗೊಂಡರು. ಕೂಡಲೇ ಅಬ್ದುಲ್ ಮೆಸ್ಸಿಯು ಪತ್ರಿಯಾರ್ಕರಿಂದ ಇನ್ನೊಂದು ಪತ್ರವು (Bull) ದೊರಕಿತು. ಇದರಲ್ಲಿ ಅಬ್ದುಲ್ಲ



ರನ್ನು ಹೀನ ರೀತಿಯಲ್ಲಿ ಚಿತ್ರಿಸಿದ್ದಲ್ಲದೆ ಅವರು ದುಷ್ಕೃತ್ಯಗಳನ್ನು ಮಾಡಿದವರೆಂದೂ, ವಿಶ್ವಾಸವನ್ನು ತ್ಯಾಗಮಾಡಿದವರೆಂದೂ ಸುಲ್ತಾನನಿಗೆ ಲಂಚವನ್ನು ಕೊಟ್ಟು ತಮ್ಮ ಅಧಿಕಾರಪತ್ರವನ್ನು (Firman) ಪಡೆದುಕೊಂಡವರೆಂದೂ ಬರೆದಿರುವರು. ಅಷ್ಟು ಮಾತ್ರವಲ್ಲದೆ ತಾವೇ ಕಾನೂನುಗಳಿಗೆ ಸರಿಯಾದ ನಿಜವಾದ ಪತ್ರಿಯಾರ್ಕರೆಂದೂ ತಿಳಿಸಿರುವರು. ಇಷ್ಟೆಲ್ಲ ಸಂಗತಿಗಳು ನಡೆದ ನಂತರ ಮಲಬಾರಿನವರು ಅಬ್ದುಲ್ ಮೆಸ್ಸಿಯರನ್ನು ಮಲಬಾರಿಗೆ ಬರಬೇಕೆಂದು ಪ್ರಾರ್ಥಿಸಿದರು. ಅಬ್ದುಲ್ಲ ಮೆಸ್ಸಿಯು ಪತ್ರಿಯಾರ್ಕರು ಮಲಬಾರಿಗೆ ಬಂದಾಗ ಎಷ್ಟೋ ವರ್ಷಗಳಿಂದಲೂ ಬೇಡಿಕೊಳ್ಳುತಿದ್ದ ವರವು ದೊರಕಿತು. ಟೈಗ್ರೀಸ್ ಪ್ರಾಂತ್ಯದಲ್ಲಿ ಇದ್ದಂಥ ಕಥೋಲಿಕೋಸ ಸ್ಥಾನವನ್ನು ಮಲಬಾರಿಗೆ ಬದಲಾಯಿಸಿದರು. ಅಬ್ದುಲ್ ಮೆಸ್ಸಿಯು ಪತ್ರಿಯಾರ್ಕರು ಕಥೋಲಿಕೋಸರ ಸ್ಥಾನವನ್ನು ಮಲಬಾರಿನಲ್ಲಿ ಸ್ಥಾಪಿಸಿದುದರ ಕುರಿತು ಯಾರೂ ಚರ್ಚಿಸುವುದಿಲ್ಲ.

ಅಬ್ದುಲ್ ಮೆಸ್ಸಿಯು ಪತ್ರಿಯಾರ್ಕರು 1912ನೇ ಇಸವಿಯಲ್ಲಿ ನಿರಣಂ ಸಂತ ತೋಮಸ್ ಇಗರ್ಜಿಯಲ್ಲಿ ಪೌಲ್ ಮಾರ್ ಇವಾನಿಯೋಸರನ್ನು ಮೊದಲನೇ ಕಥೋಲಿಕೋಸರನ್ನಾಗಿ ಪಟ್ಟಕಟ್ಟಿದರು.



ಮಾರ್ ಬಸೇಲಿಯೋಸ್ ಪೌಲೋಸ್.
(ಮೊದಲನೆ ಕಥೋಲಿಕೋಸರು)

ಪತ್ರಿಯಾರ್ಕರ ಪಂಗಡದ ಬಿಶೋಪರಾಗಿರುವ ಮಾರ್ ಅವುಗೇಸ್ ತಿಮೋತಿಯೋಸರು ಪತ್ರಿಯಾರ್ಕರ ಡೆಲಿಗೇಟರೆನ್ನಿಸಿಕೊಂಡ ಮಾರ್ ಜೂಲಿಯುಸ್ ಎಂಬವರಿಗೆ ಈ ರೀತಿ ಬರೆದಿರುವರು. "ಅಬ್ದುಲ್‌ಮೆಸ್ಸಿಯು ಪತ್ರಿಯಾರ್ಕರು ಎಲ್ಲರಿಂದಲೂ ಅಂಗೀಕೃತರಾದ ಸೀರಿಯನ್ ಸಭೆಯ ಮೇಲಧಿಕಾರಿಗಳಾಗಿರುತ್ತಾರೆ. ಅವರಿಗೆದುರಾಗಿ ನಿಂತವರು ಅವರ ಕೈಕೆಳಗಿದ್ದವರೇ. ಟರ್ಕಿದೇಶದಲ್ಲಿದ್ದ ಮಾರ್ ಗಬ್ರಿಯಲ್ ಮತ್ತು ಮಾರ್ ಪೀಟರ್ ಎಂಬ ಬಿಶೋಪರುಗಳೂ ಮಲಬಾರಿನಲ್ಲಿರುವ ಮಾರ್ ಗೀವರುಗೀಸ್ ದಿಯೋನೀಸಿಯಸ್ ಮೆಟ್ರೊಪೊಲಿಟನರೂ, ಮಾರ್ ಇವಾನಿಯೋಸರೂ, ಮತ್ತು ಮಾರ್ ಜೂಲಿ



ಮಾರ್ ಬಸೇಲಿಯೋಸ್ ಗೀವರುಗೀಸ್ I —
(ಎರಡನೆ ಕಥೋಲಿಕೋಸರು.)

ಯಸ್ ಆಲ್ವಾರೇಸ ಬಿಶೋಪರುಗಳೂ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರನ್ನು, ನಿಜವಾದ ಪತ್ರಿಯಾರ್ಕರೆಂದು ಸ್ವೀಕರಿಸಿರುವರು. ಇವರೇ ಮಲಬಾರಿಗೆ ಬಂದು ಕಥೋಲಿಕೋಸರಿಗೂ, ಮೆಟ್ರೊಪೊಲಿಟನರಿಗೂ ಪಟ್ಟ ಕೊಟ್ಟರು. ಅಬ್ದುಲ್ ಮೆಸ್ಸಿಯರು ಪತ್ರಿಯಾರ್ಕರನ್ನು ಈ ಸಮಯದವರೆಗೂ ಆದರೆ ಕಥೋಲಿಕೋಸರ ಸ್ಥಾನವನ್ನು ನಿರ್ಮಿಸುವ ವರೆಗೂ ಸ್ಥಾನದಿಂದ ತಳ್ಳಲ್ಪಟ್ಟವರೆಂದಾಗಲೀ ಬಹಿಷ್ಕರಿಸಲ್ಪಟ್ಟವರೆಂದಾಗಲೀ ಯಾರು ಹೇಳಿದ್ದೂ ಇಲ್ಲ, ಕೇಳಿದ್ದೂ ಇಲ್ಲ" ಇನ್ನೊಮ್ಮೆ ಮಾರ್ ಅವುಗೇನ್ ತಿಮೋತಿಯೋಸ್ ಬಿಶೋಪರು ತಾವು ಟರ್ಕಿ ದೇಶದಲ್ಲಿ ಪ್ರಯಾಣ ಮಾಡಿ ತಿಳಿದು ಬಂದ ನಿಜಸಂಗತಿಯನ್ನು ಮಾರ್ ಜೂಲಿಯಸರಿಗೆ ಬರೆದಿರುವರು. ಏನೆಂದರೆ– "ಮರ್ದಿನ್ ಪಟ್ಟಣದ ಬಿಶೋಪರಾದ ಮಾರ್ ಕೂರಿಲೋಸರು ನನ್ನೊಡನೆ ಹೇಳಿದರೇನೆಂದರೆ– ಇಲ್ಲಿ ಆ ಕಾಲದಲ್ಲಿ ನಡೆದ ಸಿನಡು ಒಂದೇ. ಆ ಸಿನಡಿನಲ್ಲಿ 5 ಬಿಶೋಪರು ಹಾಜರಿದ್ದು, ಅಬ್ದುಲ್ಲರನ್ನು ಪತ್ರಿಯಾರ್ಕರನ್ನಾಗಿ ಮಾಡಿದರು. ಈ ಸಿನಡು ಅಲ್ಲದೆ ಇದರ ಮುಂಚೆಯಾಗಲೀ, ಕಡೆಗಾಗಲೀ, ಬೇರೆ ಸಿನಡು ಕೂಡಿ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಗೆ ಬಹಿಷ್ಕಾರ ಹಾಕಿದ್ದಾಗಲೀ, ಅವರನ್ನು ಪತ್ರಿಯಾರ್ಕಸ್ಥಾನದಿಂದ ತಳ್ಳಿಹಾಕಿದ್ದಾಗಲೀ ಇಲ್ಲ. ಇದರ ವಿಷಯ ಯಾರೂ ನನ್ನೊಡನೆ ಮಾತಾಡಿದ್ದೂ ಇಲ್ಲ ಇಷ್ಟು ಮಾತ್ರವಲ್ಲದೆ ಸಭೆಯ ಮುಖ್ಯಾಧಿಕಾರಿಯಾಗಿರುವ ಪತ್ರಿಯಾರ್ಕರಿಗೆ ಬಹಿಷ್ಕರಿಸಬೇಕಾದರೆ ಅವರನ್ನು ಬಿಶೋಪರುಗಳ ಸಿನಡಿನ ಮುಂದೆ ಕರೆಸಿ ಅವರು ಮಾಡಿದ ತಪ್ಪುಗಳನ್ನು ತಿಳಿಸಿ, ವಿಚಾರಿಸಿ ತಪ್ಪುಗಳನ್ನು ಸ್ಥಾಪಿಸಿದ ನಂತರ ಮಾತ್ರವೇ ಬಹಿಷ್ಕರಿಸಬಹುದು. ಈ ರೀತಿಯ ಯಾವ ಸಂಗತಿಯೂ ನಡೆಯಲಿಲ್ಲವೆಂದು ಖಂಡಿತವಾಗಿಯೂ ಹೇಳಬಲ್ಲೆವು."

ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಗೆ ವೈರಿಗಳಿದ್ದಾಗ್ಯೂ ಇವರ ಬಾಯಿಯಿಂದಲೂ ಕೂಡ ಅವರು ತಳ್ಳಲ್ಪಟ್ಟವರೆಂದಾಗಲೀ, ಬಹಿಷ್ಕರಿಸಲ್ಪಟ್ಟವರೆಂದಾಗಲೀ ಬಂದುದಿಲ್ಲ.



ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಕಥೋಲಿಕೋಸರಿಗೂ, ಬಿಶೋಪರುಗಳಿಗೂ ಪಟ್ಟ ಕಟ್ಟುವ ವರೆಗೆ ಅವರು ಬಹಿಷ್ಕರಿಸಲ್ಪಟ್ಟವರೆಂಬ ಸಂಗತಿಯನ್ನು ಯಾರೂ ಕೇಳಿದ್ದಿಲ್ಲ. ಈ ಬಹಿಷ್ಕಾರವೆಂಬ ಸಂಗತಿಯು ಯಾವುದೋ ಒಂದು ಕುತಂತ್ರದಿಂದ ಅನಂತರ ಬಂದದ್ದಾಗಿರಬಹುದು. ಇವರು ಅಬ್ದುಲ್ಲ ಪತ್ರಿಯಾರ್ಕರಿಗೆ ಎದುರಾಗಿ ಕೆಲವು ಕಾರ್ಯಗಳನ್ನು ಮಾಡಿದ್ದಾರೆಂಬ ಸಂಗತಿಯು ನಿಜವೇ. ಆದರೆ, ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ತಾನೇ ನಿಜವಾದ ಪತ್ರಿಯಾರ್ಕರೆಂದೂ, ತನ್ನ ವೈರಿಗಳ ಸಹಾಯದಿಂದ ಅಬ್ದುಲ್ಲರು ಪತ್ರಿಯಾರ್ಕರ ಸ್ಥಾನವನ್ನು ಅನ್ಯಾಯದ ಮಾರ್ಗಗಳಿಂದ ಸಂಪಾದಿಸಿದ ಕಾರಣ ಕಾನೂನುಗಳಿಗೆ ಸರಿಯಾದ ಪತ್ರಿಯಾರ್ಕರು ಅಬ್ದುಲ್ಲರಲ್ಲವೆಂದು ಅಬ್ದುಲ್ಲ ಮೆಸ್ಸಿಯ ಪತ್ರಿಯಾರ್ಕರು ತನ್ನ ಮನಸ್ಸಿನಲ್ಲಿ ನಂಬಿಕೊಂಡಿದ್ದರು. ಆ ಸಮಯದಲ್ಲಿ ಅಬ್ದುಲ್ ಪತ್ರಿಯಾರ್ಕರು ಮಲಬಾರಿಗೆ ಬಂದು, ಸೀರಿಯನ್ ಸಭೆಯಲ್ಲಿ ತುಂಬಾ ಉಪದ್ರವಗಳನ್ನು ತಂದೊಡ್ಡಿದ ಕಾರಣ ಈ ಒಡಕುಗಳನ್ನು ಸರಿಪಡಿಸಬೇಕೆಂದು ಮಲಬಾರಿನವರು ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರೊಡನೆ ಬೇಡಿಕೊಂಡರು. ಇವರು ತನ್ನ ಉದಾರ ಹೃದಯದಿಂದ ಸಹಾಯಮಾಡಲು ಒಪ್ಪಿದರು. ಇದಾದ ನಂತರ ಇಬ್ಬರು ಪತ್ರಿಯಾರ್ಕರು ಒಬ್ಬರಿಗೊಬ್ಬರು ಬಹಿಷ್ಕಾರಗಳನ್ನು ಹಾಕಿದರು. ಈ ರೀತಿಯಲ್ಲಿ ಸಭೆಯಲ್ಲಿ ಕಲಹ ಉಂಟಾಯಿತು. ಗ್ರೆಗೋರಿಯೋಸ್ ಅಬ್ದುಲ್ಲರು ಮಲಬಾರಿನ ಮೆಟ್ರೊಪೊಲಿಟನರಾದ ಮಾರ್ ಗೀವರುಗೀಸ್ ದಿಯೋನಿಸಿಯುಸರನ್ನು ಇಗರ್ಜಿಗಳ ಮತ್ತು ಆಸ್ತಿಗಳ ಅಧಿಕಾರವನ್ನು ತನಗೆ ಬಿಟ್ಟು ಕೊಡಬೇಕಾಗಿ ಒತ್ತಾಯಪಡಿಸಿದರೂ, ಮಾರ್ ದಿಯೋನಿಸಿಯುಸರು ಒಪ್ಪಲಿಲ್ಲ. ಇದನ್ನು ಗ್ರಿಗೋರಿಯೋಸ್ ಅಬ್ದುಲ್ಲರು ಮನಸ್ಸಿನಲ್ಲಿಟ್ಟುಕೊಂಡು ಗ್ರಿಗೋರಿಯೋಸ್ ಅಬ್ದುಲ್ಲರು ಮಾರ್ ದಿಯೋನಿಸಿಯುಸರಿಗೆ ಬಹಿಷ್ಕಾರ ಹಾಕಿದರು. ದಿಯೋಸಿಜಿಗಳ ಆಡಳಿತೆಇದ್ದಂಥ ಬಿಶೋಪರಾದ ಮಾರ್ ಇವಾನಿಯೋಸರೂ, ಮಾರ್ ಆಲ್ವಾರೀಸರೂ ಆ ಬಹಿಷ್ಕಾರವು ವ್ಯರ್ಥವಾದುದೆಂದೂ, ಅನ್ಯಾಯದ್ದೆಂದೂ ಪತ್ರ ಬರೆದರು. ಅಂತಿಯೋಕ ಸಿಂಹಾಸನದಲ್ಲಿದ್ದಂಥ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಕೂಡ ಅದೇ ರೀತಿ ಬರೆದು ಕಳುಹಿಸಿದರು. ಈ ಎಲ್ಲಾ ಸಂಗತಿಗಳು ವಾಚಕರು ಈ ಮುಂಚೆ ಓದಿ ತಿಳಿದಿರಬಹುದು. ಬಿಶೋಪ್ಪುಗಳೆಲ್ಲರೂ ಅಬ್ದುಲ್ಲರಿಗೆ ವಿರೋಧವಾಗಿ ನಿಂತುದನ್ನು ಕಂಡ ಮೇಲೂ ಅಬ್ದುಲ್ಲರು ತನ್ನ ದುಷ್ಕೃತ್ಯಗಳನ್ನು ನಿಲ್ಲಿಸಲಿಲ್ಲ. ಅವರು ಕೆಲವು ಹೊಸ ಬಿಶೋಪರನ್ನು ರಚಿಸಿದರು. ಇವರಿಗೆ ಬಿಶೋಪರಿಗೆ ಪಟ್ಟಕೊಡುವ ಅಧಿಕಾರವಿಲ್ಲದಿದ್ದರೂ ತನ್ನ ಉದ್ದೇಶವನ್ನು ನೆರವೇರಿಸುವಗೋಸ್ಕರ ಅಲ್ಲಸಲ್ಲದ ಕೃತ್ಯಗಳನ್ನು ಮಾಡಲು ಇವರು ಹೇಸುತ್ತಿರಲಿಲ್ಲ. ಇವರಿಂದ ರಚಿತವಾದ ಬಿಶೋಪರುಗಳು ಮಾರ್ ಗೀವರುಗೀಸ್ ಬಿಶೋಪರಿಗೆ ವಿರೋಧಿಗಳಾಗಿದ್ದರು.

ಮಲಬಾರಿನ ಸೀರಿಯನ್ ಸಭೆಯ ಮುಖ್ಯ ಮೆಟ್ರೊಪೊಲಿಟನರಾದ ಗೀವರುಗೀಸ್ ದಿಯೋನಿಸಿಯುಸರಿಗೆ ಇಗರ್ಜಿಗಳ ಫಂಡಿನ ಬಡ್ಡಿಯ ಸಲುವಾಗಿ 840 ರೂಪ್ಯಾ

ಗಳು ಬ್ರಿಟಿಷ್ ಸರಕಾರದಿಂದ ವರ್ಷಂಪ್ರತಿ ದೊರಕುತ್ತಿದ್ದುವು. ಅಬ್ದುಲ್ಲರು ತಾನು ಮಾರ್ ದಿಯೋನಿಸಿಯಸರನ್ನು ಬಹಿಷ್ಕರಿಸಿದ ಕಾರಣ ಅವರಿಗೆ ಆ ಬಡ್ಡಿಯನ್ನು ಕೊಡಬಾರದೆಂದು ಬ್ರಿಟಿಷ್ ಸರಕಾರಕ್ಕೆ ತಿಳಿಸಿದರು. ಆಗ ಬ್ರಿಟಿಷ್ ಸರಕಾರದವರು ಬಡ್ಡಿಯನ್ನು ಅನಾಮತ್ತಾಗಿ ಇಟ್ಟು ಉಭಯ ಪಕ್ಷದವರು ತಮ್ಮ ಹಕ್ಕನ್ನು ನ್ಯಾಯಸ್ಥಾನದಲ್ಲಿ ರುಜುಪಡಿಸಿದ ನಂತರ ಹಣವನ್ನು ಪಡೆಯಬಹುದೆಂದು ಹೇಳಿದರು. ಈ ವ್ಯಾಜ್ಯಕ್ಕೆ ಇಂಟರ್‌ಪ್ಲೀಡರ್ ವ್ಯಾಜ್ಯವೆಂದು ಹೆಸರು. ಆಖೈರಿಗೆ ತಿರುವಾಂಕೂರು ಹೈಕೋರ್ಟಿನವರು ಪತ್ರಿಯಾರ್ಕರ ಕಡೆಯವರು ಹಕ್ಕುದಾರರಲ್ಲವೆಂದೂ, ಅಬ್ದುಲ್ಲರು ಕೊಟ್ಟಂಥ ಬಹಿಷ್ಕಾರವು ಸಿಂಧುವಲ್ಲವೆಂದೂ ಮಾರ್ ಡಿಯೋನಿಸಿಯಸ್ ಬಿಶೋಪರಿಗೆ ಆ ಬಹಿಷ್ಕಾರದಿಂದ ಅವರ ಸ್ಥಾನಕ್ಕೆ ಯಾವ ಕೊರತೆಯೂ ಉಂಟಾಗಲಿಲ್ಲವೆಂದೂ, ಬ್ರಿಟಿಷ್ ಸರಕಾರದವರು ಅನಾಮತ್ತಾಗಿ ಇಟ್ಟಂಥ 840 ರೂಪ್ಯಾಗಳನ್ನು ಅವರಿಗೇನೇ ತೆರಬೇಕೆಂದೂ, ಅಂತಿಯೋಕದ ಪತ್ರಿಯಾರ್ಕರಿಗೆ ಇಗರ್ಜಿಗಳ ಲೌಕಿಕ ಅಧಿಕಾರವಿಲ್ಲವೆಂದೂ, ತೀರ್ಮಾನದಲ್ಲಿ ವಿಧಿಸಿದರು. ಈ ತೀರ್ಮಾನದಲ್ಲಿ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರ ಮತ್ತು ಕಥೋಲಿಕೋಸರ ವಿಷಯವಾಗಿ ಒಳ್ಳೇ ರೀತಿಯಲ್ಲಿ ಉಲ್ಲೇಖಿಸಿರುವರು. ತೀರ್ಮಾನದ ಒಂದಂಶವನ್ನು ಈ ಕೆಳಗೆ ಕೊಟ್ಟಿದೆ. ಇದನ್ನು ವಾಚಕರು ಓದಿ ನೋಡಿದರೆ ಯಾವುದು ಸತ್ಯ, ಯಾವುದು ಸುಳ್ಳು ಎಂದು ವ್ಯಕ್ತವಾಗಿ ತಿಳಿಯುವುದು. ಅಂತಿಯೋಕದ ಪತ್ರಿಯಾರ್ಕರಿಗೆ ಇಲ್ಲಿಯ (ಮಲಬಾರಿನ) ಇಗರ್ಜಿಗಳ ಅಧಿಕಾರವಿಲ್ಲವೆಂದೂ, ಅಬ್ದುಲ್ಲರು ಕೊಟ್ಟಂಥ ಬಹಿಷ್ಕಾರವು ಅನ್ಯಾಯದ್ದೆಂದೂ ಸ್ಪಷ್ಟವಾಗಿ ತಿಳಿಯುವುದು.

"ಮಾರ್ ದಿಯೋನಿಸಿಯಸ್ ಬಿಶೋಪರಿಗೆ ಅಬ್ದುಲ್ಲರು ಬಹಿಷ್ಕಾರ ಕೊಟ್ಟದ್ದಲ್ಲದೆ ಬೇರೊಂದು ನೆವನ ಕೂಡ ತಂದೊಡ್ಡಿದರು. ಅದಾವುದೆಂದರೆ— ಮಾರ್ ದಿಯೋನಿಸಿಯಸರು ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರನ್ನು ಸ್ವೀಕರಿಸಿದುದರಿಂದ ಅವರು ಸೀರಿಯನ್ ಸಭೆಯಿಂದ ಹೊರಗಾದರೆಂಬುದು. ಈ ಬಗ್ಗೆ ಜಿಲ್ಲಾ ಕೋರ್ಟಿನಲ್ಲಿ ತುಂಬಾ ಕಾರಣಗಳನ್ನು ತಂದೊಡ್ಡಿದಾಗ್ಯೂ ಈ ಕೋರ್ಟಿನಲ್ಲಿ ಅವರ ಹಲವು ರುಜುವಾತುಗಳನ್ನು ಅಂಗೀಕರಿಸದೆ ಬಿಟ್ಟು ಬಿಟ್ಟರು. ಮಾರ್ ದಿಯೋನಿಸಿಯಸರಿಗೆ ಬಹಿಷ್ಕಾರ ಹಾಕಿದ ನಂತರ ನಡೆದ ಕೆಲವು ಸಂಗತಿಗಳನ್ನೇ ರುಜುವಾತುಗಳಾಗಿ ಇವರು ತಂದಿದ್ದರು. ಮಾರ್ ದಿಯೋನಿಸಿಯಸ್ ಬಿಶೋಪರಿಗೂ, ಅಬ್ದುಲ್ಲರಿಗೂ ಅಭಿಪ್ರಾಯ ವ್ಯತ್ಯಾಸವಾಗುವ ವರೇಗೆ ಅಬ್ದುಲ್ಲರ ವಿಷಯ ಯಾರೂ ವಿರುದ್ಧವಾಗಿ ವಾದಿಸಲಿಲ್ಲ. ಈ ಸಮಯದಲ್ಲಿಯೇ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು ಟರ್ಕಿಯಲ್ಲಿದ್ದಾರೆಂದೂ, ಟರ್ಕಿ ದೇಶದ ಸುಲ್ತಾನನು ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ ಕೊಟ್ಟಂತಹ ಅಧಿಕಾರ ಪತ್ರವನ್ನು ಅದೇ ಸುಲ್ತಾನರೇ ಹಿಂತೆಗೆದರೆಂದೂ, ಈ ಅಧಿಕಾರ ಪತ್ರವನ್ನು ಹಿಂತೆಗೆದ ಮಾತ್ರಕ್ಕೆ ಅವರ ಪತ್ರಿಯಾರ್ಕರ ಸ್ಥಾನಕ್ಕೆ ಯಾವ ಕೊರತೆಯೂ ಬರಲಿಲ್ಲ



ವೆಂದೂ, ಅವರಿಗೆ ಅಲ್ಪ ಸಹಾಯವನ್ನು ಆಗ್ಗೆ ಕೊಟ್ಟಿದ್ದರೆ ಸಾಕಿತ್ತೆಂದೂ ಅಭಿಪ್ರಾಯಪಟ್ಟರು. ಇದರ ಫಲಿತಾಂಶವಾಗಿ ಫಾದರ್ ಗೀವರುಗೀಸರಿಗೂ, ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೂ ಪತ್ರವ್ಯವಹಾರವು ನಡೆಯಲು ಪ್ರಾರಂಭವಾಯಿತು. ಮಾರ್ ದಿಯೋನಿಸಿಯಸ್ ಬಿಶೋಪರನ್ನು ಅಬ್ದುಲ್ಲರು ಬಹಿಷ್ಕರಿಸಿದ ಕೂಡಲೇ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಟರ್ಕಿ ದೇಶದಿಂದ ಈ ಟೆಲಿಗ್ರಾಮನ್ನು ಕಳುಹಿಸಿದರು. "ಅಬ್ದುಲ್ಲರ ಬಹಿಷ್ಕಾರವು ವ್ಯರ್ಥವಾದುದು; ನೀವೂ ನಿಮ್ಮ ಅನುಯಾಯಿಗಳೂ ಆಶೀರ್ವದಿಸಲ್ಪಟ್ಟವರಾಗಿರುವಿರಿ." ಅನಂತರ ಅವರು ಇನ್ನೊಂದು ಪತ್ರವನ್ನು ಕಳುಹಿಸಿದರು. ಆ ಪತ್ರದಲ್ಲಿ ಅಬ್ದುಲ್ಲರನ್ನು ಹೀನ ರೀತಿಯಲ್ಲಿ ವರ್ಣಿಸಿದ್ದಲ್ಲದೆ, ಅವರ ಕೆಟ್ಟ ಕೃತ್ಯಗಳನ್ನು ತೋರಿಸಿ, ವಿಶ್ವಾಸವನ್ನು ತ್ಯಾಗಮಾಡಿದವರೆಂದು ಚಿತ್ರಿಸಿರುವರು. ಅಲ್ಲದೆ, ಅವರು ಆ ಸ್ಥಾನವನ್ನು ಲಂಚದಿಂದ ಪಡಕೊಂಡರೆಂದೂ ಬರೆದಿರುವರು. ಇಷ್ಟು ಮಾತ್ರವಲ್ಲದೆ, ಅವರು ಇಗರ್ಜಿಯ ಕಾನೂನುಗಳಿಗೆ ಸರಿಯಾದವರಲ್ಲವೆಂದೂ, ತಾನೇ ಕಾನೂನುಗಳಿಗೆ ಸರಿಯಾಗಿದ್ದ ಪತ್ರಿಯಾರ್ಕನೆಂದೂ ತಿಳಿಸಿರುವರು. ಹೇಗಾದರೂ ಕಾನೂನುಗಳಿಗನುಸಾರವಾಗಿ ಮೊದಲು ಪಟ್ಟಹೊಂದಿದ ಪತ್ರಿಯಾರ್ಕರು ಆಳಬೇಕಾದುದು. ಅನಂತರ ಪಟ್ಟಹೊಂದಿದವರು ಸುಮ್ಮನೆ ಕುಳಿತುಕೊಳ್ಳಬೇಕು. ಜನರು ಈ ನಿಜಸ್ಥಿತಿಯನ್ನು ತಿಳಿಯದೆ ಅಬ್ದುಲ್ಲರನ್ನು ಪತ್ರಿಯಾರ್ಕರಾಗಿ ಸ್ವೀಕರಿಸಿದುದಕ್ಕೆ ಅವರ ಮೂಢಭಾವನೆಯೇ ಕಾರಣವಾದುದು. ಅವರನ್ನು ಸಂಪೂರ್ಣವಾಗಿ ಕ್ಷಮಿಸಬೇಕಾದದ್ದೇ. ಆದರೆ ನಿಜಸ್ಥಿತಿಯನ್ನು ತಿಳಿದುಕೊಂಡು ಇನ್ನೂ ಅಬ್ದುಲ್ಲರನ್ನು ಪತ್ರಿಯಾರ್ಕರೆಂದು ಸ್ವೀಕರಿಸಿದರೆ ಅಂಥವರಿಗೆ ಕ್ಷಮೆ ಇರಲಾರದು. ಅಬ್ದುಲ್ಲರು ಮಲಬಾರಿನ ಇಗರ್ಜಿಯ ಆಸ್ತಿಗಳ ವಿಚಾರದಲ್ಲಿ ಕೈಹಾಕಿದ್ದು, ಮಾರ್ ದಿಯೋನಿಸಿಯಸ್ ಬಿಶೋಪರನ್ನು ಬಹಿಷ್ಕರಿಸಿದ್ದು, ಈ ಕೃತ್ಯಗಳು ಖಂಡಿಸಲ್ಪಟ್ಟವೆ. ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಆಶೀರ್ವದಿಸುವ ಮಾರ್ ದಿಯೋನಿಸಿಯಸರಿಗೆ ಬಹಿಷ್ಕರಿಸುವ ಅಧಿಕಾರ ಅಬ್ದುಲ್ಲರಿಗಿರುವುದಿಲ್ಲ.

ಸ್ವಲ್ಪ ಸಮಯದ ನಂತರ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಅಂತಿಯೋಕದ ಪತ್ರಿಯಾರ್ಕರೆಂಬ ಅಧಿಕಾರದಲ್ಲಿ ಮಲಬಾರಿಗೆ ಬಂದು ಹಲವು ಇಗರ್ಜಿಗಳನ್ನು ಸಂದರ್ಶಿಸಿ, ಸ್ಥಾನಮಾನಕ್ಕನುಚಿತವಾದ ಕೃತ್ಯಗಳನ್ನು ನಡಿಸಿದರು. ಅವರು ಹಲವರನ್ನು ಬಿಶೋಪರಾಗಿ ಮಾಡಿ ಮಾರ್ ಇವಾನಿಯೋಸ್ ಎಂಬವರನ್ನು ಕಥೋಲಿಕೋಸರಾಗಿ ಪಟ್ಟಕಟ್ಟಿದರು. ಕಥೋಲಿಕೋಸ್ ಸ್ಥಾನವನ್ನು ಇಲ್ಲಿ ಏರ್ಪಡಿಸಿದುದರಿಂದ ಇಲ್ಲಿಯವರು ಚಿರಕಾಲದಿಂದಲೂ ಅಪೇಕ್ಷಿಸಿದ ವರವು ದೊರೆತಂತಾಯಿತು. ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಗಿಂತ ಹಿಂದಿನ ಪತ್ರಿಯಾರ್ಕರೊಡನೆ ಹಲವು ಬಾರಿ ಬೇಡಿಕೊಂಡರೂ ಅದು ನಿಷ್ಫಲವಾಗಿತ್ತು. ಕಥೋಲಿಕೋಸ್ ಸ್ಥಾನವನ್ನು ಮಲಬಾರಿನಲ್ಲಿ ಸ್ಥಾಪಿಸಿದುದರಿಂದ ಇಲ್ಲಿಯವರಿಗೆ ಬಿಶೋಪರನ್ನು ಪಟ್ಟಕ್ಕೆ ನೇಮಿಸುವ ಅಧಿಕಾರವೂ

ಗಳು ಬ್ರಿಟಿಷ್ ಸರಕಾರದಿಂದ ವರ್ಷಂಪ್ರತಿ ದೊರಕುತ್ತಿದ್ದುವು. ಅಬ್ದುಲ್ಲರು ತಾನು ಮಾರ್ ದಿಯೋನಿಸಿಯಸರನ್ನು ಬಹಿಷ್ಕರಿಸಿದ ಕಾರಣ ಅವರಿಗೆ ಆ ಬಡ್ಡಿಯನ್ನು ಕೊಡಬಾರದೆಂದು ಬ್ರಿಟಿಷ್ ಸರಕಾರಕ್ಕೆ ತಿಳಿಸಿದರು. ಆಗ ಬ್ರಿಟಿಷ್ ಸರಕಾರದವರು ಬಡ್ಡಿಯನ್ನು ಅನಾಮತ್ತಾಗಿ ಇಟ್ಟು ಉಭಯ ಪಕ್ಷದವರು ತಮ್ಮ ಹಕ್ಕನ್ನು ನ್ಯಾಯಸ್ಥಾನದಲ್ಲಿ ರುಜುಪಡಿಸಿದ ನಂತರ ಹಣವನ್ನು ಪಡೆಯಬಹುದೆಂದು ಹೇಳಿದರು. ಈ ವ್ಯಾಜ್ಯಕ್ಕೆ ಇಂಟರ್‌ಪ್ಲೀಡರ್ ವ್ಯಾಜ್ಯವೆಂದು ಹೆಸರು. ಆಖೈರಿಗೆ ತಿರುವಾಂಕೂರು ಹೈಕೋರ್ಟಿನವರು ಪತ್ರಿಯಾರ್ಕರ ಕಡೆಯವರು ಹಕ್ಕುದಾರರಲ್ಲವೆಂದೂ, ಅಬ್ದುಲ್ಲರು ಕೊಟ್ಟಂಥ ಬಹಿಷ್ಕಾರವು ಸಿಂಧುವಲ್ಲವೆಂದೂ ಮಾರ್ ಡಿಯೋನಿಸಿಯಸ್ ಬಿಶೋಪರಿಗೆ ಆ ಬಹಿಷ್ಕಾರದಿಂದ ಅವರ ಸ್ಥಾನಕ್ಕೆ ಯಾವ ಕೊರತೆಯೂ ಉಂಟಾಗಲಿಲ್ಲವೆಂದೂ, ಬ್ರಿಟಿಷ್‌ಸರಕಾರದವರು ಅನಾಮತ್ತಾಗಿ ಇಟ್ಟಂಥ 840 ರೂಪ್ಯಾಗಳನ್ನು ಅವರಿಗೇನೇ ತೆರಬೇಕೆಂದೂ, ಅಂತಿಯೋಕದ ಪತ್ರಿಯಾರ್ಕರಿಗೆ ಇಗರ್ಜಿಗಳ ಲೌಕಿಕ ಅಧಿಕಾರವಿಲ್ಲವೆಂದೂ, ತೀರ್ಮಾನದಲ್ಲಿ ವಿಧಿಸಿದರು. ಈ ತೀರ್ಮಾನದಲ್ಲಿ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರ ಮತ್ತು ಕಥೋಲಿಕೋಸರ ವಿಷಯವಾಗಿ ಒಳ್ಳೇ ರೀತಿಯಲ್ಲಿ ಉಲ್ಲೇಖಿಸಿರುವರು. ತೀರ್ಮಾನದ ಒಂದಂಶವನ್ನು ಈ ಕೆಳಗೆ ಕೊಟ್ಟದೆ. ಇದನ್ನು ಪಾಠಕರು ಓದಿ ನೋಡಿದರೆ ಯಾವುದು ಸತ್ಯ, ಯಾವುದು ಸುಳ್ಳು ಎಂದು ವ್ಯಕ್ತವಾಗಿ ತಿಳಿಯುವುದು. ಅಂತಿಯೋಕದ ಪತ್ರಿಯಾರ್ಕರಿಗೆ ಇಲ್ಲಿಯ (ಮಲಬಾರಿನ) ಇಗರ್ಜಿಗಳ ಅಧಿಕಾರವಿಲ್ಲವೆಂದೂ, ಅಬ್ದುಲ್ಲರು ಕೊಟ್ಟಂಥ ಬಹಿಷ್ಕಾರವು ಅನ್ಯಾಯಯುಕ್ತವೆಂದೂ ಸ್ಪಷ್ಟವಾಗಿ ತಿಳಿಯುವುದು.

"ಮಾರ್ ದಿಯೋನಿಸಿಯಸ್ ಬಿಶೋಪರಿಗೆ ಅಬ್ದುಲ್ಲರು ಬಹಿಷ್ಕಾರ ಕೊಟ್ಟದ್ದಲ್ಲದೆ ಬೇರೊಂದು ನೆವನ ಕೂಡ ತಂದೊಡ್ಡಿದರು. ಅದಾವುದೆಂದರೆ — ಮಾರ್ ದಿಯೋನಿಸಿಯಸರು ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರನ್ನು ಸ್ವೀಕರಿಸಿದುದರಿಂದ ಅವರು ಸೀರಿಯನ್ ಸಭೆಯಿಂದ ಹೊರಗಾದರೆಂಬುದು. ಈ ಬಗ್ಗೆ ಜಿಲ್ಲಾ ಕೋರ್ಟಿನಲ್ಲಿ ತುಂಬಾ ಕಾರಣಗಳನ್ನು ತಂದೊಡ್ಡಿದಾಗ್ಯೂ ಈ ಕೋರ್ಟಿನಲ್ಲಿ ಅವರ ಹಲವು ರುಜುವಾತುಗಳನ್ನು ಅಂಗೀಕರಿಸದೆ ಬಿಟ್ಟು ಬಿಟ್ಟರು. ಮಾರ್ ದಿಯೋನಿಸಿಯಸರಿಗೆ ಬಹಿಷ್ಕಾರ ಹಾಕಿದ ನಂತರ ನಡೆದ ಕೆಲವು ಸಂಗತಿಗಳನ್ನೇ ರುಜುವಾತುಗಳಾಗಿ ಇವರು ತಂದಿದ್ದರು. ಮಾರ್ ದಿಯೋನಿಸಿಯಸ್ ಬಿಶೋಪರಿಗೂ, ಅಬ್ದುಲ್ಲರಿಗೂ ಅಭಿಪ್ರಾಯ ವ್ಯತ್ಯಾಸವಾಗುವ ವರೇಗೆ ಅಬ್ದುಲ್ಲರ ವಿಷಯ ಯಾರೂ ವಿರುದ್ಧವಾಗಿ ವಾದಿಸಲಿಲ್ಲ. ಈ ಸಮಯದಲ್ಲಿಯೇ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು ಟರ್ಕಿಯಲ್ಲಿದ್ದಾರೆಂದೂ, ಟರ್ಕಿ ದೇಶದ ಸುಲ್ತಾನನು ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ ಕೊಟ್ಟಂತಹ ಅಧಿಕಾರ ಪತ್ರವನ್ನು ಅದೇ ಸುಲ್ತಾನರೇ ಹಿಂತೆಗೆದರೆಂದೂ, ಈ ಅಧಿಕಾರ ಪತ್ರವನ್ನು ಹಿಂತೆಗೆದ ಮಾತ್ರಕ್ಕೆ ಅವರ ಪತ್ರಿಯಾರ್ಕರ ಸ್ಥಾನಕ್ಕೆ ಯಾವ ಕೊರತೆಯೂ ಬರಲಿಲ್ಲ



ವೆಂದೂ, ಅವರಿಗೆ ಅಲ್ಪ ಸಹಾಯವನ್ನು ಆಗ್ಗೆ ಕೊಟ್ಟದ್ದರೆ ಸಾಕಿತ್ತೆಂದೂ ಅಭಿಪ್ರಾಯಪಟ್ಟರು. ಇವರ ಫಲಿತಾಂಶವಾಗಿ ಫಾದರ್ ಗೀವರುಗೀಸರಿಗೂ, ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೂ ಪತ್ರವ್ಯವಹಾರವು ನಡೆಯಲು ಪ್ರಾರಂಭವಾಯಿತು. ಮಾರ್ ದಿಯೋನಿಸಿಯಸ್ ಬಿಶೋಪರನ್ನು ಅಬ್ದುಲ್ಲರು ಬಹಿಷ್ಕರಿಸಿದ ಕೂಡಲೇ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಟರ್ಕಿ ದೇಶದಿಂದ ಈ ಟೆಲಿಗ್ರಾಮನ್ನು ಕಳುಹಿಸಿದರು. "ಅಬ್ದುಲ್ಲರ ಬಹಿಷ್ಕಾರವು ವ್ಯರ್ಥವಾದುದು; ನೀವೂ ನಿಮ್ಮ ಅನುಯಾಯಿಗಳೂ ಆಶೀರ್ವದಿಸಲ್ಪಟ್ಟವರಾಗಿರುವಿರಿ." ಅನಂತರ ಅವರು ಇನ್ನೊಂದು ಪತ್ರವನ್ನು ಕಳುಹಿಸಿದರು. ಆ ಪತ್ರದಲ್ಲಿ ಅಬ್ದುಲ್ಲರನ್ನು ಹೀನ ರೀತಿಯಲ್ಲಿ ವರ್ಣಿಸಿದ್ದಲ್ಲದೆ, ಅವರ ಕೆಟ್ಟ ಕೃತ್ಯಗಳನ್ನು ತೋರಿಸಿ, ವಿಶ್ವಾಸವನ್ನು ತ್ಯಾಗಮಾಡಿದವರೆಂದು ಚಿತ್ರಿಸಿರುವರು. ಅಷ್ಟಲ್ಲದೆ, ಅವರು ಆ ಸ್ಥಾನವನ್ನು ಲಂಚದಿಂದ ಪಡಕೊಂಡರೆಂದೂ ಬರೆದಿರುವರು. ಇಷ್ಟು ಮಾತ್ರವಲ್ಲದೆ, ಅವರು ಇಗರ್ಜಿಯ ಕಾನೂನುಗಳಿಗೆ ಸರಿಯಾದವರಲ್ಲವೆಂದೂ, ತಾನೇ ಕಾನೂನುಗಳಿಗೆ ಸರಿಯಾಗಿದ್ದ ಪತ್ರಿಯಾರ್ಕನೆಂದೂ ತಿಳಿಸಿರುವರು. ಹೇಗಾದರೂ ಕಾನೂನುಗಳಿಗನುಸಾರವಾಗಿ ಮೊದಲು ಪಟ್ಟಹೊಂದಿದ ಪತ್ರಿಯಾರ್ಕರು ಆಳಬೇಕಾದುದು. ಅನಂತರ ಪಟ್ಟಹೊಂದಿದವರು ಸುಮ್ಮನೆ ಕುಳಿತುಕೊಳ್ಳಬೇಕು. ಜನರು ಈ ನಿಜಸ್ಥಿತಿಯನ್ನು ತಿಳಿಯದೆ ಅಬ್ದುಲ್ಲರನ್ನು ಪತ್ರಿಯಾರ್ಕರಾಗಿ ಸ್ವೀಕರಿಸಿದುದಕ್ಕೆ ಅವರ ಮೂಢಭಾವನೆಯೇ ಕಾರಣವಾದುದು. ಅವರನ್ನು ಸಂಪೂರ್ಣವಾಗಿ ಕ್ಷಮಿಸಬೇಕಾದದ್ದೇ. ಆದರೆ ನಿಜಸ್ಥಿತಿಯನ್ನು ತಿಳಿದುಕೊಂಡು ಇನ್ನೂ ಅಬ್ದುಲ್ಲರನ್ನು ಪತ್ರಿಯಾರ್ಕರೆಂದು ಸ್ವೀಕರಿಸಿದರೆ ಅಂಥವರಿಗೆ ಕ್ಷಮೆ ಇರಲಾರದು. ಅಬ್ದುಲ್ಲರು ಮಲಬಾರಿನ ಇಗರ್ಜಿಯ ಆಸ್ತಿಗಳ ವಿಚಾರದಲ್ಲಿ ಕೈಹಾಕಿದ್ದು, ಮಾರ್ ದಿಯೋನಿಸಿಯಸ್ ಬಿಶೋಪರನ್ನು ಬಹಿಷ್ಕರಿಸಿದ್ದು, ಈ ಕೃತ್ಯಗಳು ಖಂಡಿಸಲ್ಪಟ್ಟವೆ. ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಆಶೀರ್ವದಿಸುವ ಮಾರ್ ದಿಯೋನಿಸಿಯಸರಿಗೆ ಬಹಿಷ್ಕರಿಸುವ ಅಧಿಕಾರ ಅಬ್ದುಲ್ಲರಿಗಿರುವುದಿಲ್ಲ.

ಸ್ವಲ್ಪ ಸಮಯದ ನಂತರ ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರು ಅಂತಿಯೋಕದ ಪತ್ರಿಯಾರ್ಕರೆಂಬ ಅಧಿಕಾರದಲ್ಲಿ ಮಲಬಾರಿಗೆ ಬಂದು ಹಲವು ಇಗರ್ಜಿಗಳನ್ನು ಸಂದರ್ಶಿಸಿ, ಸ್ಥಾನಮಾನಕ್ಕುಚಿತವಾದ ಕೃತ್ಯಗಳನ್ನು ನಡಿಸಿದರು. ಅವರು ಹಲವರನ್ನು ಬಿಶೋಪರಾಗಿ ಮಾಡಿ ಮಾರ್ ಇವಾನಿಯೋಸ್ ಎಂಬವರನ್ನು ಕಥೋಲಿಕೋಸರಾಗಿ ಪಟ್ಟಕಟ್ಟಿದರು. ಕಥೋಲಿಕೋಸ್ ಸ್ಥಾನವನ್ನು ಇಲ್ಲಿ ಏರ್ಪಡಿಸಿದುದರಿಂದ ಇಲ್ಲಿಯವರು ಚಿರಕಾಲದಿಂದಲೂ ಅಪೇಕ್ಷಿಸಿದ ವರವು ದೊರೆತಂತಾಯಿತು. ಅಬ್ದುಲ್ ಮೆಸ್ಸಿಯ ಪತ್ರಿಯಾರ್ಕರಿಗಿಂತ ಹಿಂದಿನ ಪತ್ರಿಯಾರ್ಕರೊಡನೆ ಹಲವು ಬಾರಿ ಬೇಡಿಕೊಂಡರೂ ಅದು ನಿಷ್ಫಲವಾಗಿತ್ತು. ಕಥೋಲಿಕೋಸ್ ಸ್ಥಾನವನ್ನು ಮಲಬಾರಿನಲ್ಲಿ ಸ್ಥಾಪಿಸಿದುದರಿಂದ ಇಲ್ಲಿಯವರಿಗೆ ಬಿಶೋಪರನ್ನು ಪಟ್ಟಕ್ಕೆ ನೇಮಿಸುವ ಅಧಿಕಾರವೂ

ಮೂರೋನ್ ತೈಲವನ್ನು ಶುದ್ಧೀಕರಿಸುವಂತಹ ಅಧಿಕಾರವೂ ದೊರೆಯಿತು. ಪೂರ್ವ ಪ್ರಾಂತ್ಯಗಳ ಮುಖ್ಯಾಧಿಕಾರಿಯಾದ ಕಥೋಲಿಕೋಸರು ಮಲಬಾರಿನಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದರು. ಕಥೋಲಿಕೋಸರ ಸ್ಥಾನವನ್ನು ಇಲ್ಲಿ ಸ್ಥಾಪಿಸಿದುದರಿಂದ ಮಲಬಾರಿನವರು ಟರ್ಕಿದೇಶಕ್ಕೆ ಹೋಗುವಂತಹ ಉಪದ್ರವಗಳು ಪರಿಹಾರವಾದುವು. ಅಂತಿಯೋಕದ ಪತ್ರಿಯಾರ್ಕರಿಗೂ, ಮಲಬಾರಿನ ಸಿರಿಯನ್ ಇಗರ್ಜಿಗೂ ಇದ್ದಂಥ ಸಂಬಂಧವು ಕೊನೆಗೊಂಡಿತು. ಹೇಗೆಂದರೆ— ಮಲಬಾರಿನ ಯಾವತ್ತು ವಿಷಯಗಳಲ್ಲಿ ಪತ್ರಿಯಾರ್ಕರಿಗೆ ಕೈಹಾಕುವ ಸಂದರ್ಭವೇ ದೊರಕುವುದಿಲ್ಲ.

ಒಂದು ಸಮಯದಲ್ಲಿ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು ಅಂತಿಯೋಕದ ಪತ್ರಿಯಾರ್ಕರಾಗಿದ್ದರೆಂದೂ, ಅನಂತರ ಅವರು ಆ ಸ್ಥಾನದಿಂದ ತೆಗೆಯಲ್ಪಟ್ಟರೆಂದೂ, ಅಬ್ದುಲ್ಲರು ಪಟ್ಟವನ್ನೇರಿದರೆಂದೂ ಹೇಳುವರು. ಆದರೆ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು ಹೇಗೆ ಮತ್ತು ಯಾವ ಕಾರಣಗಳಿಂದ ತೆಗೆಯಲ್ಪಟ್ಟರೆಂಬುದು ಯಾರಿಗೂ ತಿಳಿದಿರುವುದಿಲ್ಲ. ರುಜುವಾತುಗಳನ್ನು ಕೇಳುವಾಗ ವದಂತಿಗಳನ್ನೇ (ಬಾಯಿಮಾತುಗಳು) ರುಜುವಾತುಗಳನ್ನಾಗಿ ಮುಂದಕ್ಕೆ ತರುತ್ತಾರೆ. ಇಂತಹ ರುಜುವಾತುಗಳನ್ನು ನಂಬುವುದಾದರೂ ಹೇಗೆ? "ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಂದ ಟರ್ಕಿ ಸುಲ್ತಾನನು ಅಧಿಕಾರ ಪತ್ರವನ್ನು ಹಿಂತೆಗೆದುದರಿಂದ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ ಅವರ ಸಭೆಯಲ್ಲಿ ನ್ಯಾಯವನ್ನು ತೀರಿಸುವಂತಹ ಅಧಿಕಾರವು ನಿಂತುಹೋಯಿತೆಂದು." ಮಾರ್ ದಿಯೋನಿಸಿಯಸ್ ಬಿಶೋಪರ ಪಕ್ಷದವರು ವಾದಿಸುವರು.

ಉಭಯ ಪಕ್ಷದವರು ಒಪ್ಪಿಕೊಳ್ಳುವಂತಹ ಕೆಲವು ಸಂಗತಿಗಳು ಇವೆ:—

1. ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಂದ ಸುಲ್ತಾನನು ಅಧಿಕಾರಪತ್ರವನ್ನು ಹಿಂತೆಗೆದುದು.

2. ಅಧಿಕಾರ ಪತ್ರವನ್ನು ಹಿಂತೆಗೆದುದರಿಂದ ಪತ್ರಿಯಾರ್ಕರ ಆತ್ಮೀಯವ ದೈವಿಕ ಅಧಿಕಾರಗಳಿಗೆ ಯಾವ ಕೊರತೆಯೂ ಬರಲಿಲ್ಲ.

ಪತ್ರಿಯಾರ್ಕರ ಕಡೆಯವರು ಹೇಳುವುದೇನೆಂದರೆ:— ಸಿರಿಯನ್ ಸಭೆಯು ವ ಯಾವುದೋ ಒಂದು ತೀರ್ಮಾನದ ಫಲಿತಾಂಶವಾಗಿ ಅಧಿಕಾರಪತ್ರವನ್ನು ಪತ್ರಿಯಾರ್ಕರಿಂದ ತೆಗೆಯಲ್ಪಟ್ಟಿರಬಹುದೆಂದು ಊಹಿಸುತ್ತಾರೆ.

ಸಿರಿಯನ್ ಸಭೆಯ ಕಾನೂನುಗಳ ಪ್ರಕಾರ ಮತತತ್ವಗಳ ಸಂಬಂಧವಾಗಿ ಯಾವುದೊಂದು ಭೇದಭಾವವಿಲ್ಲದಿರುವ ಕಾಲದಲ್ಲಿ ಒಂದೇ ಸಿಂಹಾಸನಕ್ಕೆ ಇಬ್ಬರು ಅಧಿಕಾರಿಗಳು ಬರುವಲ್ಲಿ ಮೊದಲು ಸಿಂಹಾಸನವನ್ನು ಆಕ್ರಮಿಸಿಕೊಂಡವರು



ಅಧಿಕಾರನಡಿಸುವವರಾಗಿಯೂ, ಕಡೆಗೆ ಬಂದವರು ಗೌಣರಾಗಿ ತಾಟಸ್ಥ್ಯವನ್ನು ವಹಿಸಬೇಕಾದುದೂ ಯುಕ್ತವಾಗಿದೆ.

ಹೇಗಿದ್ದರೂ ಕಥೋಲಿಕೋಸ್ ಪದವಿಯ ಸ್ಥಾಪನೆಯಾಗಲೀ, ಆ ಸ್ಥಾನಕ್ಕಾಗಿ ಪ್ರಯತ್ನಿಸುವ ಉದ್ಯಮವಾಗಲೀ ಸಿರಿಯನ್ ಸಭೆಯ ಕಾನೂನುಗಳಿಗೆ ವಿರೋಧವಾಗಿರುವುದಿಲ್ಲ.

ನಿಖ್ಯೇಯ ಸಭೆಯ ಕಾನೂನುಗಳಲ್ಲಿ ಪೂರ್ವ ಪ್ರಾಂತ್ಯಗಳಿಗೆ ದೊಡ್ಡ ಬಿಶೋಪರು ಬೇಕೆಂದೂ, ಆ ಬಿಶೋಪರು ಪತ್ರಿಯಾರ್ಕರಷ್ಟೇ ಅಧಿಕಾರವುಳ್ಳವರಾಗಬೇಕೆಂದೂ, ಆ ಬಿಶೋಪರಿಗೆ ಇತರರನ್ನು ಬಿಶೋಪರಾಗಿ ನೇಮಿಸುವ ಅಧಿಕಾರವಿರಬೇಕೆಂದೂ ಸ್ಪಷ್ಟವಾಗಿ ಹೇಳಿಯದೆ.

ಪತ್ರಿಯಾರ್ಕರ ಪಕ್ಷದವರು ಹೇಳುವ ಪ್ರಕಾರ— ಅಬ್ದುಲ್ಲರೇ ಕಥೋಲಿಕೋಸ್ ಸ್ಥಾನವನ್ನು ಸ್ಥಾಪಿಸಿದ್ದರೆ ಯಾವ ಕೊರತೆಯೂ ಇರಲಿಲ್ಲ ಎಂದು. ಮೇಲೆ ಹೇಳಿದ ಮಾತುಗಳಿಂದ ನಾವು ತಿಳಿದುಕೊಳ್ಳಬೇಕಾದುದು ಏನೆಂದರೆ—"ಪತ್ರಿಯಾರ್ಕರ ಸ್ಥಾನವನ್ನು ಇಬ್ಬರು ವ್ಯಕ್ತಿಗಳು ಹಾರೈಸುತ್ತಿದ್ದ ಕಾರಣ ಇಷ್ಟೆಲ್ಲಾ ಅನರ್ಥಗಳು ಉಂಟಾಗಲು ಕಾರಣವಾಯಿತು."

ನಮ್ಮ ಮುಂದೆ ಬಂದಿರುವ ರುಜುವಾತುಗಳಿಂದ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ ಪತ್ರಿಯಾರ್ಕರ ಸ್ಥಾನವಿರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಮತತತ್ವಗಳ ಸಂಬಂಧವಾದ ನ್ಯೂನತೆಗಳಿಲ್ಲದಿದ್ದರೆ ಇಬ್ಬರು ಪತ್ರಿಯಾರ್ಕರು ಒಂದೇ ಸಮಯದಲ್ಲಿ ಒಂದೇ ಸಿಂಹಾಸನಕ್ಕೆ ಅಧಿಕಾರಿಗಳಾಗಿ ಇರಬಹುದೆಂದು ಕಾನೂನುಗಳು ತಿಳಿಸುತ್ತವೆ. ಆದರೆ, ಅನಂತರ ಬಂದ ಪತ್ರಿಯಾರ್ಕರು ಸುಮ್ಮನೆ ಕುಳಿತುಕೊಳ್ಳಬೇಕು. ಈ ರೀತಿ ಮಾಡದೆ ಇದ್ದರೆ ಬಿಶೋಪರಿಗೆ ಪಟ್ಟಕೊಡುವಂಥಾದ್ದು, ಇತ್ಯಾದಿ ಪತ್ರಿಯಾರ್ಕರ ಸ್ಥಾನದ ಅಧಿಕಾರಗಳನ್ನು ಎರಡನೆಯವರು ನಡಿಸುವುದಾದರೆ ಅವುಗಳು ಸಿಂಧುವೋ ಅಲ್ಲವೋ ಎಂದು ನಿರ್ಧರಿಸಲು ಬೇರೆ ಮಾರ್ಗವಿಲ್ಲ. ಇಂತಹ ಸಂದರ್ಭಗಳಲ್ಲಿ ಎರಡನೇ ಪತ್ರಿಯಾರ್ಕರ ಕೆಲಸಗಳನ್ನು ಮೊದಲನೆಯವರು ಅಂಗೀಕರಿಸುವುದಾದರೆ ಮಾತ್ರವೇ ಅವುಗಳೆಲ್ಲವೂ ಸಂಪೂರ್ಣವಾಗಿ ಸಿಂಧುವಾಗುವುವು.

ಹೇಗಾದರೂ ದಿಯೋನಿಸಿಯಸ್ ಬಿಶೋಪರ ಪಕ್ಷದವರ ಇಗರ್ಜಿಗಳು ಹೊಸ ಸಭೆಗೆ ಸೇರಿದವುಗಳೆಂದೂ, ಅವರಿಗೆ ಸಿರಿಯನ್ ಇಗರ್ಜಿಯ ಫಂಡಿನ ಹಣದ ಬಡ್ಡಿಯನ್ನು ಅನುಭವಿಸಲು ಹಕ್ಕಿಲ್ಲವೆಂದೂ ಹೇಳಲು ಕಾರಣವಿಲ್ಲ.

## ಬಿಶೋಪ್ ಅಲ್ವರೇಸರು ದಿಯೋನಿಸಿಯುಸರಿಗೆ ಸಹಾಯಕರಾಗಿ ನಿಂತುದು.

ಅಬ್ದುಲ್ಲರು ಮಾರ್ ದಿಯೋನಿಸಿಯುಸರಿಗೆ ಬಹಿಷ್ಕಾರ ಹಾಕಿದ ಕೂಡಲೇ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ ಈ ವಾರ್ತೆಯನ್ನು ತಿಳಿಸಿದುದೂ, ಕೂಡಲೇ ಅಬ್ದುಲ್‌ಮೆಸ್ಸಿಯರು ಒಂದು ಟೆಲಿಗ್ರಾಮನ್ನು ಕಳುಹಿಸಿದುದೂ ಈ ಮುಂಚೆಯೇ ತಿಳಿಸಿದೆ. ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು ಅಬ್ದುಲ್ಲರು ಮಲಬಾರಿನಲ್ಲಿ ಉಂಟು ಮಾಡಿದ ಕಲಹಗಳಿಗಾಗಿ ಅವರನ್ನೂ, ಅವರ ಪಂಗಡದವರನ್ನೂ ಬಹಿಷ್ಕರಿಸಿದರು. ಈ ಬಹಿಷ್ಕಾರ ಪತ್ರದ ಪ್ರತಿಯನ್ನು ಮಾರ್ ದಿಯೋನಿಸಿಯುಸ್ ಬಿಶೋಪರಿಗೆ ಕಳುಹಿಸಿದ್ದರು. ಈಗ ಪತ್ರಿಯಾರ್ಕರ ಕಡೆಯವರೆಲ್ಲರೂ ಬಹಿಷ್ಕೃತರಾಗಿರುವರು. ಅವರಿಗೆ ಪರಿಶುದ್ಧ ಸಭೆಯಲ್ಲಿ ಏನೊಂದೂ ಪಾಲಿಲ್ಲ.

ಆ ಪಂಗಡದವರನ್ನು ಬಹಿಷ್ಕರಿಸಿದ ಪತ್ರವನ್ನು ಇತರ ಪತ್ರಗಳೊಂದಿಗೆ ಕೋರ್ಟಿನಲ್ಲಿ ಹಾಜರುಪಡಿಸಿರುತ್ತಾರೆ. ಈ ಸಮಯದಲ್ಲಿ ಮಾರ್ ಅಲ್ವರೇಸರು ತಿರುವಾಂಕೂರಿನಲ್ಲಿಯೇ ಇದ್ದು ಮಾರ್ ದಿಯೋನಿಸಿಯುಸರಿಗೆ ತುಂಬಾ ಸಹಾಯ ಮಾಡುತ್ತಿದ್ದರು. ಅಬ್ದುಲ್ಲರು ಇದನ್ನು ತಿಳಿದು ಮಾರ್ ಅಲ್ವರೇಸ್ ಬಿಶೋಪರಿಗೆ ಬರೆದುದೇನೆಂದರೆ—ನೀವು ಕೂಡಲೇ ನಿಮ್ಮ ದಿಯೋಸೇಜಿಗೆ ಹೋಗಿ ಅಲ್ಲಿ ಮುಟ್ಟಿದ್ದಿರೆಂಬ ವರ್ತಮಾನವನ್ನು ಕಳುಹಿಸಬೇಕೆಂದು ಅವರನ್ನು ಬೆದರಿಸಿ ಬರೆದರು. ಆದರೆ ಮಾರ್ ಅಲ್ವರೇಸರು ಏನೊಂದೂ ಬೆದರದೆ "ಕಾನೂನುಗಳಿಗೆ ಸರಿಯಾದ ಅಂತಿಯೋಕದ ಪತ್ರಿಯಾರ್ಕರು ಅಂತಿಯೋಕದಲ್ಲಿರುವರೆಂದೂ (ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು) ನೀವು ಅವರ ಸ್ಥಾನವನ್ನು ಅನ್ಯಾಯದಿಂದ ಅಪಹರಿಸಿಕೊಂಡುಬಂದಿರುವ ಕಾರಣ ನೀವು ಕೂಡಲೇ ನಿಮ್ಮ ಊರಿಗೆ ಹೋಗಿ ನೀವು ಅಲ್ಲಿ ಮುಟ್ಟಿದ ವಿವರವನ್ನು ಕೂಡಲೇ ನಮಗೆ ತಿಳಿಸಬೇಕೆಂದೂ" ಪ್ರತ್ಯುತ್ತರ ಬರೆದರು. ಅಬ್ದುಲ್ಲರು ಬಿಶೋಪ್ ಅಲ್ವರೇಸರಿಗೆ ಕೊಟ್ಟ ಉಪದ್ರವಗಳ ಕುರಿತು ಪತ್ರಿಯಾರ್ಕರ ಕಡೆಯವರ ಹತ್ತಿರ ಕೇಳಿದರೆ ತಿಳಿದುಕೊಳ್ಳಬಹುದು. ಆದರೆ, ಯಾವ ಕಷ್ಟಗಳಿಗೂ, ಹಿಂಸೆಗೂ ಮಾರ್ ಅಲ್ವರೇಸರು ಲಕ್ಷ್ಯ ಮಾಡದೆ ಮಾರ್ ದಿಯೋನಿಸಿಯುಸ್ ಬಿಶೋಪರಿಗೆ ಬೇಕಾದ ಸಹಾಯಗಳನ್ನು ಕೊನೆಯ ವರೆಗೂ ಮಾಡುತ್ತ ಇದ್ದರು.

ಇನ್ನೊಂದೆಡೆಯಲ್ಲಿ ಬಿಶೋಪ್ ಅಲ್ವರೇಸರ ಕುರಿತು ತಿರುವಾಂಕೂರು ಕೋರ್ಟಿನಲ್ಲಿ ಪತ್ರಿಯಾರ್ಕ ಪಂಗಡದವರೊಬ್ಬರ ಹತ್ತಿರ ವಿಚಾರಿಸಿದಾಗ ಅವರು ಹೇಳಿದುದೇನೆಂದರೆ- "ಬಿಶೋಪ್ ಅಲ್ವರೇಸರು ತಾಮ್ರವನ್ನು ಗುದ್ದುವವರ ಬಿಶೋಪರೆಂದು" ತುಚ್ಛ ಮಾತುಗಳಿಂದ ವರ್ಣಿಸಿದರು. ಈಗ ನಮ್ಮ ಬ್ರಹ್ಮಾವರ ಸೀರಿಯನ್ ಸಭೆಯವರಲ್ಲಿ ಕೆಲವರು



ಯಾವುದೊಂದನ್ನೂ ವಿಚಾರಿಸದೆ, ನಿಜಸ್ಥಿತಿಯನ್ನು ತಿಳಿಯದೆ ನಮ್ಮನ್ನು ಹೀನಮಾತುಗಳಿಂದ ವರ್ಣಿಸುವಂತಹ ಶಿಸ್ಮಾತಿಕರಾದ ಪತ್ರಿಯಾರ್ಕ ಪಂಗಡದವರ ಸಹವಾಸವನ್ನು ಮಾಡಿದುದಕ್ಕೆ ನಾವು ತುಂಬಾ ದುಃಖಿಸುತ್ತೇವೆ. ಪತ್ರಿಯಾರ್ಕ ಪಂಗಡದವರು ಬಿಶೋಪ ಅಲ್ವರೇಸರನ್ನು ತಮ್ಮ ಪಂಗಡಕ್ಕೆ ಎಳೆದುಕೊಂಡುಹೋಗಲು ತುಂಬಾ ಪ್ರಯತ್ನಿಸಿರುವರು. ಅವರು ತಮ್ಮ ಪಕ್ಷಕ್ಕೆ ಅನುಕೂಲರಾಗಿದ್ದರೆಂಬ ಪ್ರತಿಪಕ್ಷಿಗಳ ಅಂಬೋಣವು ಬಾಯಿಮಾತುಗಳಿಂದ ಮಾತ್ರವೇ ಹೇಳಬಹುದಲ್ಲದೆ ಬರಹ ಮೂಲಕ ತಿಳಿಸಲು ಅವರಿಗೆ ಎಂದೂ ಸಾಧ್ಯವಲ್ಲ. ಈ ವಿಚಾರವು ಹೈಕೋರ್ಟಿನ ತೀರ್ಮಾನಗಳಲ್ಲಿ ಸ್ಪಷ್ಟ ಉಲ್ಲೇಖವಾಗಿದೆ. ಸತ್ಯವು ಎಂದಿಗೂ ನಾಶವಾಗುವುದಿಲ್ಲ. ಶಿಸ್ಮಾತಿಕರಾದ ಪತ್ರಿಯಾರ್ಕರ ಪಕ್ಷದವರು ಸತ್ಯವನ್ನು ಬಚ್ಚಿಟ್ಟು ಕೆಲವು ಅಜ್ಜಿ ಕಥೆಗಳನ್ನು ಪ್ರಕಟಸಿರುವರು. ಆದರೆ, ಈ ಸುಳ್ಳು ಸಂಗತಿಗಳು ಸತ್ಯರೂಪವಾದ ಬೆಳಕಿನಲ್ಲಿ ಬಂದು ನಿಲ್ಲಲಾರದೆ ಪುನಹ ಅಸತ್ಯದ ಕಗ್ಗತ್ತಲೆಯನ್ನೇ ಪಡೆಯುವುದರಲ್ಲಿ ಸಂಶಯವೇನಿದೆ?

---

ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರು ಮಲಬಾರಿಗೆ ಬರುವ ಸಂದರ್ಭದಲ್ಲಿ ಟರ್ಕಿ ಸರಕಾರವು ಕೊಟ್ಟಂಥ ಪಾಸ್‌ಪೋರ್ಟು— ಇದರ ಪ್ರತಿಯನ್ನು 1:12ನೇ ಇಸವಿ ಜುಲೈ ತಿಂಗಳ 13ನೇ ತಾರೀಕಿನ 'ಮಲಯಾಳ ಮನೋರಮ' ಎಂಬ ಪತ್ರಿಕೆಯಲ್ಲಿ ಪ್ರಕಟಸಿರುತ್ತದೆ. ಇದೇ ಪಾಸ್‌ಪೋರ್ಟನ್ನು ತಿರುವಾಂಕೂರಿನ ಹೈಕೋರ್ಟಿನಲ್ಲಿಯೂ ಕೂಡಾ ಹಾಜರು ಪಡಿಸಿಯದೆ.

**ಟರ್ಕಿ ದೇಶದ ಸುಲ್ತಾನರಿಂದ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ—**

ಪ್ರಾಚೀನ ಸೀರಿಯನ್ ಸಭೆಯ ಪತ್ರಿಯಾರ್ಕರು ಮಾರ್ದಿನ್ ಪಟ್ಟಣದಲ್ಲಿ ಜನಿಸಿದ ಎಲಿಯಾ ಮಿಕಾಯೇಲ್ ಎಂಬವರ ಮಗನಾದ ಅಬ್ದುಲ್‌ಮೆಸ್ಸಿಯ ಪತ್ರಿಯಾರ್ಕರಿಗೆ ಹಿಂದುಸ್ಥಾನ ಮಲಬಾರ ಎಂಬ ಸ್ಥಳಗಳಲ್ಲಿ ಪ್ರಯಾಣ ಮಾಡಬೇಕೆಂಬ ಅಪೇಕ್ಷೆ ಇದ್ದಕಾರಣ ಅವರು ತಿರುಗಾಡುವ ಸ್ಥಳಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಊರುಗಳಲ್ಲಿಯೂ, ದೇಶಗಳಲ್ಲಿಯೂ ಬೇಕಾದ ಸಹಾಯ ಸಂರಕ್ಷಣಗಳು ನಮ್ಮ ರಾಜ್ಯದ ಮೇಲೆ ಸ್ನೇಹವಿರುವ ಎಲ್ಲಾ ಸರಕಾರದ ಅಧಿಕಾರಿಗಳು ಮಾಡಿಕೊಡಬೇಕಾಗಿ ಅಪೇಕ್ಷಿಸುತ್ತೇವೆ. ಅವರ ಸ್ಥಾನಕ್ಕೆ ಬೇಕಾದ ಎಲ್ಲಾ ಸಲಕರಣೆಗಳನ್ನು ಅವರ ದೈವಿಕ ಆಚರಣೆಗಳಿಗೆ ಒದಗಿಸಿಕೊಡಬೇಕು. ಅಂಥಹ ಕಾರ್ಯಗಳಲ್ಲಿ ಯಾರೂ ಅವರನ್ನು ವಿರೋಧಿಸದಂತೆ ನೋಡಿಕೊಳ್ಳಬೇಕು.

**ಟರ್ಕಿ ಮಂತ್ರಿ ಸಭೆಯ ಹುಕುಂ ಪ್ರಕಾರ ಕೊಡಲ್ಪಟ್ಟಿದೆ.**

## ಕಥೋಲಿಕೋಸ್ ಸ್ಥಾನವು ಸ್ಥಿರವಾದುದು.

ಅಬ್ದುಲ್‌ಮೆಸ್ಸಿಯಾ ಪತ್ರಿಯಾರ್ಕರು ಮಲಬಾರಿಗೆ ಬಂದು ಕಥೋಲಿಕೋಸ್ ಸ್ಥಾನವನ್ನು ಸ್ಥಾಪಿಸಿದನಂತರ ಆ ಸ್ಥಾನವು ಸ್ಥಿರವಾಗಿರಬೇಕೆಂದು ನಿಶ್ಚಯಿಸಿ ಬರೆದ ಪತ್ರ.

ಸರ್ವ ಶಕ್ತನೂ, ಶಾಶ್ವತ ಜೀವಿಯೂ ಆಗಿರುವವನ ಹೆಸರಿನಲ್ಲಿ—

**ಇಗ್ನೇಶಿಯಸ್ ಅಬ್ದೆದ್ ಮೆಸ್ಸಿಯ II ನೇ, ಪೂರ್ವ ಪ್ರಾಂತ್ಯಗಳ ಮತ್ತು ಅಂತಿಯೋಕದ ಅಪೋಸ್ತಲಿಕ್ ಸಿಂಹಾಸನದ ಪತ್ರಿಯಾರ್ಕರು**

(ಮೊಹರು)

ಸರ್ವಶಕ್ತನಾದ ದೇವರಿಂದ ಕಾಪಾಡಿಸಲ್ಪಟ್ಟಂತ ಮತ್ತು ಆಶೀರ್ವದಿಸಲ್ಪಟ್ಟಂಥಾ ಪವಿತ್ರ ಜ್ಞಾನಸ್ಥಾನದಿಂದ ಮುದ್ರಿಸಲ್ಪಟ್ಟಂತ ಪ್ರೇಮಾಸ್ಪದರಾದ ಮಲಬಾರಿನ ಕೆಥೋಲಿಕೆಸ್ ಪಂಥದ ಮುಖ್ಯಾಧಿಕಾರಿಗಳಾಗಿರುವ ಮೆಟ್ರೊಪೊಲಿಟನರುಗಳು, ಗುರುಗಳು, ಸನ್ಯಾಸಿಗಳು, ರಂಬಾನ್, ಡೀಕನರುಗಳು, ಪ್ರಸಿದ್ಧ ಪುರುಷರು ಮತ್ತು ಸೀರಿಯನ್ ಸಭೆಗೆ ಸೇರಿದ ಸರ್ವ ಜನರು ಇವರೆಲ್ಲರ ಶಿರಸ್ಸಿನ ಮೇಲೆ ದೈವಾನುಗ್ರಹವೂ ಆಶೀರ್ವಾದವೂ, ಸ್ವರ್ಗೀಯ ಕೃಪೆಯೂ ನೆಲಸಿರಲಿ. ನಿಮ್ಮಲ್ಲಿಯೂ ದೇವರ ಮಾತೆಯಾಗಿದ್ದ ಸಂತ ಮರಿಯಳ, ಸಂತ ಥೋಮಸ್ ಮತ್ತು ಇತರ ಅಪೋಸ್ತಲರ ಪ್ರಾರ್ಥನೆಗಳ ಮೂಲಕವೂ ನಮ್ಮ ಸ್ವಾಮಿಯಾದ ದೇವರ ಆಶೀರ್ವಾದವೂ ನೆಲಸಿರಲಿ. ಆಮೇನ್.

ಎರಡನೇ ಸಾರಿ ನಿಮ್ಮನ್ನು ಆಶೀರ್ವದಿಸಿದ ನಂತರ ಸತ್ಯಪ್ರೇಮದಿಂದ ತಿಳಿಯಪಡಿಸುವುದೇನೆಂದರೆ— ನಾವು ಮಿದಿಯಾರ್ ಪಟ್ಟಣದಲ್ಲಿದ್ದಾಗ ನಿಮ್ಮೆಲ್ಲರ ಪತ್ರಗಳು ತಲುಪಿದ್ದುವು. ಆ ಪತ್ರದಲ್ಲಿ ಅಬ್ದುಲ್ಲಾ ಅಫೆಂಡಿಯವರು ಮಲಬಾರ್ ಇಗರ್ಜಿಗಳಲ್ಲಿ ಸಾರಿದ ಜಗಳ, ಉಪದ್ರವ, ಲಡಾಯಿ ವಗೈರೆ ತಂಟೆಗಳನ್ನು ಓದಿನೋಡಿ ಬಹಳವಾಗಿ ದುಃಖಿಸುತ್ತೇವೆ. ದೈವಪ್ರೇರಣೆಯು ನಮ್ಮನ್ನು ಒತ್ತಾಯ ಪಡಿಸಿದ ಕಾರಣ ದೇವರ ಮೇಲೆ ವಿಶ್ವಾಸವನ್ನಿಟ್ಟು ನಾವು ಅಲ್ಲಿಂದ ನಿಮ್ಮ ಅಪೇಕ್ಷೆ ಪ್ರಕಾರ ಮಲಬಾರಿಗೆ ಹೊರಟು ಬಂದೆವು. ಕರುಣೆಯುಳ್ಳ ದೇವರ ಕೃಪೆಯಿಂದ ನಾವು ಉಪದ್ರವಗಳಿಂದಲೂ ಕಷ್ಟಗಳಿಂದಲೂ ಪಾರಾಗಿ ಸೌಖ್ಯದಿಂದ ಬಂದು ನಿಮ್ಮ ಕೂಡೆ ಸೇರಿದೆವು. ನಾವು ವಿಚಾರಿಸಿದ ಪ್ರಕಾರ ಮಲಬಾರಿನ ಮೆಟ್ರೊಪೊಲಿಟನರಾದ ಮಾರ್ ಗೀವರುಗೀಸ್ ದಿಯೋನಿಸಿಯುಸರೂ ಅವರೊಟ್ಟಿಗಿರುವ ಎಲ್ಲಾ ಅನುಯಾಯಿಗಳೂ ಒಳ್ಳೆಯವರೆಂದು ತಿಳಿದು ಬಂತು. ನಾವು ಇಲ್ಲಿ ಸಭೆ ನಡೆಸಿ ನಿಮ್ಮ ಅವಶ್ಯಕತೆಗಳನ್ನೂ, ಅಬ್ದುಲ್ಲ ಅಫೆಂಡಿಯವರು ಸಭೆಯ ಕಾನೂನುಗಳಿಗೆ ವಿರೋಧವಾಗಿ ಇಲ್ಲಿ ಮಾಡಿದ ಕಾರ್ಯಗಳನ್ನೂ ಕೂಡ ನಾವು ತಿಳಿದು ಕೊಂಡೆವು. ನಮ್ಮ ಮಲಬಾರಿನ ಸೀರಿಯನ್ ಸಭೆಯಲ್ಲಿ



ನಡೆಯುವ ಜಗಳ,ಲಡಾಯಿ ಮುಂತಾದುವುಗಳನ್ನು ನೋಡಿ ಬಹಳವಾಗಿ ನಾವು ದುಃಖ ಪಡುತ್ತೇವೆ. ನಮ್ಮ ಪ್ರಿಯ ಮಕ್ಕಳೇ! ಅಬ್ದುಲ್ಲ ಅಫೆಂಡಿಯವರು ಮಾಡಿದ ಕಾರ್ಯಗಳು ದೈವಿಕವಾದವುಗಳಲ್ಲ. ಅವುಗಳು ಪೈಶಾಚಿಕ ಕೃತ್ಯಗಳೆಂದು ಎಣಿಸಿಕೊಳ್ಳಿರಿ. ದೈವಿಕ ಕ್ರಿಯೆಗಳು ಶಾಂತಿದಾಯಕವೂ, ಪ್ರೇಮಯುಕ್ತವೂ ಆಗಿರುತ್ತವೆ. ನಮ್ಮ ಒಡೆಯನಾದ ಯೇಸುಕ್ರಿಸ್ತನು ಯಾರನ್ನೂ ಕೊಲೆಮಾಡಬೇಕೆಂದು ಅಪ್ಪಣೆ ಕೊಡಲಿಲ್ಲ. ಆದರೆ ಅವರ ಬದಲು ತನ್ನ ಪ್ರಾಣವನ್ನೇ ಮನುಷ್ಯವರ್ಗಕ್ಕಾಗಿ ಅರ್ಪಿಸಿದನು. ತನ್ನ ಕುರಿಗಳಿಗಾಗಿ ಜೀವವನ್ನು ಅರ್ಪಿಸಲು ಸಿದ್ಧವಾಗಿರಬೇಕೆಂದು ಮನುಷ್ಯರಿಗೆ ಹೇಳಿದ್ದನು. ಮರದ ಗುಣವು ಫಲದಿಂದ ತಿಳಿಯುವುದು. ನಮ್ಮ ದೇವರ ಆಜ್ಞೆಗಳಿಗೆ ವಿರೋಧವಾಗಿ ನಡೆಯುವವರು ದೇವರ ಸತ್ಯ ಸಭೆಗೆ ಸಹಾಯ ಮಾಡುವವರಲ್ಲ. ಅಂತಿಯೋಕದ ಸಿಂಹಾಸನಕ್ಕೆ ಸಹಾಯ ಮಾಡುತ್ತೇನೆಂದು ಹೇಳುವುದು ಬಡಪಾಯಿಗಳಾದ ಜನರನ್ನು ಮೋಸಗೊಳಿಸಲಿಕ್ಕಾಗಿ. ಅಂತಿಯೋಕದ ಸಿಂಹಾಸನವು ಕೊಲೆ, ಮೋಸ, ಸುಳ್ಳು ಮತ್ತು ಲೌಕಿಕ ಅಧಿಕಾರಗಳ ಮೋಹದಿಂದ ಸ್ಥಿರವಾಗುವುದಿಲ್ಲ. ಇವುಗಳೆಲ್ಲಾ ಪೈಶಾಚಿಕ ಮತ್ತು ಸ್ವಾರ್ಥಬುದ್ಧಿಯಿಂದ ಬರುವುದಲ್ಲದೆ ದೈವಿಕ ಪ್ರೇರಣೆಯಿಂದಲ್ಲ

ಪ್ರಿಯ ಮಕ್ಕಳೇ! ಎಚ್ಚರಿಕೆಯಿಂದ ಇರಿ; ಮೋಸಹೋಗಬೇಡಿರಿ; ನಿಮಗೆ ನಿತ್ಯಜೀವವು ಬೇಕೆಂದಾದರೆ ಅಂಥಹ ದುಷ್ಟ ಕೆಲಸಗಳಿಂದಲೂ, ಆಲೋಚನೆ ಗಳಿಂದಲೂ ದೂರವಾಗಿರಿ. ನಾವು ನಮ್ಮ ಒಡೆಯನಾದ ಯೇಸುವಿನೊಡನೆ ಪ್ರಾರ್ಥಿಸಿದಾಗ ದೇವರು ಪವಿತ್ರಾತ್ಮನ ಮೂಲಕ ತಿಳಿಸಿದ್ದೇನೆಂದರೆ— ನಿಮ್ಮ ಅವಶ್ಯ ಕತೆಗಳನ್ನು ನಾವು ಪೂರ್ತಿಗೊಳಿಸುವುದು ಒಳ್ಳೆಯದೆಂದು. ಆದಕಾರಣ ದೇವರ ಕೃಪೆಯಿಂದ ನಿಮ್ಮ ಅಪೇಕ್ಷೆಪ್ರಕಾರ ಬಸೇಲಿಯೋಸ್ ಎಂಬ ಹೆಸರಿನಲ್ಲಿ ಒಬ್ಬರ ಕಥೋಲಿಕೋಸರನ್ನೂ, 3 ಹೊಸ ಮೆಟ್ರೊಪೊಲಿಟನರುಗಳನ್ನೂ ಪಟ್ಟಕಟ್ಟಿದ್ದೇವೆ.

ಕಥೋಲಿಕೋಸ್ ಸ್ಥಾನವನ್ನು ಕೊಡದಿದ್ದರೆ ಮಲಬಾರಿನ ಸಭೆಯು ವಿವಿಧ ಕಾರಣಗಳಿಂದ ಪವಿತ್ರವಾಗಿರಲಿಕ್ಕೂ, ನಿರಂತರವಾಗಿ ನಿಲ್ಲಲಿಕ್ಕೂ, ತೊಡಕುಂಟಾಗುವುದೆಂದು ನಮಗೆ ತಿಳಿಯಿತು. ಆದರೆ ಈಗ ದೇವರ ಕೃಪೆಯಿಂದಲೂ, ಪವಿತ್ರತೆಯಿಂದಲೂ ಅಂತಿಯೋಕದ ಸಿಂಹಾಸನದ ಕಡೆಗೆ ಇನ್ನೂ ಹೆಚ್ಚು ಪ್ರೇಮವು ಸಲ್ಲುವುದೆಂದು ಗೊತ್ತಾಗುಂಟು. ಇದು ನಿಜವಾಗಿಯೂ ಸಂತೋಷಕರವಾದುದು. ಆದುದರಿಂದ ನಮ್ಮ ಪ್ರಿಯಮಕ್ಕಳೇ! ನೀವೆಲ್ಲರೂ ಸಮಾಧಾನದಿಂದಿರಬೇಕು. ನಾವು ದೇವರ ಕೃಪೆಯಿಂದ ನಮ್ಮೂರಿಗೆ ಹೊರಡುತ್ತೇವೆ. ನಾವು ಇಲ್ಲಿಂದ ಹೋದರೂ ನಿಮ್ಮನ್ನು ಎಂದಿಗೂ ಮರೆಯುವುದಿಲ್ಲವೆಂದು ನಂಬಿರಿ. ನಾವು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ರಕ್ತದಿಂದ ತೆಗೆದುಕೊಂಡಂಥ ಕುರಿಗಳಾದ ನಿಮಗೋಸ್ಕರ ಯಾವಾಗಲೂ ಪ್ರಾರ್ಥಿ

ಸುತ್ತೇವೆ. ನಮಗೋಸ್ಕರವೂ, ನಮ್ಮ ಸಭೆಗೋಸ್ಕರವೂ. ನೀವು ಶಾಂತಿ-ಸಮಾಧಾನಗಳಿಂದ ಇರಿ. ನಿಮ್ಮ ವಿರೋಧಿಗಳಿಗಾಗಿಯೂ, ನಿಮ್ಮನ್ನು ಶಪಿಸುವವರಿಗಾಗಿಯೂ ಪ್ರಾರ್ಥಿಸಿರಿ. ಸೀರಿಯನ್ ಇಗರ್ಜಿಯ ಕಾನೂನುಗಳಿಗೆ ವಿರೋಧವಾದ ಶಾಪಗಳಿಗೂ ಭಯಪಡಬೇಡಿರಿ. ಜಗಳ, ಲಡಾಯಿಗಳನ್ನು ಮಾಡುವವರನ್ನು ಕ್ಷಮಿಸಿರಿ. ಒಳ್ಳೇಯದನ್ನು ಮಾಡುವವರಿಗಾಗಲೀ, ಕೆಟ್ಟದ್ದನ್ನು ಮಾಡುವವರಿಗಾಗಲೀ ಪ್ರತಿಫಲ ಕೊಡುವಾತನು ದೇವರೇ ಆಗಿರುತ್ತಾನೆ. ನಿಮ್ಮೆಲ್ಲರನ್ನು ಒಳ್ಳೆಯ ಮತ್ತು ನಿಜಕುರುಬನಾದ ಯೇಸುಕ್ರಿಸ್ತನಿಗೆ ಒಪ್ಪಿಸಿಕೊಡುತ್ತೇವೆ. ಆತನು ನಿಮ್ಮನ್ನು ಕಾಪಾಡುವನು. ನಿಮ್ಮ ಕುರುಬರಾದ ಕಥೋಲಿಕಸ್ ಬಿಶೋಪರು ನಿಮ್ಮ ಗರ್ಜಿಗಳನ್ನು ನಡಿಸಿಕೊಡುವರೆಂದು ನಂಬುತ್ತೇವೆ. ಕಥೋಲಿಕಸರು ಸಭೆಯ ಕಾನೂನುಗಳಿಗನುಸಾರವಾಗಿ ನಿಮಗೆ ಬೇಕಾಗುವ ಬಿಶೋಪರನ್ನು ಪಟ್ಟಕಟ್ಟುವರು. ಅಲ್ಲದೆ ಪವಿತ್ರ ಮೂರೋನ್ ತೈಲವನ್ನು ಕೂಡಾ ಶುದ್ಧೀಕರಿಸುವರು. ಕಥೋಲಿಕಸರು ದಿವಂಗತರಾಗುವಾಗ ಅವರ ಸ್ಥಾನಕ್ಕೆ ಬೇರೊಬ್ಬ ಕಥೋಲಿಕಸರನ್ನು ನೇಮಿಸುವ ಅಧಿಕಾರವು ನಿಮ್ಮ ಬಿಶೋಪರುಗಳಿಗಿದೆ. ಈ ಅಧಿಕಾರದಿಂದ ಅವರನ್ನು ಅಡ್ಡಿಮಾಡಲು ಯಾರಿಗೂ ಸಾಧ್ಯವಿಲ್ಲ. ಎಲ್ಲಾ ಕಾರ್ಯಗಳು ಮುಂಚಿನಂತೆಯೇ ಮಲಬಾರಿನ ಮೆಟ್ರೊಪೊಲಿಟನರಾದ ಮಾರ್‌ದಿಯೊನೀಸಿಯಸ್ ಗೀವರುಗೀಸ್ ಅಧ್ಯಕ್ಷರಾಗಿರುವ ಕಮಿಟಿಯ ಆಲೋಚನೆಯ ಪ್ರಕಾರವೇ ನಡಿಸಬೇಕು. ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರೇಮದಿಂದ ನಿಮ್ಮಕೂಡೆ ಕೇಳಿಕೊಳ್ಳುವುದೇನೆಂದರೆ – ನಮ್ಮ ಪರಿಶುದ್ಧ ಸಭೆಯು ಅಪೋಸ್ತಲರ ವ ಸತ್ಯ ವಿಶ್ವಾಸದಮೇಲೆ ಬುನಾದಿಯಾಗಿರುವ ಕಾರಣ ಅವರಿಂದ ನೀವು ದೂರ ಹೋಗಬೇಡಿರಿ. ಅಂತಿಯೋಕೆದ ಸಿಂಹಾಸನದಲ್ಲಿ ಅನ್ಯಾಯದ ದುಷ್ಟನೊಬ್ಬನು ಇದ್ದಾನೆಂದು ಭಾವಿಸಿಕೊಂಡು ಸಿಂಹಾಸನಕ್ಕೆ ಎದುರಾಗಿ ನಿಲ್ಲಬೇಡಿರಿ. ನಿಮ್ಮ ಹಿರಿಯರ ಹಾಗೆ ನೀವು ಕೂಡ ವಿಧೇಯರಾಗಿ ನಿಲ್ಲುವಿರೆಂದು ನನಗೆ ನಿಶ್ಚಯವಾಗಿ ತಿಳಿದಿದೆ. ನಾವು ಇಷ್ಟನ್ನು ಹೇಳಿದುದು ನಿಮ್ಮ ತಿಳುವಳಿಕೆಗೆ ಸಾಕಾಗುತ್ತದೆ. ಕಡಿಮೆಯಿಂದಲೇ ಹೆಚ್ಚನ್ನು ತಿಳಿಯುವಿರಿ.

ಯೇಸುಕ್ರಿಸ್ತನು ಸಿಯೋನಿನಿಂದ ಆಶೀರ್ವದಿಸಿದ ಹಾಗೆ ನಿಮ್ಮೆಲ್ಲರನ್ನು ನಾವು ನಮ್ಮ ಬಲಕೈಯಿಂದ ಆಶೀರ್ವದಿಸುತ್ತೇವೆ. ದೇವರು ನಿಮ್ಮ ತಪ್ಪುಗಳನ್ನು ಕ್ಷಮಿಸಲಿ. ನಿಮ್ಮಲ್ಲಿ ಮೃತಪಟ್ಟವರಿಗೆ ನಿತ್ಯ ಜೀವವು ದೊರಕಲಿ. ದೇವರು ತನ್ನ ಬಲಗಡೆಯಲ್ಲಿರುವವರಿಗೆ ನಿತ್ಯ ಜೀವವನ್ನು ಅನುಭವಿಸಿ ಎಂದು ಹೇಳಿದ ಪ್ರಕಾರ ನಿಮಗೂ ಮೃತಪಟ್ಟವರಿಗೂ ಹೇಳಲಿ. ಸಂತ ಮರಿಯಳ, ಎಲ್ಲಾ ಭಕ್ತರ, ಅಪೋಸ್ತಲರ ಮತ್ತು ಇಂಡಿಯದ ಅಪೋಸ್ತಲನಾದ ಸಂತ ತೋಮ ಮೊದಲಾದವರ ಪ್ರಾರ್ಥನೆಗಳಿಂದಲೂ ಆಗಲಿ. ಆಮೆನ್.



**ಕೊನೆಯ ಮಾತುಗಳು:—** ಕಥೋಲಿಕ್ ಪಕ್ಷದವರ ನಿಜಸ್ಥಿತಿಯನ್ನು ತಿಳಿಸಿದ್ದಾಯಿತು. ಇನ್ನು ನಮ್ಮ ಬ್ರಹ್ಮಾವರದ ಸೀರಿಯನ್ ಸಭೆಯವರಿಗಾಗಿ ಕೊನೆಯ ಎರಡು ಮಾತುಗಳನ್ನು ಹೇಳಿ ಈ ಚಿಕ್ಕ ಲೇಖನವನ್ನು ಮುಗಿಸುತ್ತೇನೆ.

ಸಾಧಾರಣ 50 ವರ್ಷಗಳ ಹಿಂದೆ ಬ್ರಹ್ಮಾವರದ ಸೀರಿಯನ್ ಸಭೆಯವರು ಕಲ್ಯಾಣಪುರದ ರೋಮನ್ ಕಥೋಲಿಕ್ ಇಗರ್ಜಿಯಲ್ಲಿ ಸಮಾಧಾನ ಇಲ್ಲದೆ ಬ್ರಹ್ಮಾವರಕ್ಕೆ ಬಂದು ಒಂದು ಇಗರ್ಜಿಯನ್ನು ಸ್ಥಾಪಿಸಿ, ಇಲ್ಲಿಯೇ ನೆಲೆಸಿದರು. ಇಲ್ಲಿಯ ಇಗರ್ಜಿಯನ್ನು ಸ್ಥಾಪಿಸಲು ಪಟ್ಟಂಥ ಶ್ರಮ-ಕಷ್ಟ-ನಷ್ಟಗಳು ಇಲ್ಲಿನ ಪ್ರಾಯಸ್ಥರಿಗೆ ತಿಳಿದಿವೆ. ಈ ಸಮಯದಲ್ಲಿ ಅಬ್ದುಲ್ಲರು ಮಲಬಾರಿಗೆ ಬಂದರು. ಪತ್ರಿಯಾರ್ಕರು ಮಲಬಾರಿಗೆ ಬಂದರೆಂಬ ವಾರ್ತೆ ಕೇಳಿ ಇಲ್ಲಿಯ ಇಗರ್ಜಿಯ ಸ್ಥಾಪಕರಾದ ಬಿಶೋಪ ಆಲ್ವಾರೀಸರೂ, ಫಾದರ್ ನೊರೊಂಞಾರೂ ಇನ್ನಿತರರೂ ಅಬ್ದುಲ್ಲರ ಭೇಟಿ ಮಾಡಲು ಹೋದರು. ಅಬ್ದುಲ್ಲರು ಬ್ರಹ್ಮಾವರಕ್ಕೆ ಬರುತ್ತೇನೆಂದು ಹೇಳಿದ್ದರೂ ಅವರ ಮಾತಿನ ಪ್ರಕಾರ ಅವರು ನಡೆಯಲಿಲ್ಲ. ಅಂತೂ ಅಬ್ದುಲ್ಲರು ಮಲಬಾರಿನ ಸೀರಿಯನ್ ಸಭೆಯಲ್ಲಿ ಒಡಕನ್ನು ಉಂಟುಮಾಡಿದರು. ಬಿಶೋಪ್ ಆಲ್ವಾರೀಸರು ಮಾರ್ ದಿಯೋನೀಸಿಯಸ್ ಬಿಶೋಪರಿಗೆ ಸಹಾಯವನ್ನು ಮಾಡುತ್ತಿದ್ದರು. ಈ ಸಮಯದಲ್ಲಿ ಅಬ್ದುಲ್ಲರು ಮಾರ್ ಆಲ್ವಾರೀಸರಿಗೆ ತನ್ನ ದಿಯೋಸೇಜಿಗೆ ಹೋಗಲು ಹೇಳಿದಾಗ ಅವರು ಹೋಗಲಿಲ್ಲ. ಅದಕ್ಕಾಗಿ ಅವರು ಮಾರ್ ಆಲ್ವಾರೀಸರನ್ನು ಬಹಿಷ್ಕರಿಸಿದರು. ಈ ಸಮಯದಲ್ಲಿ ಬ್ರಹ್ಮಾವರ ಸೀರಿಯನ್ ಇಗರ್ಜಿಯು ಬಹಳ ಕಷ್ಟದಲ್ಲಿದ್ದಿತು. ಮಾರ್ ದಿಯೋನಿಸಿಯಸ್ ಬಿಶೋಪರು ಇಲ್ಲಿಯ ಕಷ್ಟಗಳನ್ನು ತಿಳಿದುಕೊಂಡು ಇಲ್ಲಿಯ ಜನರ ಅಪೇಕ್ಷೆ ಮೇರೆಗೆ ರೆವೆರೆಂಡ್ ಫಾದರ್ ಕೋಶಿಯವರನ್ನು ಬಿಶೋಪ್ ಆಲ್ವಾರೀಸರೊಡನೆ ಕಳುಹಿಸಿದರು. ಇಲ್ಲಿಯ ಇಗರ್ಜಿಯು ತಕ್ಕ ಸ್ಥಿತಿಗೆ ಬಂದ ನಂತರ ಬಿಶೋಪ್ ಆಲ್ವಾರೀಸರು ಗೋವೆಗೆ ತೆರಳಿದರು. ಬಿಶೋಪ್ ಆಲ್ವಾರೀಸರು ಗೋವೆಯಲ್ಲಿದ್ದರೂ ಇವರು ಮಾರ್ ದಿಯೋನಿಸಿಯರಿಗೆ ತುಂಬಾ ಸಹಾಯಮಾಡುತ್ತಿದ್ದರು. ಮಾರ್ ಆಲ್ವಾರೀಸರ ಮರಣದ ನಂತರ ಅವರ ಸ್ಥಾನಕ್ಕೆ ಬೇಡವಾದ ಸಾಮಾನುಗಳನ್ನು ಮಾರ್ ದಿಯೋನಿಸಿಯಸ್ ಬಿಶೋಪರಿಗೆ ಕೊಟ್ಟರು. ಮಾರ್ ದಿಯೋನಿಸಿಯಸ್ ಬಿಶೋಪರು ಬ್ರಹ್ಮಾವರಕ್ಕೆ ಬಂದು ಇಲ್ಲಿಯ ಇಗರ್ಜಿಯನ್ನು ಸಂದರ್ಶಿಸಿದರು. ಇವರಿಗೂ ನಮ್ಮ ಇಗರ್ಜಿಗೂ ಪತ್ರವ್ಯವಹಾರಗಳು ನಡೆಯುತ್ತಾ ಇದ್ದುವು. ನಮ್ಮ ಬ್ರಹ್ಮಾವರದ ಸೀರಿಯನ್ ಸಭೆಯವರು ತಮಗೆ ಪೂಜೆ ವಗೈರೆ ಲತೀನ್ ಭಾಷೆಯಲ್ಲಿಯೇ ಆಗಬೇಕೆಂದು ಬರೆದಿದ್ದರು. ಮಾರ್ ದಿಯೋನಿಸಿಯಸ್ ಬಿಶೋಪರು ತಮ್ಮ ಒಪ್ಪಿಗೆಯನ್ನು ಪತ್ರಮೂಲಕ ತಿಳಿಸಿದರು. ಆ ಪತ್ರಗಳು ಈಗಲೂ ನಮ್ಮ ಹತ್ತಿರ ಇವೆ. ಕೆಲವು ವರ್ಷಗಳ ನಂತರ ಮಾರ್ ಇವನಿಯಸ್ ಬಿಶೋಪರು ಬಂದರು. ಅನಂತರ ಕಥೋಲಿಕೋಸ್ ಬಿಶೋಪರೇ ಬ್ರಹ್ಮಾವರಕ್ಕೆ ಬಂದರು. ಅನಂತರ ಮಾರ್ ಸೆವೇರಿಯಸ್ ಬಿಶೋಪರು ಕೂಡ ಬ್ರಹ್ಮಾವರಕ್ಕೆ ಬಂದರು. ಈ ಎಲ್ಲಾ ಬಿಶೋಪರುಗಳನ್ನು ಎಷ್ಟೋ

ವಿಜೃಂಭಣೆಯಿಂದಲೂ ವೈಭವಗಳಿಂದಲೂ ಸ್ವೀಕರಿಸಿದರೆಂಬುವುದು ಎಲ್ಲರಿಗೂ ತಿಳಿದಿದೆ. ಇವರೆಲ್ಲರೂ ಇಲ್ಲಿಯ ಲೆಕ್ಕಪತ್ರಗಳೆಲ್ಲವನ್ನು ಪರಿಶೀಲಿಸಿ ತಮ್ಮ ಮೊಹರುಗಳನ್ನು ಹಾಕಿರುತ್ತಾರೆ. ಅವರೆಲ್ಲರೂ ಕಥೋಲಿಕೋಸ್ ಪಕ್ಷದವರೆಂದು ಅವರನ್ನು ಹೊರಪಡಿಸಿದವರು ಯಾರೂ ಇಲ್ಲ. ರೆವೆರೆಂಡ್ ಫಾದರ್ ನೊರೋಂಞಾರಿಗೆ ಮಲಬಾರಿನಲ್ಲಿ ಉಂಟಾದ ಒಡಕಿನ ವಿಷಯ ತಿಳಿದಿದ್ದಿತು.



ರೆವೆರೆಂಡ್ ಫಾದರ್ ಆರ್. ಜಡ್. ನೊರೊಂಞಾರು.

ಬ್ರಹ್ಮಾವರದ ಸೀರಿಯನ್ ಇಗರ್ಜಿಯ ಸ್ಥಾಪಕರು

ಅವರಿಗೆ ಕಥೋಲಿಕೋಸ್ ಪಕ್ಷದಲ್ಲಿ ನಿಲ್ಲಲು ಮನಸ್ಸಿಲ್ಲದಿದ್ದರೆ ಆ ಬಿಶೋಪರುಗಳೆಲ್ಲರನ್ನೂ ಹೇಗೆ ತನ್ನ ಇಗರ್ಜಿಯೊಳಗೆ ಸ್ವೀಕರಿಸಿಕೊಂಡರು?

ಇತ್ತೀಚೆಗೆ ಹೊನ್ನಾವರದ ಇಬ್ಬರು, ಬ್ರದರ್ ಜೋರ್ಜ್ ಮತ್ತು ಬ್ರದರ್ ಜೋನ್ ಎಂಬವರು ರೋಮನ್ ಕಥೋಲಿಕ್ ಮತದಲ್ಲಿ ಸಮಾಧಾನವಿಲ್ಲದೆ ನಮ್ಮ ಪಂಥವನ್ನು ಸೇರಿದರು. ಆದರೆ ನಮ್ಮ ಮತತತ್ವದಲ್ಲಿಯೂ ಕೂಡ ನಿಲ್ಲಲಿಕ್ಕೆ ಮನಸ್ಸಿಲ್ಲದೆ ತಮ್ಮ ಮಹತ್ವಾಕಾಂಕ್ಷೆಗಳ ಪೂರ್ತಿಯಾಗದ್ದರಿಂದ ತಮಗೆ ಇನ್ನೂ ದೊಡ್ಡ ಪದವಿಯು ದೊರೆಯುವುದಿಲ್ಲವೆಂದೆಣಿಸಿ ಪತ್ರಿಯಾರ್ಕ ಪಂಗಡಕ್ಕೆ ಸೇರಿದರು. ಅಲ್ಲಿಯೂ ಕೂಡ ಅವರಿಗೆ ಬೇಕಾದ ದೊಡ್ಡ ಪದವಿಯು ಸಿಗದಿದ್ದರೆ ಇನ್ನಾವ ಮತಕ್ಕೆ ತಿರುಗುವರೆಂದು ತಿಳಿದಿಲ್ಲ.

ನಮ್ಮ ಬ್ರಹ್ಮಾವರದ ಸೀರಿಯನ್ ಸಭೆಯವರು ಈ ವರೆಗೂ ಕಥೋಲಿಕೋಸ್ ಬಿಶೋಪರಿಗೆ ವಿಧೇಯರಾಗಿದ್ದರು.



ಆದರೆ ಇತ್ತೀಚೆಗೆ ಅಧಿಕಾರವನ್ನು ಸಂಪಾದಿಸಬೇಕೆಂದು ಅಪೇಕ್ಷೆಯನ್ನಿಟ್ಟುಕೊಂಡು ಧರ್ಮತ್ಯಾಗಮಾಡಿದವರ ಕೆಲವು ಸುಳ್ಳು ಕಥೆಗಳನ್ನು ಕೇಳಿ ನಮ್ಮಲ್ಲಿ ಕೆಲವರು ಮೋಸಹೋಗಿರುತ್ತಾರೆ. ಈ ಸುಳ್ಳು ಕಥೆಗಳು ಹೆಚ್ಚು ಕಾಲ ಉಳಿಯುವಂಥವುಗಳಲ್ಲ. ಆದುದರಿಂದ ನೀವು ಮೋಸಹೋಗಬೇಡಿರಿ. ಇಲ್ಲಿಯ ಗುರುಗಳು ತಮ್ಮನ್ನು ಕರೆಕೊಂಡು ಬಂದ ಮಾರ್ ಅಲ್ವಾರೀಸರು ಯಾವ ಪಂಥದಲ್ಲಿದ್ದರೋ, ಅದೇ ಪಂಥದಲ್ಲಿ ಇವರು ಕೂಡ ಸ್ಥಿರವಾಗಿ ನಿಂತಿರುವರು. ಅಂತೆಯೇ ಸಾಯುವ ಕಾಲದ ವರೆಗೂ ಅದೇ ಮತದಲ್ಲಿ ಸ್ಥಿರವಾಗಿ ನಿಲ್ಲಬೇಕೆಂಬುದೇ ಅವರ ಸಂಕಲ್ಪ.

ಮಲಬಾರಿನ ಸೀರಿಯನ್ ಸಭೆಯಲ್ಲಿ ಉಂಟಾದ ಒಡಕಿನ ಸಂಬಂಧ ಮಾರ್ ಗೀವರುಗೀಸ್ ದಿಯೋನಿಸಿಯುಸರೂ ತನ್ನ ಕಡೇ ಕಾಲದಲ್ಲಿ ಸಮಾಧಾನವಾಗಬೇಕೆಂಬ ಸದುದ್ದೇಶದಿಂದ ಅಂತಿಯೋಕದ ವರೇಗೆ ಹೋದರು. ಆದರೆ ಅಂತಿಯೋಕದವರು ಸಮಾಧಾನವಾಗಲು ಒಪ್ಪದ ಕಾರಣ ಅಲ್ಲಿಂದ ಹಿಂತಿರುಗಬೇಕಾಯಿತು. ಇನ್ನೊಮ್ಮೆ ಈಗಿನ ಕಥೋಲಿಕೋಸರು ಅದೇ ಉದ್ದೇಶದಿಂದ ಅಂತಿಯೋಕಕ್ಕೆ ಚಿತ್ತೈಸಿದರು. ಆದರೆ ಪ್ರಯೋಜನಕಾರಿಯಾಗಲಿಲ್ಲ. ಇವರಿಬ್ಬರು ಬಿಶೋಪರುಗಳ ಮತ್ತು ಮಲಬಾರಿನ ಸೀರಿಯನ್ ಸಭೆಯವರ ಪ್ರಯತ್ನಗಳಿಂದ ಅಂತಿಯೋಕದ ಸಿಂಹಾಸನದವರೊಟ್ಟಿಗೆ ಸಮಾಧಾನದಿಂದಿರಲು ಇಚ್ಛಿಸುತ್ತಾರೆಂಬುದು ವ್ಯಕ್ತವಾಯಿತು. ಸಭೆಯಲ್ಲಿ ಒಡಕು ಉಂಟಾದಾಗ ಎರಡು ಪಂಗಡದ ಮುಖ್ಯಸ್ಥರು ಸಮಾಧಾನವಾಗಬೇಕೆಂಬ ಉದ್ದೇಶದಿಂದ ಶಾಂತಿಗಾಗಿ ಆಲೋಚಿಸುವುದು ಆವಶ್ಯಕ. ಇದರಿಂದ ಅವರು ಪರಸ್ಪರ ಅಧಿಕಾರ ನಡಿಸಲು ಹೋದರೆಂಬ ಅರ್ಥವಾಗುವುದಿಲ್ಲ. ಮಲಬಾರಿನ ಸೀರಿಯನ್ ಸಭೆಯು ಮೇಲೆ ಅಂತಿಯೋಕದ ಸಿಂಹಾಸನದವರಿಗೆ ಇರುವ ಪ್ರೀತಿಗಿಂತ ಹೆಚ್ಚು ಪ್ರೀತಿಯು ಮಲಬಾರಿನ ಸಭೆಯವರಿಗೆ ಇರುತ್ತದೆಂಬುದನ್ನು ತಿಳಿದುಕೊಳ್ಳಬೇಕು. ಮಲಬಾರಿನ ಸಭೆಯಲ್ಲಿ ಉಂಟಾದ ಒಡಕಿನಿಂದ ಬಂದಂಥಾ ಕಷ್ಟ-ನಷ್ಟ ವಗೈರೆ ದುಃಖಗಳು ಮಲಬಾರಿನ ಸಭೆಯವರಿಗಲ್ಲದೆ ಅಂತಿಯೋಕದವರಿಗಲ್ಲ. ಆದುದರಿಂದಲೇ ಮಲಬಾರಿನ ಸಭೆಯವರು ಸಮಾಧಾನಕ್ಕಾಗಿ ಪ್ರಯತ್ನಿಸುತ್ತಿರುವರು. ಅಂತಿಯೋಕದ ಈಗಿನ ಆಡಳಿತೆಯ ಅಧಿಕಾರಿಗಳ ಮೇಲೆ ಮಲಬಾರಿನ ಸಭೆಯವರಿಗೆ ವಿಶ್ವಾಸವಿಲ್ಲದಿದ್ದರೂ ಅಂತಿಯೋಕದ ಸಿಂಹಾಸನದ ಮೇಲೆ ವಿಶ್ವಾಸ ಇದೆ. ಯಾವುದಾದರೊಂದು ಸಮಯದಲ್ಲಿ ಅಂತಿಯೋಕದ ಸಿಂಹಾಸನದ ಮೇಲೆ ಯೋಗ್ಯ ಜನರು ಬಂದಲ್ಲಿ ಸಮಾಧಾನವಾಗುವುದೆಂಬುದರ ಕುರಿತು ಈ ಚಿಕ್ಕ ಪುಸ್ತಕದಲ್ಲಿ ಬರೆದ ಸಭಾಚರಿತ್ರೆಯನ್ನು ಓದಿನೋಡಿದ್ದಲ್ಲಿ ಸ್ಪಷ್ಟವಾಗಿ ತಿಳಿಯುವುದು.

ಆದುದರಿಂದ ಬ್ರಹ್ಮಾವರ ಸೀರಿಯನ್ ಸಭೆಯವರು ಈ ಮುಂಚೆ ಹೇಗೆ ಕಥೋಲಿಕೋಸರಿಗೆ ವಿಧೇಯರಾಗಿದ್ದರೋ ಅಂತೆಯೇ ಇನ್ನು ಮುಂದೆ ಕೂಡ ವಿಧೇಯರಾಗಿರಬೇಕು.

ಸಭೆಯಲ್ಲಿ ಸಮಾಧಾನವಾಗುವಂತೆ ದೇವರೊಡನೆ ಪ್ರಾರ್ಥಿಸುತ್ತಿರಬೇಕು. ಸತ್ಯದ ಮೇಲಿನ ವಿಶ್ವಾಸವನ್ನು ಎಂದಿಗೂ ತ್ಯಜಿಸಬಾರದು. ತೋಳನು ಕುರಿಯ ವೇಷದಲ್ಲಿ ಬರುವಂತೆ ನಿಮ್ಮನ್ನು ಕೂಡ ವೇಷ ಪಲ್ಲಟಿಸಿಕೊಂಡು ತಾವೇ ಸತ್ಯಾನುಯಾಯಿಗಳೆಂದು ಹೇಳುವವರನ್ನು ನಂಬಬೇಡಿರಿ.

**ಕ್ರಿಸ್ತನಾದ ಯೇಸುವಿನಲ್ಲಿ ನಿಮ್ಮ ವಿಶ್ವಾಸವನ್ನಿಡಿರಿ!!!**

ಉಡುಪಿ "ಪ್ರಭಾಕರ ಮುದ್ರಾಮಂದಿರ"ದಲ್ಲಿ ಪ. ನಾರಾಯಣ ಪ್ರಭುರಿಂದ ಮುದ್ರಿಸಲ್ಪಟ್ಟಿತು.